

ಸ್ಥಾಪನೆ : ೧೮೬೫

ಜೀವನ ಶಿಕ್ಷಣ ಪತ್ರಿಕೆಯ
ಶತಮಾನೋತ್ಸವ ಪೂರ್ವ ಪುಷ್ಪ

ಪುಸ್ತಕ ಪ್ರದರ್ಶನ ೧೯೮೯

ಸಂಸ್ಥಾಪಕರು

ಶ್ರೀ. ಚೆನ್ನಬಸಪ್ಪನವರು
(೧೮೩೩-೧೮೮೧)

ಶತಮಾನೋತ್ಸವ ಪೂರ್ವ ಪುಷ್ಪ
(ಪತ್ರಿಕೆ ...)



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ. ರೋಡರಸ್ತೆ. ಧಾರವಾಡ

351

3६5

1879

ಸಿದ್ಧ[illegible]ಥ ವಾ[illegible] ಮಂದಿರ.
ಮೊರಬ. ಜಿ ಧಾರವಾಡ.

೧೧ ಸಿದ್ಧನಾಥ ವಾಚನ ಮಂದಿರ.
೧೧ ಮೊರಬ. ಜಿ. ಧಾರವಾಡ.

ಗಿಂತ ಬಹಳ ಮೇಲಾದವುಗಳೆಂದು ಹೇಳಬಹುದು.

ದಕ್ಷಿಣದಿಕ್ಕಿನಲ್ಲಿ ಈ ಊರಿಗೆ ಹೊಂದಿ ಶಹಾಪುರ ವೆಂಬದೊಂದು ದೊಡ್ಡ ಗ್ರಾಮವುಂಟು. ಇದು ಸಾಂಗಲಿಯ ಪಟವರ್ಧನರ ವಶದಲ್ಲಿರುತ್ತದೆ.

—o—

The Desai of Kittur.

ಕಿತ್ತೂರದೇಸಾಯಿ.

ಈ ದೇಸಗತಿಯ ಮುಖ್ಯಸ್ಥಾನ ಮೊದಲು ಸಂಪಗಾಂವಿ. ಔರಂಗಜೇಬನು ವಿಜಾಪುರದ ರಾಜ್ಯವನ್ನು ಮುರಿದಾಗ ಸಂಪಗಾಂವಿಯಲ್ಲಿ ಮಲ್ಲಪ್ಪನೆಂಬ ದೇಸಾಯಿ ಯಿದ್ದನು. ಅವನು ಅಲ್ಲಿಯ ಕಿಲ್ಲೇದಾರನಾದ ಅಂಕುಶಖಾನನೆಂಬವನನ್ನು ಕೊಂದು ಕೋಟೆಯನ್ನು ಕೆಡಹಿ ೧೪ ಕರ್ಯಾತಗಳಲ್ಲಿ ತನ್ನ ಸತ್ವವನ್ನು ಹಾಕಿ ಕೊಂಡನು. ಇತ್ತಲಾಗಿ ಮಲ್ಲಸರ್ಜನೆಂಬ ಪ್ರಸಿದ್ಧ ದೇಸಾಯಿಯನ್ನು ಟೀಪುಸುಲತಾನನು ಸೆರೆ ಹಿಡಿಯಲಾಗಿ, ಅವನು ಸೆರೆಯೊಳಗಿಂದ ತಪ್ಪಿಸಿಕೊಂಡು ಬಂದಾಗ ಈ ಪ್ರಾಂತದ ಅಧಿಕಾರಿಗಳಾದ ಪೇಶವೆಯವರ ಸಂಗಡ ಸೆರದು ಐವರ್ಷಗಳವರೆಗೆ ತಂಟೆಯನ್ನು ನಡಿಸಿ ಕಡೆಯಲ್ಲಿ ಅವರಿಂದ ೩೫೦೦೦ ರೂಪಾಯಿ ವಸೂಲು ಆಗುವ ೧೧ ಹಳ್ಳಿಗಳನ್ನು ಪಡಕೊಂಡನು. ತರುವಾಯ ಅವನು ಕೊಲ್ಹಾಪುರದ ಸಂಸ್ಥಾನಕ್ಕೆ ೧೨೫೦೦೦ ರೂಪಾಯಿಗಳನ್ನು ಕಪ್ಪ ಕೊಟ್ಟು, ಆ ಸಂಸ್ಥಾನದ ಸರದಾರನಾದ ರತ್ನಾಕರಪಂತ ರಾಜಾಜ್ಞ ಯೆಂಬವನ ಸಹಾಯದಿಂದ ಮೊದಲಿನ ೧೪ ಕರ್ಯಾತುಗಳಲ್ಲಿ ತನ್ನ ರಾಜ್ಯವನ್ನು ಕೂಡ್ರಿಸಿದನು. ಇವನ ಮಗನು

ದ ಶಿವಲಿಂಗರುದ್ರಸರ್ಜನೆಂಬವನು ಯೆಷ್ಟೋ ಸಾರಿ ಇಂಗ್ಲಿಷರಿಗೆ ಬಹಳ ಸಹಾಯಮಾಡಿದ್ದನು. ಇವನಿಗೆ ಮಾಡಿಕೆಯಾಗಿ ಬಾಮಸಾಹೇಬನೆಂದನ್ನುತ್ತಿದ್ದರು. ಇವನು ಮಕ್ಕಳಿಲ್ಲದೆ ಸನ್ ೧೮೨೪ನೇ ವರ್ಷ ಸತ್ತುದರಿಂದ ಅವನ ಸಂಸ್ಥಾನವನ್ನು ಸ್ವಾಧೀನಮಾಡಿಕೊಳ್ಳುವದಕ್ಕೆ ಧಾರವಾಡದ ಕಲೆಕ್ಟರನಾದ ಥ್ಯಾಕರೀಯೆಂಬವನು ಬರಲಾಗಿ, ದೇಸಾಯಿಯ ಹೆಂಡತಿಯಾದ ಚಮ್ಮನೆಂಬವಳು ಇವನ ಸಂಗಡ ಕಾಳಗವನ್ನು ಹೂಡಿದಳು. ಚಿಕ್ಕ ಯುದ್ಧದಲ್ಲಿ ಮೂರು ನಾಲ್ಕು ಜನ ದೊಡ್ಡ ದೊಡ್ಡ ಸಾಹೇಬರು ಬಿದ್ದರು. ಕಡೆಯಲ್ಲಿ ಅದೇ ವರ್ಷದ ಡಿಸೆಂಬರ ತಿಂಗಳಿನಲ್ಲಿ ಇಂಗ್ಲಿಷರು ಕಿತ್ತೂರ ಕೋಟೆಯನ್ನೂ ಪ್ರಾಂತವನ್ನೂ ಪೂರ್ಣವಾಗಿ ಕೈವಶಮಾಡಿಕೊಂಡರು. ಮುಂದೆ ಸನ್ ೧೮೨೯ನೇ ವರ್ಷ ಸಂಗೊಳ್ಳಿ ರಾಯಣ್ಣನೆಂಬವನು ಚಂದಪ್ಪನ ಪಕ್ಷಹಿಡಿದು ದೊಡ್ಡ ತಳ್ಳಿಯನ್ನು ಯೆಬ್ಬಿಸಿದನು. ಕೋಡಾನಪುರದ ಗೌಡನಾದ ಲಿಂಗಪ್ಪನೆಂಬವನೂ, ಸಂಪಗಾವಿಯ ಮಾಮಲೇದಾರನಾದ ಕೃಷ್ಣರಾವಯೆಂಬವನೂ ಕೂಡಿ ರಾಯಣ್ಣನನ್ನು ಹಿಡಿದು ಅವನ ತಳ್ಳಿಯನ್ನು ಮುರಿದರು. ಯೆಲ್ಲ ಕೂಡಿ ೯ ಪುರುಷರು ಈ ದೇಸಗತಿಯನ್ನು ಆಳಿದರು.

Notice.

ನೋಟೀಸು.

ಆಜಂ ಧಾರವಾಡ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—

ತಿಳಿಸುವದೇನಂದರೆ— ಹಾನಗಲ್ ತಾಲೂಕಿನಲ್ಲಿರುವ ಆಲೂರ ಸಾಲೆಯ ೧ನೇ ಅ. ಮಾಸ್ತರನಾದ ಮಹಾರುದ್ರಯ್ಯಾ ಚ

ವೀರಯ್ಯಾ ಇವನು ಕಳೆದ ಅಗಷ್ಟ ತಿಂಗಳಲ್ಲಿ ಸಾಲಿಯ ಆಕ್ಸಿಂಗ ಹೆಡ್ಡಮಾಸ್ತರರ ಕೆಲಸ ನೋಡುವಾಗ್ಗೆ ಶಿಕ್ಷಕನ ಹೆಸರಲೆ ಆಕಾ ಸದ ಪಗಾರ ತಾನು ತೆಗೆದುಕೊಂಡು ಶಿಕ್ಷಕನಿಗೆ ಅದನು ಡದೆ ಕೊಡುತ್ತೇನಂತ ಹೇಳಿ ಅವನ ಕಡಿಂದ ಪಾವತಿ ಸಕೊಂಡು ನಂಮ ಕಡಿಗೆ ಕಳುಹಿಸಿದನು. ಮುಂದೆ ಆ ಶಿಕ್ಷ ನು ಪಗಾರ ಕೊಡಸಬೇಕೆಂತ ಅರ್ಜಿ ಮಾಡಲು ನಾವು ಆ. ಡಿಪೂಟಿಯವರಿಗೆ ಸದರಿ ಬಗ್ಗೆ ಚವಕಸಿ ಮಾಡಿ ರದು ಹೇಳಿದೆವು. ಆ ಪ್ರಕಾರ ಅವರು ಚವಕಸಿ ನಡಿಸಿದ ು. ಆಗ್ಗೆ ನಾನು ಹಣ ಕೊಟ್ಟಿಲ್ಲ ಕೊಡದೆ ಕೊಟ್ಟೆನೆಂದದ್ದು ನ್ನ ಅಪರಾಧವೆಂದು ಸದರಿ ಮಹಾರುದ್ರಯ್ಯನು ಕಬೂಲ ಮಾಡಿದ್ದನು ಆದ ಕಾರಣ ಮೆ. ಎ. ಇ. ಸಾ. ಬಾ. ರವರು ಸದರಿ ಮಹಾರುದ್ರಯ್ಯನನ್ನು ಕೆಲಸದಿಂದ ದೂರಮಾ ಡಿದ್ದಾರೆ. ಈ ನೋಟೀಸನ್ನು ಮಾಸ್ತರರೆಲ್ಲರು ಲಕ್ಷಪೂರ್ವಕ ಓದಬೇಕು. ತಿಳಿಯುವದು ತಾ. ೨೩ನೇ ಜನವರಿ ೧೮೭೯

Chanabassappa B. Dharwar.

ಡಿ. ಎ. ಇ. ಜಿ. ಧಾರವಾಡ.

—o—

DHARWAR TRAINING COLLEGE PROVISIONAL CODE.

ಧಾರವಾಡ ಟ್ರೇನಿಂಗ ಕಾಲೇಜದ ನಿಯಮಗಳು.

ಧಾರವಾಡ ಟ್ರೇನಿಂಗ ಕಾಲೇಜದ ವ್ಯವಸ್ಥೆಗಾಗಿ ಈ ಕೆ ನಿಯಮಗಳು ವಿದ್ಯಾಖಾತೆಯ ಆಫೀಸರರಿಗೆ ಜಾರಿ

ಗುವದಕ್ಕಾಗಿ ಪ್ರಸಿದ್ಧಿಸಲ್ಪಟ್ಟಿವೆ.

ಟಿ. ವಾಡಿಂಗಟನ್, ಕರ್ನ

ಅಕ್ಟಿಂಗ ಡಾಯರೆಕ್ಟರ.

ಪೂಣಿ, ತಾ. ೨ನೇ ಅಕ್ಟಂಬರು ಸನ್ ೧೮೭೮

ಧಾರವಾಡ ಟ್ರೇನಿಂಗ ಕಾಲೇಜಕ್ಕೆ

ಸಂಬಂಧಿಸಿದ ಪ್ರಾಂತಿಕ ನಿಯಮಗಳ ಸಂಗ್ರಹವು.

೧ ದೇಶ ಭಾಷೆಯಲ್ಲಿ ಶಿಕ್ಷಣದ ಕೆಲಸ ನಡಿಸತಕ್ಕಂ ಮಾಸ್ತರರನ್ನೂ ಅಸಿಸ್ಟಾಂಟ ಮಾಸ್ತರರನ್ನೂ ವಿದ್ಯೆ ಕಲಿಸಿ ತಯಾರು ಮಾಡುವದಕ್ಕೋಸ್ಕರವಾಗಿ ಧಾರವಾಡದ ಟ್ರೇನಿಂ ಕಾಲೇಜವು ಇಡಲ್ಪಟ್ಟಿದೆ.

೨ ಶಿಕ್ಷಕಿಯ ಕೆಲಸಕ್ಕಾಗಿ ವಿದ್ಯೆಕಲಿಸಲ್ಪಡುವಂಥ ಕೆಲವು ಜನ ವಿದ್ಯಾರ್ಥಿಗಳಿಗೆ ಸಂಬಳವು ಅಥವಾ ಹೊಟ್ಟೀ ವೆಚ್ಚ ಕ್ಕಾಗಿ ನೇಮಣೂಕು ಕೊಡಲ್ಪಡುವದು. ಈ ಸಂಬಳವು ಮೂ ಡು ವರ್ಷದವರೆಗೆ ನಡಿಯುವದು; ಇದರಲ್ಲಿ ಮೂರು ವರ್ಗ ಗಳು ಮಾಡಲ್ಪಡುವವು.

- ೮ ರೂಪಾಯಿಯ ಸಂಬಳವು, ೩ನೇ ವರ್ಷದ ವಿದ್ಯಾ ರ್ಥಿಗಳಿಗಾಗಿ.
- ೭, ೬ ರೂಪಾಯಿಗಳ ಸಂಬಳಗಳು, ೨ನೇ ವರ್ಷದ ವಿ ದ್ಯಾರ್ಥಿಗಳಿಗಾಗಿ.
- ೬ ರೂಪಾಯಿಯ ಸಂಬಳವು, ೧ನೇ ವರ್ಷದ ವಿದ್ಯಾ ರ್ಥಿಗಳಿಗಾಗಿ.

ಕೆಲವರು ಮಾಫೀ ವಿದ್ಯಾರ್ಥಿ-ಗಳು ಸಹ ತಕ್ಕೊಳ್ಳಲ್ಪಡುವರು.

೩ ಈ ಕಾಲೇಜದಲ್ಲಿ ನಡಿಯುವ ಶಿಕ್ಷಣದಲ್ಲಿ ಮೂ ಬೇರೆ ಬೇರೆ ಕ್ರಮಗಳು ಮಾಡಲ್ಪಡುವವು. ಪ್ರತಿ ಯೊಂ

ವುದ ಕಡೆಯಲ್ಲಿ ಸಮಾಪ್ತಿಯ ಪರೀಕ್ಷೆಯಾಗುವದು.

ಕಾಲೇಜದಲ್ಲಿ ನಿಕೃಷ್ಟ ಪಕ್ಷಕ್ಕೆ ಯೆರಡು ವರ್ಷ ನಿಂ ಕಲಿತ ಹೊರ್ತು ಯಾರಿಗೂ ಮಾಸ್ತರರ ಅಥವಾ ಅಸಿ ೦ಟ ಮಾಸ್ತರರ ಕೆಲಸದ ಲಾಯಖಿಯು ಕೊಡಲ್ಪಡಲಿಕ್ಕಿಲ್ಲ.

೫ ಯೆರಡನೇ ಮೂರನೇ ವರ್ಷಗಳ ಕಡೆಯಲ್ಲಿ ಯ ಕ್ರಮವಾಗಿ ಶಿಕ್ಷಕಿಯ ಕೆಲಸದ ಲಾಯಖಿಯನ್ನು ಸಂಪಾ ದಂಥ ವಿದ್ಯಾರ್ಥಿಗಳ ಹೆಸರುಗಳು ಅವರವರ ಗುಣಗಳ ಮಾಣಂತೆ ವೊಂದು ಪಟ್ಟಿಯಲ್ಲಿ ಬರಿಯಲ್ಪಡುವವು. ಆ ಸರುಗಳಲ್ಲಿ ವೊಂದನೇ ವರ್ಗವೆಂತಲೂ ಯೆರಡನೇ ರ್ಗವೆಂತಲೂ ಯೆರಡು ಭಾಗಗಳು ಮಾಡಲ್ಪಟ್ಟು, ಇವರ ವರ್ಗದವರಿಗೆ ಕೆಳಗೆ ಬರಿದಂತೆ ಕಾಯಿಮ ಸಂಬಳಗಳ ಕ್ಕು ಕೊಡುವಂಥ ಸರ್ಟಿಫಿಕೇಟುಗಳು ಕೊಡಲ್ಪಡುವವು.

ಮೂರನೇ ವರ್ಷದವರು { ೧ನೇ ವರ್ಗ, ೩೫ ರುಪಾಯಿ.
೨ನೇ ವರ್ಗ, ೨೦ ರೂಪಾಯಿ.

ಎರಡನೇ ವರ್ಷದವರು { ೧ನೇ ವರ್ಗ, ೧೫ ರೂಪಾಯಿ.
೨ನೇ ವರ್ಗ, ೧೨ ರೂಪಾಯಿ.

೬ ಪರೀಕ್ಷೆಯಲ್ಲಿ ಇಳಿದ ವಿದ್ಯಾರ್ಥಿಗಳು ಪಟ್ಟಿಯಲ್ಲಿ ಅವ ವರ ಹೆಸರುಗಳ ಕ್ರಮವಿದ್ದಂತೆ ತೆರವಿದ್ದಂಥ ಮಾಸ್ತರರ ಲಸಗಳನ್ನಾಗಲಿ ಅಸಿಸ್ಟಾಂಟ ಮಾಸ್ತರರ ಕೆಲಸಗಳನ್ನಾಗಲಿ ಮ್ಮ ಇಚ್ಛೆಯಂತೆ ಸ್ವೀಕರಿಸಬಹುದು. ಆದರೆ ಸ್ಥಳಗಳು ರವಿದ್ದ ಹೊರ್ತು ಅವರಿಗೆ ಕೆಲಸ ಕೊಡಲಿಕ್ಕೆ ಈ ಖಾತೆ ತು ಅಧಿಕಾರಿಗಳು ಜಬಾಬದಾರರಾಗುವದಿಲ್ಲೆಂದು ಅವರು ತಿಳಿ ತಕ್ಕದ್ದು.

ಕಾಲೇಜದಲ್ಲಿ ವಿದ್ಯಾರ್ಥಿಗಳನ್ನು ತಕ್ಕೊಳ್ಳುವದು.

೭ ಪ್ರತಿವರ್ಷ ನವೆಂಬರ ತಿಂಗಳಿನಲ್ಲಿ ವಿದ್ಯಾರ್ಥಿಗಳನ ಕಾಲೇಜದಲ್ಲಿ ತಕ್ಕೊಳ್ಳುವರು. ಆದರೆ ಈ ಪೂರ್ವದಲ್ಲಿ ಗೊತ್ತಿದ್ದಂತೆ ಪ್ರವೇಶ ಪರೀಕ್ಷೆಯು ಇನ್ನು ಮುಂದೆ ಆಗ ಕ್ಕಿಲ್ಲ. ೬ನೇ ಯತ್ತೆಯ ಮುಲಕೀ ಪರೀಕ್ಷೆಯಲ್ಲಿ ಹಿಂದಿ ೧೮ ತಿಂಗಳುಗಳೊಳಗೆ ಇಳಿದಂಥ ಉಮೇದವಾರರಲ್ಲಿ ಎ ಲ್ಲಕ್ಕೂ ಹೆಚ್ಚಿನ ಗುಣಗಳನ್ನು ಪಡೆದಂಥವರಿಗೆ ತೆರವಿದ್ದಂ ಸಂಬಳಸ್ಥಳಗಳು ಅವರವರ ಗುಣಗಳ ಕ್ರಮದಂತೆ ದೊರೆಯುವ

ಅಭ್ಯಾಸದ ಕ್ರಮಗಳು—೧ನೇ ವರ್ಷ

೮ ಮೊದಲನೇ ವರ್ಷದಲ್ಲಿ ದೇಶಭಾಷೆಯ ಶಾಲೆಗ ೧ನೇ ಯತ್ತೆಯಿಂದ ೬ನೇ ಯತ್ತೆಯ ವರೆಗೆ ಯಾವತ್ತು ವಿಷಯಗಳ ಪುನರಾವರ್ತನವು ಪೂರ್ಣವಾಗಿ ಮಾಡಲ್ಪಡುವದು ಈ ವರ್ಷದ ಕಡೆಯಲ್ಲಿ ೬ನೇ ಯತ್ತೆಯಂತೆಯೂ ಕೆಳ ಬರೆದ ವಿಷಯಗಳಲ್ಲಿಯೂ ಪರೀಕ್ಷೆಯಾಗುವದು.

ಗುಣಗಳು

೧ ಸಂಸ್ಕೃತ ರೂಪಾವಳಿ, ಸಂಧಿನಿಯಮಗಳು, ಮೊದಲನೇ ಪುಸ್ತಕ ಸಂಪೂರ್ಣ ೫೦

೨ ಶಿಕ್ಷಣ ಪದ್ಧತಿಯ ಸಾಧಾರಣ ನಿಯಮಗಳು, ಮತ್ತೂ ಫೌಲರನ ಪುಸ್ತಕದ ಮೊದಲಿನ ೨೯ ಪುಟಗಳಲ್ಲಿ ಇರುವ ನಿಯಮಗಳು.

ಲೇಖೀ ಪರೀಕ್ಷೆ ೫೦

ಬಾಯಿಮಾತಿನ ಪರೀಕ್ಷೆ....... .... ೫೦

೩ ಪದಾರ್ಥವಿಜ್ಞಾನದ ಮೂಲತತ್ವಗಳು ೬ನೇ

ಪುಸ್ತಕದಲ್ಲಿ ಇದ್ದ ಪುಟ್ಟಿಗೆ, ಮತ್ತು
ಕೇರೋಪಂತರ ಪದಾರ್ಥವಿಜ್ಞಾನದ
೭೮ ಪಾಠಗಳಲ್ಲಿ ಇರುವ ವಿಷಯಗಳು........೫೦

೪ ಕಸರತ್ತು.... ....೨೫

೫ ಚಿತ್ರ ತೆಗಿಯುವ ವಿದ್ಯದ ಮೂಲತತ್ವಗಳು.... ....೫೦

೬ ದೇಶಭಾಷೆಯ ಶಾಲೆಗಳ ೧ನೇ ಯತ್ತೆಯಿಂದ ೫ನೇ ಯತ್ತೆಯ ವರೆಗೆ ಯಾವತ್ತು ವಿಷಯಗಳನ್ನು ಕಲಿಸ ತಕ್ಕಂಥ ಮಾಸ್ತರರನ್ನು ತಯಾರು ಮಾಡುವದಕ್ಕಾಗಿ ೨ನೇ ವರ್ಷದ ಅಭ್ಯಾಸ ಕ್ರಮವು ನೇಮಿಸಲ್ಪಟ್ಟಿದೆ. ಈ ವರ್ಷದ ಕಡೆಯಲ್ಲಿ ೭ನೇ ಯತ್ತೆಯ ವಿಷಯಗಳಲ್ಲದೆ ಕೆಳಗಿನ ವಿಷಯಗಳಲ್ಲಿ ಸಹ ಪರೀಕ್ಷೆಯು ತಕ್ಕೊಳ್ಳಲ್ಪಡುವದು—

ಗುಣಗಳು

೧ ಸಿದ್ಧಾಂತ, ೨ನೇ ಬುಕ್ಕು { ೭ನೇ ಯತ್ತೆಯ ೧ನೇ ಸದರಿನ ಗುಣಗಳ ವಿಭಾಗಗಳು—
ಅಂಕಗಣಿತ ೭೫
ಸಿದ್ಧಾಂತ ೫೦
ಜಮಾಖರ್ಚು ೨೫

೨ ಸಂಸ್ಕೃತ, ವಾಲ್ಮೀಕಿ ರಾಮಾಯಣದ
೨೫೦ ಶ್ಲೋಕಗಳು, ಮತ್ತು ೨ನೇ
ಪುಸ್ತಕದ (ಕನ್ನಡ ಭಾಷಾಂತರ)
ಮೊದಲಿನ ೧೨ ಪಾಠಗಳು ... .೫೦

೩ ಶಾಲಾಪದ್ಧತಿ, ವಿದ್ಯಾಖಾತೆಯ ಸಂಬಂಧ

೩ ನಮೂನೆಗಳು,-ರಿಪೋರ್ಟುಗಳು, ಶಿಕ್ಷಣ ಪದ್ಧತಿ, ಫೌಲರವ ಪುಸ್ತಕದೊಳಗಿನ ನಿಯಮಗಳೆಲ್ಲ

ಲೇಖೀಪರೀಕ್ಷೆ.... ....೧೦೦

ಬಾಯಿಮಾತಿನ ಪರೀಕ್ಷೆ.... ... ...೧೦೦

೪ ಪ್ರಾಕೃತಿಕ ಭೂಗೋಲ ಮೂಲತತ್ವಗಳು, ಭುಜಂಗರಾಯರ ಪ್ರಾಕೃತಿಕ ಭೂಗೋಲದ ಮೊದಲಿನ ೨೬೨ ಪುಟಗಳಲ್ಲಿ ಇದ್ದಂತೆ.... ....೫೦

೫ ಪದಾರ್ಥವಿಜ್ಞಾನ, ಪ್ರವಾಹಿ, ವಾಯುರೂಪ ಪದಾರ್ಥಗಳ ಧರ್ಮಗಳು, ಕೇರೋಪಾಂತರ ಪದಾರ್ಥ ವಿಜ್ಞಾನದ ೧೦೨ನೇ ಪುಟದ ವರೆಗೆ ... .೫೦

೬ ಕನ್ನಡ ವಾಕ್ಯಗ್ರಂಥಗಳ ಹೊರತು ಜೈಮಿನಿಯೊಳಗಿನ ೧೫೦ ಪದ್ಯಗಳು ಮತ್ತು ವ್ಯಾಕರಣ.... ....೧೦೦

೭ ಚಿತ್ರವಿದ್ಯೆ—ಫ್ರೀಹ್ಯಾಂಡ, ಪರಸ್ಪೆಕ್ಟಿವ, ಪ್ಲಾನಗಳು ನಕಾಶಗಳು.... ....೫೦

೮ ಕಸರತ್ತು.... ....೨೫

೩ನೇ ವರ್ಷದ ಅಭ್ಯಾಸಕ್ರಮ.

೧೦ ದೇಶಭಾಷೆಯ ಶಾಲೆಗಳ ಆರೂ ಇಯತ್ತೆಗಳನ್ನು ದಕ್ಷತೆಯಿಂದ ಕಲಿಸತಕ್ಕಂಥ ಮಾಸ್ತರರನ್ನು ತಯಾರು ಮಾಡುವದಕ್ಕಾಗಿ ಮೂರನೇ ವರ್ಷದ ಅಭ್ಯಾಸಕ್ರಮವು ನೇಮಿಸಲ್ಪಟ್ಟಿದೆ.

ಈ ವರ್ಷದ ಕಡೆಯಲ್ಲಿ ಕೆಳಗಿನ ವಿಷಯಗಳಲ್ಲಿ ಪರೀ

ವಾಗುವದು.

			ಗುಣಗಳು
೧ ಗಣಿತ	ಅಂಕಗಣಿತ ಸಂಪೂರ್ಣ....		.....೫೦
	ಬೀಜಗಣಿತ ವರ್ಗಸಮೀಕರಣದ ವರೆಗೆ....		....೫೦
	ಸಿದ್ಧಾಂತ ೬ ಪುಸ್ತಕಗಳು....		೫೦
೨ ದೇಶಭಾಷೆಸಹಿತ	ರಾಜಶೇಖರ ೨ನೇಆಶ್ವಾಸ		
	ಜೈಮಿನಿ ೫೦ ಶ್ಲೋಕಗಳು	೧೦೦	
	ರಾಮಾಯಣ ೧೫೦ಶ್ಲೋ.		

ಇದಲ್ಲದೆ ಕನ್ನಡ ವ್ಯಾಕರಣ, ಕವಿತಾ ಪದ್ಧತಿ, ನಿಬಂಧ ಬರಿಯೋಣ ಇವುಗಳಲ್ಲಿ ಪೂರ್ಣಜ್ಞಾನವಿರಬೇಕು.

೩ ಇತಿಹಾಸ— ಹಿಂದುಸ್ಥಾನದ ಇತಿಹಾಸ, ಹಿಂದುಸ್ಥಾನದಲ್ಲಿಯೂ ಅದರ ನೆರೆದೇಶಗಳಲ್ಲಿಯೂ ನಡಿಯುವ ಕಾರಭಾರ, ರಾಜಕೀಯ ಪದ್ಧತಿಗಳ ವಿವರ.... ....೭೫

೪ ಭೂಗೋಲ— ಪ್ರಾಕೃತಿಕ, ರಾಜಕೀಯ ಭೂಗೋಲಗಳ ಸಾಧಾರಣ ಜ್ಞಾನ,— ಪತಿಯಖಂಡದ ಯಾವದೊಂದು ಭಾಗದ ನಕಾಶವನ್ನು ಅಕ್ಷಾಂಶ ರೇಖಾಂಶ ಸಹಿತವಾಗಿ ಸ್ಮರಣದಿಂದ ತೆಗಿಯುವದು ೭೫

೫ ಪದಾರ್ಥ ವಿಜ್ಞಾನ, ಜ್ಯೋತಿಷದ ಮೂಲತತ್ವಗಳು— ಕೇರೋಪಂತರ ಪದಾರ್ಥವಿಜ್ಞಾನದ ಮೊದಲಿನ ೨೫ ಪಾಠಗ

ಶಕ್ತಿ ಇದ್ದಂತೆಯೂ, ಭೂಜಂಗರಾಯರ ಪ್ರಾಕೃತಿಕ ಭೂಗೋಲದಲ್ಲಿ ಇದ್ದಂತೆಯೂ.... ....೧

೬ ಸಂಸ್ಕೃತ— ರಘುವಂಶದ ೩ ಸರ್ಗಗಳು, ಮತ್ತು ೨ನೇ ಪುಸ್ತಕದ ೨೦ ಪಾಠಗಳು. ೩

೭ ಶಾಲಾಪದ್ಧತಿಯೂ ಶಿಕ್ಷಣ ಪದ್ಧತಿಯೂ ಮಿಂಟಾಟಿನ ನಮೂನೆ ರಿಪೋರ್ಟುಗಳ ಪೂರ್ಣಜ್ಞಾನವು, ಮತ್ತು ಶಿಕ್ಷಣ ಪದ್ಧತಿಯ ವಿಶೇಷ ಜ್ಞಾನವು, ಫ್ರಾಬರನ ಪುಸ್ತಕ ಸಮಗ್ರ

ಲೇಖೀ ಪರೀಕ್ಷೆ.... ... .೧೦

ಬಾಯಿಮಾತಿನ ಪರೀಕ್ಷೆ.... ....೧೦

೮ ಚಿತ್ರವಿದ್ಯೆ ಫ್ರೀಹ್ಯಾಂಡ, ಪರಸ್ಪೆಕ್ಟಿವ, ಪ್ಲಾನ ಎಸ್ಟಿಮೇಟುಗಳು, ಶಾಲಾ ಗೃಹದ ರಚನೆ.... ....೫

೯ ಕಸರತ್ತು.... ... .೨

ಪರೀಕ್ಷೆಗಳು.

ವರ್ಷದೊಳಗೆ ಯೆರಡು ಟರ್ಮುಗಳಂದರೆ ವಿಭಾಗಗಳು ಮಾಡಲ್ಪಟ್ಟಿವೆ. ಮೊದಲನೇ ಟರ್ಮ ಕಾರ್ತೀಕ ಶುದ್ಧ ತ್ರಯೋದಶಿಯಿಂದ ಆರಂಭವಾಗಿ ತಾ. ೨೫ನೇ ಎಪ್ರೀಲಿಗೆ ಮುಗಿಯುತ್ತದೆ. ಎರಡನೇ ಟರ್ಮ ಜೂನ ೧೦ನೇ ತಾರೀಖಿನಿಂದ ಆರಂಭವಾಗಿ ಆಶ್ವಿನ ಶುದ್ಧ ಏಕಾದಶಿಗೆ ಮುಗಿಯುತ್ತದೆ. ಪ್ರತಿ ವರ್ಷ ಮೊದಲನೇ ಟರ್ಮಿನ ಕಡೆಯಲ್ಲಿ ಟರ್ಮಿನಲ್ ಎಗ್ಸಾಮಿನೇಶನ್ ಯೆಂಬ ಪರೀಕ್ಷೆಯಾಗುವದು. ಈ ಪರೀಕ್ಷೆಯ

ಪ್ರಿನ್ಸಿಪಾಲರು. ಇತರ ಮಾಸ್ತರರು ಕೂಡಿ ತಕ್ಕೊಳ್ಳುವರು ಇದೇ ಆ ಮೊದಲನೇ ಟರ್ಮಿನಲ್ಲಿ ನಡಿಸಿದ ಅಭ್ಯಾಸವು ಪರೀಕ್ಷಿಸಲ್ಪಡುವದು. ಈ ಪರೀಕ್ಷೆಯಲ್ಲಿ ಪಾಸ್ ಆಗದಂಥ ಸಂಬಳ ತಕ್ಕೊಳು ವಿದ್ಯಾರ್ಥಿಗಳು ಮೆ ಇನ್ಸ್ಪೆಕ್ಟರವರ ವಿವೇಕಾನುಸಾರವಾಗಿ ತ್ತು ಸಂಬಳವನ್ನು ಕಳಕೊಳ್ಳುವರು.

೧೨ ಪ್ರತಿವರ್ಷ ಯರಡನೇ ಟರ್ಮಿನ ಕಡೆಯಲ್ಲಿ ಸರ್ಟಿ ಟಿನ ಪರೀಕ್ಷೆಯಾಗುವದು. ಈ ಪರೀಕ್ಷೆಯನ್ನು ಮೆ ಡ್ಯುಕೇಶನಲ್ ಇನ್ಸ್ಪೆಕ್ಟರವರು ಪ್ರಿನ್ಸಿಪಾಲರ ಮತ್ತು ಪ್ರೊ ರಾಗಲಿ ಹೆಚ್ಚು ಜನರಾಗಲಿ ಡೆಪ್ಯುಟೀ ಇನ್ಸ್ಪೆಕ್ಟರರ ಸಹಾಯದಿಂದ ತಕ್ಕೊಳ್ಳುವರು. ಎರಡನೇ ಮೂರನೇ ವರ್ಷಗ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಪ್ರಶ್ನಪತ್ರಿಗಳು ಕೊಡಲ್ಪಡುವವು.

೧೩ ಸನ್ ೧೮೭೧ನೇ ವರ್ಷದ ಜನವರಿಯ ೧ನೇ ತಾರೀ ನ ಪೂರ್ವದಲ್ಲಿ ನೌಕರಿಯಲ್ಲಿ ಸೇರಿದಂಥ ಅನ್ಟ್ರೇನ್ಡ ಮಾಸ್ತರರನ್ನೂ ಅಸಿಸ್ಟಾಂಟ ಮಾಸ್ತರರನ್ನೂ ಮೆ. ಇನಸ್ಪೇ ರವರ ಅಪ್ಪಣೆ ಪಡಿದು ಪರೀಕ್ಷೆಯಲ್ಲಿ ತಕ್ಕೊಳ್ಳಬಹುದು. ದರೆ ಸದರೀ ತಾರೀಖಿನ ತರುವಾಯ ನೌಕರಿಯನ್ನು ಪಡಿ ದಂಥ ಮಾಸ್ತರರಾಗಲಿ ಅಸಿಸ್ಟಾಂಟ ಮಾಸ್ತರರಾಗಲಿ ನಿಕೃ ಪಕ್ಷಕ್ಕೆ ಯೆರಡು ವರ್ಷ ಕಾಲೇಜದಲ್ಲಿ ನಿಂತು ಅಭ್ಯಾ ಮಾಡಿದ ಹೊರ್ತು ಅವರನ್ನು ಟ್ರೇನಿಂಗ ಕಾಲೇಜದ ಯಾ ವದೊಂದು ಪರೀಕ್ಷೆಯಲ್ಲಿ ತಕ್ಕೊಳ್ಳಲಾಗದು. ಅಂಥಾ ಮಾ ಸ್ತರರಾಗಲಿ ಅಸಿಸ್ಟಾಂಟ ಮಾಸ್ತರರಾಗಲಿ ತಾವು ಯೆರಡನೇ ವರ್ಗದ ಮುಲಕೀ ಪರೀಕ್ಷೆಯಲ್ಲಿ ಇಳಿದ ಬಗ್ಗೆ ಪ್ರಿನ್ಸಿಪಾಲ ರನ್ನು ಮನಗಾಣಿಸಿದ ಹೊರ್ತು ಅವರನ್ನು ಟ್ರೇನಿಂಗ ಕಾ

ಲೇಜಿನಲ್ಲಿ ತಕ್ಕೊಳ್ಳಲಾಗದು.

೧೪ ಮೊದಲನೇ ವರ್ಷದ ಕಡೆಯಲ್ಲಿ ಆಗುವ ಪರೀಕ್ಷೆಯಲ್ಲಿ ಇಳಿಯುವ ವಿದ್ಯಾರ್ಥಿಗಳನ್ನು ಮೆ. ಇನ್‌ಸ್ಪೆಕ್ಟರವರು ತಮ್ಮ ವಿವೇಕಾನುಸಾರವಾಗಿ ತೆಗಿಯಬಹುದು.

ನೌಕರಿಗಾಗಿ ವರ್ಗೀಕರಣವು

೧೫ ಯೆರಡನೇ ಮೂರನೇ ವರ್ಷಗಳ ವಿದ್ಯಾರ್ಥಿಗಳು ಪಡೆದ ಗುಣಗಳ ಕ್ರಮದಂತೆ ಅವರ ಹೆಸರುಗಳು ಯೆರಡು ಬೇರೆ ಬೇರೆ ಪಟ್ಟಿಗಳಲ್ಲಿ ಬರಿಯಲ್ಪಡುವವು. ೧೦೦ಕ್ಕೆ ೬೦ರಂತೆ ಗುಣಗಳನ್ನು ಪಡೆದವರು ಪ್ರತಿಯೊಂದು ಪಟ್ಟಿಯಲ್ಲಿ ಮೊದಲನೇ ವರ್ಗದವರಾಗುವರು. ೧೦೦ಕ್ಕೆ ೩೩ರಿಂದ ೬೦ರ ವರೆಗೆ ಗುಣಗಳನ್ನು ಪಡೆದವರು ೨ನೇ ವರ್ಗದವರಾಗುವರು. ಈ ಪ್ರಕಾರ ವರ್ಗೀಕರಣದೊಳಗೆ ಬಂದಂಥ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಇಳಿದರೆಂದು ಯೆಣಿಸಲ್ಪಡುವರು. ವರ್ಗೀಕರಣದೊಳಗೆ ಬಾರದಂಥ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಇಳಿಯಲಿಲ್ಲೆಂದು ಯೆಣಿಸಲ್ಪಡುವರು. ಅವರಿಗೆ ಮೆ. ಇನ್‌ಸ್ಪೆಕ್ಟರವರು ತಮ್ಮ ವಿವೇಕಾನುಸಾರವಾಗಿ ಪುನಃ ಅಭ್ಯಾಸ ಮಾಡಲಿಕ್ಕಾಗಲಿ ಕಾಲೇಜಿನಿಂದ ಹೊರಟು ಹೋಗಲಿಕ್ಕಾಗಲಿ ಅಪ್ಪಣೆ ಕೊಡಬಹುದು. ಯಾವದೊಂದು ವಿಷಯದೊಳಗೆ ೧೦೦ರಲ್ಲಿ ೩೦ಕ್ಕಿಂತ ಕಡಿಮೆ ಗುಣಗಳನ್ನು ಪಡೆದಂಥ ವಿದ್ಯಾರ್ಥಿಯನ್ನು ಯಾವ ವರ್ಗದೊಳಗೂ ಸೇರಿಸಲಾಗದು.

ವರ್ಗೀಕೃತರಾದ ವಿದ್ಯಾರ್ಥಿಗಳಿಗೆ ಕೆಳಗೆ ಜೋಡಿಸಿದ ನಮೂನೆಯಂತೆ ೧ನೇ, ೨ನೇ ವರ್ಗಗಳ ಸರ್ಟಿಫಿಕೇಟುಗಳು ಕೊಡಲ್ಪಡುವವು. ಅವುಗಳಿಗೆ ಮೆ. ಇನ್‌ಸ್ಪೆಕ್ಟರವರೂ ಪ್ರಿನ್ಸಿಪಾಲರೂ ಸಹಿ ಮಾಡುವರು. ಆ ವಿದ್ಯಾರ್ಥಿಗಳು ತೆರವಿದ್ದ

...ಗಳನ್ನು ೬ನೇ ನಿಯಮದಂತೆ ತಮ್ಮ ಅಭ್ಯಾಸಾಂಗವಾ ಸ್ವೀಕರಿಸಬಹುದು. ಆದರೆ ೩ನೇ ವರ್ಷದ ವಿದ್ಯಾರ್ಥಿಗಳ ...ಕ್ಷ ಮೊದಲು ನಡಿಸಲ್ಪಡುವದು.

೧೭ ಎರಡನೇ ವರ್ಷದ ಪರೀಕ್ಷೆಯಲ್ಲಿ ಇಳಿದಂಥ ವಿದ್ಯಾರ್ಥಿಗಳಿಗೆ ಮೆ. ಇನ್‌ಸ್ಪೆಕ್ಟರವರು ಅಪ್ಪಣೆ ಕೊಟ್ಟರೆ ಮಾತ್ರ ಅವರು ೩ನೇ ವರ್ಷದ ಅಭ್ಯಾಸಕ್ರಮವನ್ನು ಆರಂ ಮಾಡಬಹುದು. ದೇಶಭಾಷೆಯ ಮೇಲ್ತರದ ಶಾಲಿಗಳ ಮಾಸ್ತರರ ಕೆಲಸವನ್ನು ಪಡೆಯಲಿಕ್ಕೆ ೨ನೇ ವರ್ಷದ ವಿದ್ಯಾರ್ಥಿಗಳಿಗೆ ಯೋಗ್ಯಪಾತ್ರವೂ ಹಕ್ಕು ಇರುವದಿಲ್ಲ.

೧೮ ದಕ್ಷಿಣಭಾಗಕ್ಕಾಗಿ ಹೊಸ ನಿಯಮಗಳು ಮಂಜೂರಾಗುವ ವರೆಗೆ, ಈ ಭಾಗದೊಳಗಿನ ಯಾವತ್ತು ಟ್ರೇನ್ಡ ಮಾಸ್ತರರಿಗೂ ಅಸಿಸ್ಟಾಂಟ ಮಾಸ್ತರರಿಗೂ ಅವರ ಸಂಬಳಗಳೂ ನೇಮಣೂಕುಗಳೂ ಮಧ್ಯಭಾಗದ ಮಾಸ್ತರರಿಗಾಗಿ ಮಾಡಿದ ಸ್ಟ್ಯಾಂಡರ್ಡ ನಿಯಮಗಳ ೯ನೇ ಕಲಮಿನಂತೆ ದೊರೆಯುವವು.

ಕಾಲೇಜದೊಳಗಿನ ರೀತಿ ಮರ್ಯಾದೆಗಳೂ, ಸೂಟಿಗಳೂ, ದಂಡಗಳೂ, ಇತ್ಯಾದಿ.

೧೯ ಈ ವಿಷಯಗಳ ಸಂಬಂಧದಿಂದ ಮೆ. ಡಾಯರೆಕ್ಟರ ...ರತೆಗಳ ಆಗಾಗ್ಗೆ ಮಂಜೂರು ಮಾಡಿದಂಥ ನಿಯಮಗಳು ಟ್ರೇನಿಂಗಕಾಲೇಜದ ನಿಯಮಗಳೆಂದು ಯೋಜಿಸಲ್ಪಡುವವು.

ಸರ್ಟಿಫಿಕೇಟು.

ನಾವು ಸರ್ಟಿಫಿಕೇಟು ಕೊಡುವದೇನೆಂದರೆ, * * * ಇವನು ಧಾರವಾಡ ಟ್ರೇನಿಂಗಕಾಲೇಜದಲ್ಲಿ *ನೇ ವರ್ಷದ ಅಭ್ಯಾಸಕ್ರಮವನ್ನು ಮುಗಿಸಿದರಿಂದ ಸನ್ ೧೮ ನೇ ವರ್ಷದ

* * ತಿಂಗಳಿನಲ್ಲಿ ಸರ್ಟಿಫಿಕೇಟಿನ ಪರೀಕ್ಷೆಯಲ್ಲಿ ಪಾಸಾಗಿ ಉತ್ತೀರ್ಣನಾಗಿದ್ದಾನೆ. ಇವನು ಯಾವತ್ತು ಗುಣಗಳಲ್ಲಿ ೧೦೦ಕ್ಕೆ * ತೆಯೂ, ಪ್ರತಿಯೊಂದು ವಿಷಯದ ಗುಣಗಳಲ್ಲಿ ನಿಕೃಷ್ಟ ಪಕ್ಷಕ್ಕೆ ೧೦೦ರಲ್ಲಿ ೩೦ ಗುಣಗಳನ್ನೂ ಪಡೆದದರಿಂದ ನು * ನೇ ವರ್ಗದೊಳಗೆ ಸೇರಿಸಲ್ಪಟ್ಟಿರುತ್ತಾನೆ; ಮತ್ತು ಪನು ಆ ಕಾರಣದಿಂದ * ರೂಪಾಯಿಗಳಿಗೂ ನೇಮಣೂಕಿ ಹಕ್ಕುದಾರನಾಗಿರುತ್ತಾನೆ.

ಎಜು. ಇನ್ಸ್ಪೆಕ್ಟರ ದಕ್ಷಿಣಭಾ

ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜದ ಧಾರವಾಡ.

ಶಾಲಾಪತ್ರಕವು

ಪುಸ್ತಕ ೧೪ | [ಸಂಚಿಕೆ ೨

ಫೆಬ್ರುವಾರೀ ೧೮೭೯

Educational Intelligence.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು

ರಾಜಾ ಶಿವ ಪ್ರಸಾದಯೆಂಬ ದೊಡ್ಡ ಮನುಷ್ಯನು ಅಲಾಹಾಬಾದಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಉದ್ಯೋಗ ಶಾಲೆಗೆ ೫೦೦೦ ರುಪಾಯಿ ಇನಾಮು ಕೊಟ್ಟರು.

—o—

ಕಲಕತ್ತೆಯಲ್ಲಿ ಗುಲಾಬಚಂದನೆಂಬ ಮಾರವಾಡೀ ಗೃಹಸ್ಥನು ತನ್ನ ಜಾತಿಯವರ ಸಭೆಯನ್ನು ಕೂಡಿಸಿ ಆ ಪೇಟೆಯಲ್ಲಿ ಹಿಂದೂ ಜನರಿಗಾಗಿ ವೊಂದು ದವಾಖಾನೆಯನ್ನು ಸ್ಥಾಪಿಸಬೇಕೆಂದು ಸಭೆಯಲ್ಲಿ ನಿಶ್ಚಯಿಸಿ, ಆ ದವಾಖಾನೆಗಾ ಸದರೀ ಗೃಹಸ್ಥನು ೧೦೦೦೦ ರೂಪಾಯಿ ಕೊಟ್ಟನು. ಈ ಬಗೆಯ ಸಾರ್ವಜನಿಕ ಧರ್ಮ ಕೃತ್ಯವನ್ನು ಮಾರವಾಡೀ ಜನರು ನೆರವೇರಿಸಿ ಕೈ ಬಿಚ್ಚಿ ಹಣಕೊಟ್ಟ ಉದಾಹರಣೆಯು ಇದೇ ಮೊದಲಿನದೆಂದು ಹೇಳ ಬಹುದು.

—o—

ಮದ್ರಾಸ ಇಲಾಖೆಯಲ್ಲಿ ಬಗೆಯಲ್ಲ ಬಗೆ ಬಗೆಯ ಲೋ

ಹಾಗೆಯೇ ಖನಿಗಳು ದೊರೆಯುತ್ತ ನಡೆದವೆ. ಮಾಯಿಸೂರು ಪ್ರಾಂತದಲ್ಲಿ ಚಿನ್ನದ ಖನಿಗಳು ದೊರೆತದ್ದಂತು ಪ್ರಸಿದ್ಧವುಂಟು. ಈಗ ಉತ್ತರ ಅರ್ಕಾಟ ಪ್ರಾಂತದಲ್ಲಿ ಕಬ್ಬಿಣ ಖನಿಗಳು ದೊರೆದ ವಾರ್ತೆಯನ್ನು ಕೇಳುತ್ತೇವೆ. ಕೆಲವು ಇಂಗ್ಲಿಷರು ಕೂಡಿ ಒಂದು ಕಂಪನಿಯನ್ನು ಮಾಡಿಕೊಂಡು ಅರ್ಕಾಟ ಪ್ರಾಂತದ ಜಮೀನದಾರರ ಕಡೆಯಿಂದ ಆ ಖನಿಗಳನ್ನು ಅಗಿಯುವದಕ್ಕೆ ಭೂಮಿಯನ್ನು ಕೌಲು ತಕ್ಕೊಂಡು ಖನಿಯ ಕೆಲಸವನ್ನು ನಡಿಸಿದ್ದಾರೆಂದು ಕೇಳುತ್ತೇವೆ.

—೦—

ಕಿತ್ತಳೇ ಹಣ್ಣಿನಿಂದ ದ್ರಾಕ್ಷಾಸವದಂಥ ಮದ್ಯವು ಹುವು ಸಾಧ್ಯ, ತರವನ್ನು ಹುಡುಕುತ್ತಿದೆಂದು ಕೆಲವೊಬ್ಬ ಗೃಹಸ್ಥನು ಗೊತ್ತು ಹಚ್ಚಿದ್ದಾನೆ. ನಮ್ಮ ದೇಶದಲ್ಲಿ ಈ ಹಣ್ಣುಗಳು ಬಹಳ ಬೆಳೆಯುತ್ತಿರುವ ಕಾರಣ ಈ ಮದ್ಯದ ಕಾರಖಾನೆಗಳು ಬೇಗ ಆರಂಭವಾಗುವವೆಂದು ತೋರುತ್ತದೆ.

—೦—

ಅಮೇರಿಕದಿಂದ ಕೆಲವರು ವಿದ್ವಾಂಸರು ಮುಂಬಯಿಗೆ ಬಂದಿರುತ್ತಾರೆ. ಅವರಲ್ಲಿ ಕೆಲವರು ವಿದ್ವಾಂಸರಾದ ಸ್ತ್ರೀಯರುಂಟು. ಈ ಜನರನ್ನು ಕೆಲವರು ಶಾಸ್ತ್ರೀಯ ಸಂಘದವರು ಈ ದೇಶಕ್ಕೆ ಕಳಿಸಿದ್ದಾರಂತೆ. ಹಿಂದುಸ್ಥಾನದ ಶಾಸ್ತ್ರಗಳ ಜ್ಞಾನವು ಅಮೇರಿಕ ಖಂಡದಲ್ಲಿ ಯಾವ ಉಪಾಯದಿಂದ ಪ್ರಸಾರಿಸುವದೆಂಬದನ್ನು ಕುರಿತು ಮುಂಬಯಿಯೊಳಗಿನ ಆರ್ಯಸಮಾಜದವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವದಕ್ಕಾಗಿ ನಾಲ್ವರು ವಿದ್ವಾಂಸರು ಇಲ್ಲಿಗೆ ಬಂದಿರುತ್ತಾರೆಂದು ಕೇಳುತ್ತೇವೆ. ಮೇಲೆ ಹೇಳಿದ ಸಂಘದವರು ಗಾರುಡೀ ವಿದ್ಯೆಯು ಸ

ಶಾಸ್ತ್ರವನ್ನು ನಂಬುತ್ತಾರೆ. ಅವರಲ್ಲಿ ಕೆಲವರು ಆ ವಿದ್ಯಾ ಮೂಲತತ್ವಗಳನ್ನು ಸಹ ಕಲಿತು ಕೊಂಡಿದ್ದಾರಂತೆ.

—o—

ಬರೇಲಿ, ಸಿಕಂದರಾಬಾದ, ಮುಂತಾದ ಮೂರು ನಾಲ್ಕು ಸ್ಥಳಗಳಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸಿ, ಸೋಲ್ಜರ ಜನರಿಗೆ ತಂತಿ ಟಪಾಲಿನ ವಿದ್ಯವನ್ನು ಕಲಿಸುವ ಕ್ರಮವು ಸರಕಾರದಲ್ಲಿ ನಡೆಯಲೆಂದು ಕೇಳುತ್ತೇವೆ.

—o—

ದಿಲ್ಲಿಯ ಕಾಲೇಜವು ಮುರಿಯಲ್ಪಟ್ಟ ಕಾರಣ, ಅಲ್ಲಿಯ ವಿದ್ಯಾರ್ಥಿಗಳನ್ನು ಲಾಹೋರದ ಕಾಲೇಜಕ್ಕೆ ಕಳಿಸಬೇಕಾಗಿ ಸರಕಾರದವರು ಹುಕುಮು ಮಾಡಿದ್ದಾರೆಂದು ಕೇಳುತ್ತೇವೆ.

—o—

[illegible] ಜೂಲ್ಸ ವೇರನ್ ಎಂಬವನೊಬ್ಬ ಗೃಹಸ್ಥನು ೮೦ ದಿವಸಗಳಲ್ಲಿ ಭೂಮಿಯ ಸುತ್ತುಮುತ್ತು ಪ್ರದಕ್ಷಿಣೆಯನ್ನು ಮಾಡಿದ್ದು ಕೇಳಿ ಬಹುಜನರು ಆಶ್ಚರ್ಯಪಟ್ಟರು. ಆದರೇ ಈಗ ಅಲೆಕ್ಸಾಂಡ್ರಿಯ ಪಟ್ಟಣದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಗಳ ವಕೀಲನಾಗಿದ್ದ ಮಿ. ಷ್ಟೀಯರನೆಂಬವನು ೬೮ ದಿವಸಗಳಲ್ಲಿ ಭೂ ಪ್ರದಕ್ಷಿಣೆಯನ್ನು ಮಾಡಿಕೊಂಡು ಬಂದನು. ಇದರ ವಿವರ ಹ್ಯಾಗಂದರೆ— ಅಲೆಕ್ಸಾಂಡ್ರಿಯದಿಂದ ಫ್ರಾನ್ಸಿಸ್ಕೋ ಪಟ್ಟಣದವರೆಗೆ ೨೦ ದಿವಸ; ಅಲ್ಲಿಂದ ಯುಕೋಹಾಮಾ ಎಂಬಲ್ಲಿಗೆ ೨೦ ದಿವಸ; ಅಲ್ಲಿಂದ ಹಾಂಗಕಾಂಗ ಬಂದರದವರೆಗೆ ೬ ದಿವಸ; ಅಲ್ಲಿಂದ ಸಿಂಹಲದ್ವೀಪದವರೆಗೆ ೧೦ ದಿವಸ; ಅಲ್ಲಿಂದ ಸು

ಯೋಜಿಡವರೆಗೆ ೧೨ ದಿವಸ; ಅಲ್ಲಿಂದ ೭, ೮ ತಾಸಿನೊಳಗೆ ಅವನು ಅಲೆಕ್ಝಾಂಡ್ರಿಯಕ್ಕೆ ಮುಟ್ಟಿದನು.

—o—

ಮದ್ರಾಸದ ಕಾಲೇಜದೊಳಗಿನವನೊಬ್ಬ ವಿದ್ಯಾರ್ಥಿಯು ತನ್ನನ್ನು ಮೇಲಿನ ವರ್ಗದೊಳಗೆ ತಕ್ಕೊಳ್ಳಲಿಲ್ಲೆಂಬ ದುಃಖದಿಂದ ಬಾವಿಯೊಳಗೆ ಹಾರಿಕೊಂಡು ಜೀವ ಕೊಟ್ಟನಂತೆ! ಕಾಲೇಜದ ವಿದ್ಯಾರ್ಥಿಗಳು ಪ್ರೌಢರೂ ಬುದ್ಧಿವಂತರೂ ಇರುತ್ತಾರೆ. ಅಂಥವರೊಳಗಿನವನೊಬ್ಬನ ಕೈಯಿಂದ ಈ ಬಾಲಕಪಣದ ಘೋರಕರ್ಮವಾದದ್ದು ಅತ್ಯಾಶ್ಚರ್ಯವು.

—o—

ಕಲಕತ್ತೆಯಲ್ಲಿ ಶ್ರೀಮತೀ ಕಾದಂಬಿನೀ ಬೋಸ ಯೆಂಬ ತರುಣ ಸ್ತ್ರೀಯು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇ[illegible]ದ ಸುದ್ದಿಯನ್ನು ತಿಳಿಸಿದ್ದೇವಷ್ಟೇ. ಅವಳಿಗಾಗಿ ಬಂಗಾಲದ ಲೆಫ್ಟಿನೆಂಟ ಗವರ್ನರರು ಕಲಕತ್ತೆಯ ಸರಕಾರೀ ಕಾಲೇಜದಲ್ಲಿ ೧೫ ರೂಪಾಯದ್ದೊಂದು ಹೊಸ ಸ್ಕಾಲರಶಿಪ್ಪನ್ನು ಸ್ಥಾಪಿಸಿ, ಆ ಸ್ತ್ರೀಯಳಿಗೆ ಕಾಲೇಜದಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಅನುಕೂಲಿಸಿ ಕೊಟ್ಟಿದ್ದಾರೆಂದು ಇಂಗ್ಲೀಷ ವರ್ತಮಾನ ಪತ್ರಗಳಿಂದ ತಿಳಿಯುತ್ತದೆ.

—o—

ಡೆಕನ್ ಕಾಲೇಜದ ಪ್ರಿನ್ಸಿಪಾಲರು ರಜೆ ತಕ್ಕೊಂಡು ವಿಲಾಯತಿಗೆ ಹೋದದರಿಂದ ರಾ. ಬಾ. ಕೇರೋ ಲಕ್ಷ್ಮಣ ಛತ್ರೇ ಇವರು ಆ ಕಾಲೇಜದ ಪ್ರಿನ್ಸಿಪಾಲರಾದರು. ಇದಲ್ಲದೆ ರಾ. ರಾ. ರಾಮಕೃಷ್ಣ ಗೋಪಾಳ ಭಂಡಾರಕರ, ಮಹಾದೇವ ಮೋರೇಶ್ವರ ಕುಂಟೆ, ಇವರಿಬ್ಬರಿಗೆ ಪೂ

ಮುಂಬಯಿಗಳ ಕಾಲೇಜಗಳಲ್ಲಿ ಮುಖ್ಯ ಪ್ರೊಫೇಸರ ಕೆಲಸಗಳು ದೊರಿದದ್ದು ಕೇಳಿ ಬಹಳ ಸಂತೋಷವಾಗುತ್ತದೆ.

—o—

ಮಿ. ರಸೆಲ್ ಥೊರೆಗಳು ಎಪ್ರಿಲ್ ತಿಂಗಳಲ್ಲಿ ಬರತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ರಾ. ಸಾ. ಪಟವರ್ಧನ ಇವರು ೨,೩ ದಿವಸಗಳಲ್ಲಿ ಧಾರವಾಡಜಿಲ್ಲೆಯೊಳಗೆ ತಿರಗಲಿಕ್ಕೆ ಹೊರಡತಕ್ಕವರಿದ್ದಾರೆ.

—o—

ಬೆಳಗಾವೀ ಜಿಲ್ಲೆಯ ಡಿ. ಇನಸ್ಪೇಕ್ಟರರಾದ ರಾ. ಸಾ. ಪಾಂಡುರಂಗ ವೆಂಕಟೇಶ ಚಿಂತಾಮಣ ಪೇಠಕರ ಇವರು ಈ ತಿಂಗಳಲ್ಲಿ ಮರಣಹೊಂದಿದ್ದು ಕೇಳಿ ಮನಸಿಗೆ ಬಹಳ ವ್ಯಸನವಾಗುತ್ತದೆ. ಇವರು ಪ್ರೌಳಿತಾಗಿ ಬುದ್ಧಿವಂತರಿದ್ದರು. ಇವರಿಗೆ ಕ್ಷಯರೋಗದಿಂದ ಮರಣವೊದಗಿತು.

—o—

ಸದರೀಯವರ ಸ್ಥಳಕ್ಕೆ ಇಲ್ಲಿಯ ಹಾಯಸ್ಕೂಲಿನಲ್ಲಿ ಫಸ್ಟ್ ಅಸಿಸ್ಟಂಟರಾಗಿದ್ದ ರಾ. ರಾ. ರಾಮಜೀ ಬಾಳಾಜೀ ಕಂಡೀಕರ ಇವರನ್ನು ನೇಮಿಸುವಬಗ್ಗೆ ಮಿ. ಇನಸ್ಪೇಕ್ಟರ ಶಿಫಾರಸು ಮಾಡಿದ್ದಾರೆಂದು ಕೇಳುತ್ತೇವೆ.

—o—

ಇಲ್ಲಿಯ ಹಾಯಸ್ಕೂಲಿನ ಕಾಯಿಂಮಾಸ್ತರರಾದ ರಾ. ರಾ. ಚಿತ್ರಲಿ ನಾರಾಯಣ ಪಾಠಕ ಇವರು ಸಧ್ಯಕ್ಕೆ ಬರುವದಿಲ್ಲೆಂದು ಹೇಳುತ್ತಾರೆ.

The Tribes of South Canara.

ದಕ್ಷಿಣ ಕಾನಡಾ ಜಿಲ್ಲೆಯೊಳಗಿನ ಜಾತಿಗಳು.

ಬಕಪದರೂ, ಬೂದರೂ—ತುಳುವ್ರ ನಾಡಿನ ಉತ್ತರ ಭಾಗದಲ್ಲಿ ಈ ಹೆಸರಿನ ಗುಲಾಮರ ಜಾತಿಗಳೆರಡುಂಟು. ಇವರಷ್ಟು ಯಜಮಾನನ ಇಚ್ಛೆಯಂತೆ ನಡೆಯುತ್ತಕ್ಕವರು; ಪರಸರ ಶರೀರ ಸಂಬಂಧಗಳನ್ನು ಮಾಡುವದಿಲ್ಲ. ಇವರಲ್ಲಿ ಮುಖ್ಯಸ್ಥರು ಯಾರು ಇಲ್ಲ; ಜಾತಿಸಂಬಂಧದ ವ್ಯಾಜ್ಯಗಳನ್ನು ಸಲ್ಲರು ಬುದ್ಧಿವಂತರು ಕೂಡಿ ತೀರಿಸುತ್ತಾರೆ. ಇವರು ಕುರಿ, ಮಡೆ, ಕೋಳಿಗಳನ್ನು ಮಾತ್ರ ತಿನ್ನುತ್ತಾರೆ; ಬೇರೆ ಪ್ರಾಣಿಗಳನ್ನು ತಿನ್ನುವದಿಲ್ಲ. ಇವರಿಗೆ ಗುರುವಿಲ್ಲ. ಮನೆಗೊಂದು ಕಲ್ಲು ದೇವತೆಯ ಸ್ಥಾನದಲ್ಲಿ ಇರುತ್ತದೆ; ಅದಕ್ಕೆ ಭಕ್ತಿ ಮಾಡುತ್ತಾರೆ. ವರ್ಷಕ್ಕೆ ಮೂರುಸಾರಿ ಈ ಕಲ್ಲಿಗೆ ಎಣ್ಣೆಯನ್ನು ಎರೆದು ಹೂವುಗಳನ್ನು ಏರಿಸಿ ಪೂಜಿಸುವರು. ಅದಕ್ಕೆ ಕೋಳಿಯನ್ನು ಮಾತ್ರ ಬಲಿ ಕೊಡುವರು. ಯಾರಾದರೂ ಸತ್ತಾಗ ಭೂತಕ್ಕೆ ಬಲಿಯು ಕೊಡದಿದ್ದರೆ ಸತ್ತವರು, ಒಳ್ಳೇ ನಡತೆಯವರಾಗಲಿ, ಕೆಟ್ಟನಡತೆಯವರಾಗಲಿ ಪಿಶಾಚಿಗಳಾಗಿ ಜನರನ್ನು ಕಾಡುವದು ನಿಶ್ಚಯ. ಇವರಲ್ಲಿ ಮೈನೆರೆದನಂತರ ಹೆಂಗಸರ ಲಗ್ನವಾಗುವದು, ಒಬ್ಬನಿಗೆ ಬೇಕಾದಷ್ಟು ಮಂದಿ ಹೆಂಡರಿರಬಹುದು. ಆದರೆ ತಮ್ಮ ಮನಸ್ಸಿಗೆ ಬಂದಾಗ ಲಗ್ನದ ಬಂಧನವನ್ನು ಬಿಡಿಸಿಕೊಳ್ಳುವದಕ್ಕೆ ಗಂಡಸರಿಗೂ ಹೆಂಗಸರಿಗೂ ಸ್ವಾತಂತ್ರ್ಯವುಂಟು. ಹೆಂಗಸರು ತಮಗಿಂತ ಉತ್ತಮ ಜಾತಿಯವರ ಸಂಗಡ ವ್ಯಭಿಚಾರ ಮಾಡಿದ

ವಿಲ್ಲ. ಆದರೆ ತಮ್ಮ ಜಾತಿಯೊಳಗೇ ಮಾಡಿದರೆ, ಆ
ನ್ನು ಗಂಡನು ಬಿಡುವನು. ಆದಾಗ್ಯೂ ಯೆಂಟು ಸಾರಿ
ಕ್ಕೆ ಬೇರೆ ಕಡೆಯಲ್ಲಿ ಅವಳನ್ನು ಚಿಕ್ಕ ಗುಡಿಸಲುಗಳೊಳ
ಗೆ ಹಾಕಿ, ಅದಕ್ಕೆ ಬೆಂಕಿಯಿಟ್ಟು ಸುಟ್ಟು, ಅವಳನ್ನು ಶು
ದ್ಧಿಮಾಡಿದ ನಂತರ ಅವಳು ಪುನಃ ಪತಿವ್ರತೆಯಾಗುವಳು! ಇ
ವರುಗಳ ಜನ್ಮಭಾಷೆ ಕನ್ನಡ.

ಕೊರವರು — ಇವರಾದರೂ ಕೀಳುಜಾತಿಯವರೇ. ಇವರು ಊರಹೊರಗೆ ತಮ್ಮ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಸನಾರು ತೆಗೆದು ಕಗ್ಗ ಹೊಸೆಯುವದೂ, ಬುಟ್ಟಿಗಳನ್ನು ಹೆಣೆಯುವದೂ, ಮಣ್ಣಿನ ಗೋಡೆಗಳನ್ನು ಹಾಕುವದೂ, ಇವರ ಉದ್ಯೋಗಗಳು. ಇವರ ಮೈ ಮೇಲೆ ಬಟ್ಟೆ ಎಂದರೆ ಒಂದು ಲಂಗೋಟಿಮಾತ್ರ; ಹೆಂಗಸರಿಗೆ ಸಹ ಹೆಚ್ಚು ಬಟ್ಟೆ ಇರುವದು ಅಪರೂಪ. ಆದರೆ ಮೈ ಮೇಲೆ ಕಾಮಣಿ ಮುಂತಾದವುಗಳ ಆಭರಣಗಳು ಬೇಕಾದಷ್ಟು. ಇವರು ಮೇಲಿನ ಜಾತಿಗಳಂತೆ ಕುರೂಪಿಗಳಲ್ಲ. ಇವರಿಗೆ ದುಷ್ಟನೂ, ಗುರುವೂ ಇಲ್ಲ. ಇವರಾದರೂ ಭೂತವೆಂದು ಹೆಟ್ಟಿ ತಮ್ಮ ಮನೆಯಲ್ಲಿ ಕೊಂಡ ಕಲ್ಲನ್ನು ಪೂಜಿಸುವ ಅವರೆ ಪಿಶಾಚ ಮುಂತಾದ ಅವಸ್ಥೆಗಳನ್ನು ಇವರು ನಂಬುವರಿಲ್ಲ. ಜ್ವರ ಬಂತೆಂದರೆ ಭೂತಕ್ಕೆ ಬಲಿ ಕೊಡುವರು. ಇವರು ನಾಯಿ, ಹಾವುಗಳು ಹೊರತಾಗಿ ಬೇಕಾದ ಪ್ರಾಣಿಗಳನ್ನೂ, ಕೆಲವು ಜಾತಿಗಳ ಎಂಜಲನ್ನೂ ತಿನ್ನುವರು. ಪುರುಷನಿಗೆ ಬೇಕಾದಷ್ಟುಮಂದಿ ಹೆಂಡರಾಗಬಹುದು, ಹೆಂಗಸರ ಲಗ್ನವನ್ನು ಬೇಕಾದಾಗ ಮಾಡಬಹುದು, ಲಗ್ನಸಂಬಂಧವನ್ನು ಬಿಡಿಸಬಹುದು. ಇವರು ದ್ರಾವಿಡ ವರ್ಣದ ಒಂದು ಶಾಖೆ.

ಭಾಷೆಯನ್ನು ಆಡುವರು. ಕೆಲಕಾಲದ ಹಿಂದೆ ಈ ಜಾತಿ ಯನಾದ ಹುತಿಕನೆಂಬವನು ತುಳುವ ದೇಶವನ್ನು ಆಳಿದನ್

ಮೊಯಿಲರು— ಈ ಜಾತಿಯು ಗುಡಿಗಳ ಸಂಬಂಧ ಉಂಟಾಗಿಧೆ. ಬ್ರಾಹ್ಮಣ ಕ್ಷತ್ರಿಯ ವೈಶ್ಯ, ಶೂದ್ರವೆಂಬ ಲ್ಕು ಜಾತಿಗಳಲ್ಲಿ ಯಾವದೊಂದು ಜಾತಿಯು ಹೆಂಗಸು ಗಂಡನಿಗೆ ಬೇಸರ ಪಟ್ಟರೆ, ಅಥವಾ ಲಗ್ನ ಮಾಡಿಕೊಳ್ಳಲಾರದ ವಿಧವೆ ಇದ್ದರೆ, ಅವಳು ಹಿಂದು ಗುಡಿಯೊಳಗೆ ಹೋಗಿ ರವುಂಡೆ ಹಾಕಿದ ಅಕ್ಕಿಯನ್ನು ತಿನ್ನುತ್ತಾಳೆ; ಅಂದರೆ ವಳು ಆ ಗುಡಿಯನ್ನು ಶೇರಿದಹಾಗಾಯಿತು. ಆ ನಂ ಅವಳು ಆ ಗುಡಿಯಲ್ಲಿ, ಅಥವಾ ಹೊರಗೆ ತನಗೆ ಬೆ ದಲ್ಲಿ ನಿಲ್ಲಬಹುದು. ಈ ಹೆಂಗಸರು ತಮ್ಮ ಮನಸ್ಸಿಗೆ ದವರ ಸಂಗಡ ಸ್ನೇಹಮಾಡುತ್ತಾರೆ. ಗುಡಿಯಲ್ಲಿ ನಿಂತ ಗೆ ಆ ದೇವಸ್ಥಾನದ ಆದಾಯದೊಳಗಿಂದ ಸ್ವಲ್ಪ ಹ ಗೆ ದೊರಕುತ್ತದೆ. ಇವರು ಅಲ್ಲಿ ಊಡುಗುವದೂ, ಸಾ ವದೂ ಮೊದಲಾದ ಕೆಲಸಗಳನು ಮಾಡತಕ್ಕವರು. ಈ ಧವಾಗಿ ಗುಡಿಯಶೇರಿಧ ಹೆಂಗಸರ ಹೊಟ್ಟೆಲ ಹುಟ್ಟಿದವ ಮೊಯಿಲರು. ಇವರ ಹೆಣ್ಣುಮಕ್ಕಳು ಲಗ್ನ ಮಾಡಿಕೊಳ್ಳ ಬ ದು; ಅಥವಾ ತಂಮ ತಾಯಂದಿರಂತೆ ಇರಬಹುದು. ಗಂ ಮಕ್ಕಳು ತಂಮ ತಾಯಿಗಳ ಮೊದಲಿನ ಜಾತಿಯ ನಡ ನ ವಳಿಗಳನ್ನು ಅನುಸರಿಸುವರು. ಯೆಷ್ಟೋ ಜನರು ಹೊಲ ನೆ ಮುಂತಾದ ಉದ್ಯೋಗಗಳನ್ನು ಮಾಡಿ ಹೊಟ್ಟೆಯ ತು ಕೊಳ್ಳುವರು. ಇವರ ಲಗ್ನಗಳು ಇವರ ಜಾತಿಯವರ ಜಾ ಯೊಳಗೇ ಆಗುವದು ವಿಶೇಷ. ಆದರೂ ಬಿಮ್ಮೊತ್ಮ್ಯ ಮೊ ತಿಯವರು ಸಹ ಇವರ ಸಂಗಡ ಶರೀರಸಂಬಂಧ ಮಾ

ಬ್ರಾಹ್ಮಣರ ಹೆಂಗಸರ ಹೊಟ್ಟೆಲಿ ಹುಟ್ಟಿದವರು ಬ್ರಾಹ್ಮಣರೇ ಎಂಬ ಅಭಿಮಾನದಿಂದ ನಡೆಯುವರು; ಬ್ರಾಹ್ಮಣರು ಇವರನ್ನು ಬಹಳ ಧಿಕ್ಕರಿಸು ವ್ವಲರಿಗೆ ಸ್ಥಾನಿಕರೆಂಬ ಇನ್ನೊಂದು ಹೆಸರುಂಟು.

——— ಮುಂದಕ್ಕೆ ಸಾಗುವದು.

Notices.

ನೋಟಿಸು

ದಕ್ಷಿಣ ಭಾಗದೊಳಗಿನ ಯಾವತ್ತೂ ಸರಕಾರಿ ಕನ್ನಡ ಹಾಗು ಮರಾಠಿ ಸಾಲಿಗಳ ಹೆಡ್ಮಾಸ್ತರರಿಗೆ— ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಇವರ ಕಡೆಯಿಂದ ತಿಳಿಸುವದೇನಂದರೆ — ಅನೇಕ ಮಾಸ್ತರರು ತಮ್ಮ ಸಾಲಿಗಳೊಳಗಿನ ವಿದ್ಯಾರ್ಥಿಯರ ಅಭ್ಯಾಸವನ್ನು ಮನಸಿಗೆ ಬಂತೆ ನಡಿಸುತ್ತಾರೆ. ನಿಯಮದ ಕಡೆಗೆ ಲಕ್ಷ್ಯ ಕೊಡುವದಿಲ್ಲ. ಆದ್ದರಿಂದ ಹುಡುಗರ ಅಭ್ಯಾಸವು ಹ್ಯಾಗೆ ಆಗತಕ್ಕದ್ದೋ ಹಾಗೆ ಆಗುವದಿಲ್ಲ. ಕಾರಣ ಯಾವತ್ತೂ ಮಾಸ್ತರರು ಕೆಳಗೆ ಬರೆದ ನಿಯಮಗಳಂತೆ ಅಭ್ಯಾಸನಡಿಸುವದ್ದು.

೧ ಮೊದಲನೇ ಎತ್ತೆ ಹಿಡಿದು ಕ್ರಮೇಣ ಮುಂದೇ ಪ್ರಕಾರ ಯಾವತ್ತು ಎತ್ತೆಗಳಲ್ಲಿ ವರ್ಗಗಳು ಇರತಕ್ಕೇಬೇಕು. ಮತ್ತು ಪ್ರತಿ ಒಂದು ವರ್ಗದಲ್ಲಿ ಹಾಜಿರ ಹುಡುಗರ ಸಂಖ್ಯ ೫ ರ ಕಿಂತ ಕಡಿಮಿ ಇರಕೂಡದು

೨ ಬ್ರಾಂಚ ಸಾಲಿಗಳಲ್ಲಿ ಹಾಗು ಸಣ್ಣ ಸಣ್ಣ ಹಳ್ಳಿಗಳೊಳಗಿನ ಸಾಲಿಗಳಲ್ಲಿ ೪ ನೇ ಎತ್ತೆಕಿಂತಲು ಹೆಚ್ಚಿಗೆ ಅಭ್ಯಾಸ ನಡಿಸ ಬಾರದು.

೩ ಯಾವ ಟ್ರೇನಿಂಗ ಮಾಸ್ತರನ ಬಳಿಯಲ್ಲಿ ೧೨ ಅ
೧೫ ರೂಪಾಯಿನ ಟ್ರೇನಿಂಗ ಕಾಲೇಜಿನ ಸರ್ಟಿ
ಟು ಇದ್ದೀತು ಆತನು ೪ ನೇ ಯತ್ತೆಯ ಕಿಂತಲ
ಹೆಚ್ಚು ಕಲಿಸುವದಕ್ಕೆ ಪ್ರಯತ್ನ ಮಾಡ ಬಾರದು.

೪ ಯಾವ ಟ್ರೇನಿಂಗ ಮಾಸ್ತರನ ಹತ್ತಿರ ೨೦ ಅ
೨೫ ರೂಪಾಯಿಯ ಸರ್ಟಿಫಿಕೇಟು ಇದ್ದೀತು
ನು ಆರೂ ಯತ್ತೆಗಳನ್ನು ಕಲಿಸಲಿಕ್ಕೆ ಅಡ್ಡಿಯಿ
ಆದರೆ ಯಾವತ್ತು ಯತ್ತೆಗಳಲ್ಲಿ ವರ್ಗಗಳಲ್ಲಿ
ಅಥವಾ ಪ್ರತಿಯೊಂದು ವರ್ಗದಲ್ಲಿ ೫ ಕ್ಕೂ ಹ
ಹಾಜರ ಇಲ್ಲದಿದ್ದರೆ ಆತನ ವ್ಯವಸ್ಥೆ ಹಾಳಾಗು
ಲಿಸ ಬಹುದಾದಕ್ಕೆ ಸ್ಥಿತಿಯು ನೆಟ್ಟಗಿಲ್ಲದಂತಾ
ಯು ಲಾಯಿತು, ಮತ್ತು ಅವನು ಕಾಲಕ್ಕೆ ಆ
ಸರ್ಟಿಫಿಕೇಟಿನ ಯೋಗ್ಯತೆಯನ್ನು ಕಡಿಮೆ ಮಾ
ಡಲಾಯಿತು.

೫ ಯಾವತ್ತು ತಾಲೂಕ ಸ್ಥಳಗಳಲ್ಲಿ ಆರೂ ಯತ್ತೆ
ಗಳನ್ನು ಕಲಿಸಲಿಕ್ಕೆ ಅಪ್ಪಣೆ ಯುಂಟು, ಮತ್ತು
ಲೋಕಸಂಖ್ಯೆಗನು ಯಾವದನ್ನು ದೊಡ್ಡ ದೊಡ್ಡ ಗ್ರಾ
ಮಗಳಲ್ಲಿ, ಯಾವ ಗ್ರಾಮದಲ್ಲಿ ಹುಡುಗರ ಹಾಜರಿ
ರಾಸರಿ ೫೦ರ ಕಿಂತ ಹೆಚ್ಚು ಇದ್ದೀತು, ಮತ್ತು
ಲ್ಲಿ ೨೦ ಅಥವಾ ೨೫ ರೂಪಾಯಿಯ ಸರ್ಟಿಫಿ
ಕೇಟುಳ್ಳ ಮಾಸ್ತರರಾಗಲಿ ಅಥವಾ ಹಳೇಜನರೊಳ
ಹುಶಾರ ಮಾಸ್ತರರಾಗಲಿ ಇದ್ದಾರೋ ಆ ಗ್ರಾ
ಮದಲ್ಲಿ ರಾವಸಾಹೇಬ ಡಿಪೋಟಿ ಎಜ್ಯುಕೇಶನಲ್

ಇನಸ್ಪೇಕ್ಟರ ಇವರ ಮುಂಗಡ ಅಪ್ಪಣೆಯನ್ನು ತೆಗೆದುಕೊಂಡು ಆದೂ ಚಿತ್ರಗಳನ್ನು ಕಲಿಸಬೇಕು.

ದಕ್ಷಿಣ ಭಾಗದೊಳಗಿನ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರಿಗೆ—

೧ ಪ್ರತಿ ಒಂದು ಜಿಲ್ಲೆಯ ರಾವಸಾಹೇಬ ಡೆಪ್ಯುಟಿ ಇನಸ್ಪೇಕ್ಟರ ಇವರು ತಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಆದೂ ಚಿತ್ರಗಳನ್ನು ಕಲಿಸ ತಕ್ಕದ್ದು ಈ ಬಗ್ಗೆ ವರುಷದ ಪ್ರಾರಂಭಕ್ಕೆ ನಿರ್ಣಯಮಾಡಿ ಅದರ ಯಾದಿಯನ್ನು ಕೆಳಗೆ ಸಹಿ ಮಾಡುವವರ ಕಡೆಗೆ ಕಳಿಸುತ್ತ ಹೋಗಬೇಕು.

೨ ರಾವಸಾಹೇಬ ಡೆಪ್ಯುಟಿ ಇನಸ್ಪೇಕ್ಟರ ಇವರು ಅಸಿಸ್ಟಂಟ ಡೆಪ್ಯುಟಿಯವರು ಶಾಲೆಯ ನಿರೀಕ್ಷಣೆಗೆ ಯೋಗ್ಯರೀತಿಯಿಂದ ಅವು ಕಲಿಸಿ ಬಂದಿರುತ್ತವೆಯೋ ಇಲ್ಲವೋ ಎಂಬ ಬಗ್ಗೆ ವಿಚಾರ ಮಾಡಬೇಕು. ಮತ್ತು ಯಾವ ಮಾಸ್ತರನು ನಿಯಮದ ವಿರುದ್ಧ ನಡೆದು ಕೊಂಡನೆಂದು ಕಂಡು ಬಂದೀತು ಆತನ ವಿಷಯವಾಗಿ ಸಾಂಕ್ಷೇಪ ಪತ್ರಿಕೆಯಲಿ ಅವಶ್ಯವಾಗಿ ಶರಾ ಬರೆಯುತ್ತಿರಬೇಕು.

ಸ್ಥಳ ಧಾರವಾಡ. / Sitaram V. Patwardhan.
೨೨।೨।೧೮೭೬ ಇ. (ಅ. ಎ. ಇನಸ್ಪೇಕ್ಟರ ದಕ್ಷಿಣಭಾಗ

—o—

ಸರಕ್ಯುಲರ ನಂಬರು. ೨೩೮೩

ಧಾರವಾಡ ಜಿಲ್ಹೇ ಯೊಳಗಿನ ಯಾವತ್ತು
ಮಾಸ್ತರರಿಗೆ—

ಕೆಳಗೆ ಸಹಿ ಮಾಡುವವರ ಕಡೆಯಿಂದ ನೋಟಿಸು
ಕೊಡುವದೇನಂದರೆ—ಸಾಲೆಯ ರಜಿಸ್ಟರಕ್ಕೆ ದಾಖಲಿರುವ
ಯಾವತ್ತು ಹುಡುಗರ ವಯಸ್ಸು ಇಷ್ಟೇ ಯೆಂಬುವದಕ್ಕೆ
ಕ ಹುಡುಗರ ತಂದೆಗಳ ಕಡೆಯಿಂದ ಅಥವಾ ಸಂರ
ಮಾಡುವವರ ಕಡೆಯಿಂದ ದಾಖಲೇ ತೆಗೆದುಕೊಂಡು ಆ
ಲೇಗಳನ್ನು ಒಂದು ಫೈಲಿನಲ್ಲಿ ಹಚ್ಚಿ ಇಡ ಬೇಕು.

ಯೆಷ್ಟೋ ಸಾಲೆಯ ಮಾಸ್ತರರು ದರವರ್ಷದ ಏ
ಲ ತಿಂಗಳಲ್ಲಿ ರಜಿಸ್ಟರ ಬರಿಯುವಾಗ ಹುಡುಗರ
ಸ್ಸು ಹಿಂದೊಂದು ವರ್ಷ ಹೆಚ್ಚು ಮಾಡಿ ಬರಿಯುವ
ವಂತ ನಮಗೆ ಕಂಡು ಬಂದದೆ. ಆದರೆ ಇನ್ನುಮುಂ
ರೀತಿ ಮಾಡದೆ, ಪ್ರತ್ಯೇಕ ಯೆಪ್ರೀಲ ತಿಂಗಳಿಗೊಮ್ಮೆ
ಲಯ ರಜಿಸ್ಟರಕ್ಕೆ ದಾಖಲಿರುವ ಯಾವತ್ತು ಹುಡಗರ
ದೊಂದು ವರ್ಷ ಹೆಚ್ಚಿಗೆ ಯೆರಿಸುತ್ತ ಹೋಗಬೇಕು. ತ
ಖು ೨೫| ೨ ೧೮೭೮ ಇ|| ಮು||. ಗದಗ.

Chanabassappa B. Dharwar.
ಡಿ. ಎ. ಇನಸ್ಪೇಕ್ಟರ ಜಿಲ್ಹಾ ಧಾರವಾಡ.

Uttara Ramacharitra.

ಉತ್ತರರಾಮಚರಿತ್ರ

ಲ — (ಮನಸ್ಸಿನಲ್ಲೇ) ಇನ್ನು ಇವರಿಗೆ ಬೇರೆ ಚಿತ್ರಗಳಂ ತೋರಿಸಬೇಕು; (ಚಿತ್ರಪತ್ರವನ್ನು ನೋಡುತ್ತಾ ಪ್ರಕಟ) ಇನ್ನು ಇದು — ಮನ್ವಂತರದಲ್ಲಿದ್ದ ಪುರಾತನ ಗೃ ಗಾಜನಾಸಂಥ ನಮಗೆ ತಂದೆಯಂತೆ ಮಾನ್ಯನಾದ ಜ ನುಖಿನ ಪರಾಕ್ರಮದ ಪ್ರಖ್ಯಾತ ಚಿತ್ರವು.

ಸೀ — ಹಾ ತಂದೇ ಜನಕರಾಯನೇ ನಿನ್ನ ಪುತ್ರವಾತ್ಸಲ್ಯವ ಕೊನೆಗಾಣಿಸಿ ಬಿಟ್ಟೆಯಲ್ಲಾ!

ರಾ — ವಿಶ್ವೈ ಕ್ಷತ್ರಕುಮಾರ ಖಗೇಶ್ವರಾ ಅವ್ವಾ ನಿ ಷ ಶ್ರೀಭಾರ್ಗವಋಷಿಯಾದ ಸಾಕ್ಷಾತಿನ ಸಮಾಗಮವು ನಮಗೆ ಮೇಲೆ ಹ್ಯಾಗಾಯಿತು.

ಲ — ಇಗೋ ಇದು ಜನಸ್ಥಾನದ ಪಶ್ಚಿಮದಲ್ಲಿರುವ "ಚಿ ತ್ರಕುಂಜವಾನ್" ಎಂಬ ಹೆಸರಿನ ದಂಡಕಾರಣ್ಯದ ಭಾಗವು, ಲ್ಲಿ ದನುಕಬಂಧಾದಿ ರಾಕ್ಷಸರು ಇರುತ್ತಿದ್ದರು, ಇದು ಋ ಷ್ಯಮೂಕಗಿರಿಯಲ್ಲಿ ಮತಂಗ ಋಷಿಗಳ ಆಶ್ರಮಸ್ಥಾನವು, ಯು ಶ್ರಮಣಾ ನಾಮಕಗಳಾದ ಶಬರಜಾತಿಯ ಸಿದ್ಧ ಯು ಇದೇ ಆ ಪಂಪಾಸರೋವರವು.

ಸೀ — ಇಲ್ಲೇ ಆರ್ಯಪುತ್ರರು ವೈರಿಯ ಮೇಲೆ ಆಕ್ರೋ ಶದ ಮತ್ತು ವಿರಹಕ್ಲೇಶದಿಂದ ಮುಕ್ತಕಂಠರಾಗಿ ರೋ ದನಮಾಡಿದ್ದಲ್ಲವೇ?

ರಾ — ದೇವಿ ಈ ಪಂಪಾಸರೋವರವು ಬಹು ರಮ ಣೀಯವಾಗಿದೆ;

ತ್ತು

ವಸಂತತಿಲಕಾ

ಇಲ್ಲಿ ಪ್ರಮತ್ತ ಕಲಹಂಸಗಳಾಟದಿಂದಂ ।
ಫುಲ್ಲಾಡವಂಬುಜಗಳುಳ್ಳ ಕೊಳಂಗಳಿಂದೆ ॥
ಉಲ್ಲಾಸಮಂ ಮಾನಸಿಗೀವ ವನಪ್ರದೇಶಂ ।
ಫುಲ್ಲಾಕ್ಷಿ! ಕಂಡತಿಳಿವಾಗೆನಗಶ್ರುಕಂಣಿಂ ॥ ೩೨ ॥

ಲ—ಈತನು ಮಹಾನುಭಾವನಾದ ಆಂಜನೇಯನು.

ಸೀ—ಈತನೇ ಬಹು ಕಾಲದಿಂದ ನಿರ್ಗುಣಳಾದ ಈ ಪ್ರಾಣಿಯನ್ನು ದುಃಖದಿಂದ ಉದ್ಧರಿಸಿದ ಮಹದುಪಕಾರಿಯು; ಲೋಕವಂದ್ಯನಾದ ವಾಯು ಕುಮಾರನು.

ರಾ—ಅಂಥವನೇ ಇವನು ಹೌದು.—

ಶಾರ್ದೂಲವೃತ್ತಂ

ಈತನೇ ಮಹಾಬಾಹು ಪಂಜನಾ! ಶ್ರೀವರ್ಧನಂ ದೈತ್ಯಮರ್ದನಂ ॥
ಸೀತೆ! ಧನ್ಯರಾಪೀಜಗತ್ತ್ರಯಾ, ವಾತನಾಮಹಾಘೋಷಶಕ್ತಿಯಿಂ ॥ ೩೩

ಸೀ—ವತ್ಸ! ಈ ಚಿತ್ರದ ಹೆಸರೇನು? ಇಲ್ಲಿ ಪ್ರಫುಲ್ಲಿತವಾದ ಕದಂಬ ವೃಕ್ಷಗಳನ್ನು ನೋಡು, ನವಿಲುಗಳು ನಲಿದಾಡುತ್ತಿವೆ, ಅಲ್ಲೀ ಒಂದು ವೃಕ್ಷದ ಕೆಳಗೆ ಪ್ರಾಣನಾಥರು ಲಿಖಿತರಾಗಿದ್ದಾರೆ, ಇವರ ಮುಖವು ಬಾಡಿರುತ್ತದೆ, ಇವರು ತಂಮ ಸಾಮರ್ಥ್ಯವೈಭವದಿಂದ ಮಾತ್ರ ಶೋಭಿಸುತ್ತಾರೆ, ಒಂದು ಮುಹೂರ್ತಮಾತ್ರ ಮೂರ್ಛೆ ಕರಾಗ್ರದಿಂದ ದುಃಖಿತನಾದ ನಿಂನಿಂದ ಹಿಡಿಯಲ್ಪಟ್ಟಿರುತ್ತಾರೆ ಎಂಬಂತೆ ಕಾಣುತ್ತದೆ.

ಲ—ಕೇಳಮ್ಮಾ ದೇವಿ!

ಮಂದಾಕ್ರಾಂತಾವೃತ್ತದ ಅರ್ಥವು.

ಆಶ್ಲೇಷಿಂತಾನಿದು ನಿಬಿಡ ನೀಲಾಭ್ರ ಸಂಯುಕ್ತ ಶೃಂಗಂ ।
ಮಾನಂಮತ್ತೇ ಮರಗಳ ಸುಗಂಧಕ್ಕದೇ "ಮಾಲ್ಯವಂತಂ"!

ರಾ—(ಅದನ್ನು ಕೇಳಿ) ॥ ಉತ್ತರಾರ್ಧವು ॥

ಹಾ! ಸಾವಿತ್ರೀ ತರುಗು ತಿರುಗಿಲ್ಲಿಂದ ಸಾಂತ್ವಾಳಿನೀಮೇಲ್ ||
ಶ್ರೀ ಸೀತಾ ದುರ್ವಿರಹಮಿದಕೋ ಮತ್ತೆತಾಂ ನೋಳ್ಪುದೆಂಸಂ||೩೪

ಲ— ಇನ್ನು ಮುಂದೆ ನಂಮ ಪ್ರಭುಗಳಿಂದ, ಹಾಗೆಯೇ ಕಪಿರಾಕ್ಷಸರಿಂದ ಪ್ರಕಟಿತವಾದಂಥ ಮಹದದ್ಭುತವಾದ ಅಸಂಖ್ಯಾತಕಾರ್ಯಗಳು ನೋಡಲಿಕ್ಕೆ ಪ್ರಂಟು; ಆದರೆ ನಂಮ ಅತ್ತಿಗೆಯವರು ನೋಡಿ ನೋಡಿ ದಣಿದಿದ್ದಾರೆ, ಕಾರಣ ಈ ಹೊತ್ತು ಚಿತ್ರದರ್ಶನವು ಸಾಕೆಂದು ಪ್ರಾರ್ಥಿಸುತ್ತೇನೆ.

ಸೀ— ಆರ್ಯಪುತ್ರರೇ ಈ ಚಿತ್ರಾವಲೋಕನದಿಂದ ಈಗ ನನಗೊಂದು ಬಯಿಕೆಯುಂಟಾಗಿರುತ್ತದೆ, ಆದ್ದರಿಂದ ಪ್ರಭುಗಳಿದಾವರೆಯಲ್ಲಿ ನನ್ನದೊಂದು ವಿಜ್ಞಪ್ತಿಯುಂಟು.

ರಾ— ವಿಜ್ಞಪ್ತಿಯಂಬನಬ್ಯಾಡಕಂಡ್ಯಾ ಏನೆಂಬದನ್ನು ನನಗೆ ನಿರೂಪಿಸಂದರಾಯಿತು.

ಸೀತೆ— ಬಲ್ಲೆನು ಪ್ರಭೋ ತಂಮ ಚರಣಗಳಲ್ಲಿ ನಂನ ವಿಜ್ಞಾಪನೆಯೇ ಯೋಗ್ಯವು ಯೇನಂದರೆ:— ರಮಣೀಯವಾದಂಥ ದಟ್ಟವಾದಂಥ ವನಗಳ ಸಾಲುಗಳಲ್ಲಿ ಇಂನೊಂಮೆ ವಿಹಾರಮಾಡಬೇಕು; ಹಾಗು ಭಾಗೀರಥಿಯ ಪುಣ್ಯಕಾರಕವಾದ ಸ್ವಚ್ಛಸೀತಲೋದಕಗಳಲ್ಲಿ ಸ್ನಾನಗಳನ್ನು ಮಾಡಬೇಕು; ಹೀಗೆ ನ್ನ ಮನಸ್ಸು ತವಕಿಸುತ್ತದೆ.

ರಾ— ವತ್ಸಾ! ಲಕ್ಷ್ಮಣಾ!

ಲ— ಸೇವಕನಾದ ನಾನು ಇಲ್ಲಿಯೇ ಇದ್ದೇನೆ; ಏನಪ್ಪಣೆ?

ರಾ— ಇದೇ ಈಗಲೇ ನಂಮ ಗುರುಜನರು ಜಾನಕಿಯು ಬಯಿಕೆಗಳನ್ನು ಸತ್ವರವಾಗಿ ಪೂರೈಸಬೇಕೆಂದು ಹೇಳಿಕಳುಹಿರುತ್ತಾರೆ; ಕಾರಣ ಸುಖಾಸ್ಪದವಾದಂಥ ಸರಳವಾಗಿ ನಡಿಯುವಂಥ ರಥವನ್ನು ಶಿದ್ಧಮಾಡಿತಾ! ಈಕಿಯ ವನವಿಹಾರ ರೂಪ

ಪಾಪ ಹಂಬಲವನ್ನು ಪೂರ್ಣಮಾಡಬೇಕಾಗಿದೆ.

ಲಕ್ಷ್ಮ — ಅಣ್ಣಯ್ಯಾ ಹಾಗಾದರೆ ಈಗ ಬರುತ್ತೇನೆ
ದು ಹೊರಟುಹೋಗುತ್ತಾನೆ.

ಸೀ — ಪ್ರಾಣಪ್ರಿಯರೇ ತಾವಾದರೂ ಅಲ್ಲಿಗೆ ಬರಬ

ರಾ — ಎಲೈ ಕಠಿಣ ಹೃದಯೇ ಇದನ್ನೂ ನನಗೇನು ಹೇ ಳಬೇಕೇ? ನಾನು ಅಲ್ಲಿಗೆ ಬರದೇ ನಿಂತೇನೆಂದು ನಿನಗೆ ತೋ ರುವದೇನು?

ಸೀ — ಹಾಗಾದರೆ ನನಗೆ ಬಹಳ ಸೌಖ್ಯವಾಯಿತು.

ರಾ — ಪ್ರಿಯೇ ಜಾನಕಿ! ಲಕ್ಷ್ಮಣನು ರಥವನ್ನು ತ ವರೆಗೆ ಎರಡುಗಳಿಗೆ ಖಿಡಕಿಯ ಬಳಿಯಲ್ಲಿ ಸುಳಿಗಾಳಿಗೆ ಕುಳಿತುಕೊಳ್ಳುವಾ ಬರುವಿಯಾ?

ಸೀ — ಹಾಗೇ ಆಗಲಿ ನನಗಾದರೂ ಚಿತ್ರಾವಲೋಕನ ಶ್ರಮದಿಂದುಂಟಾದ ನಿದ್ರೆಯು ಬಹು ಪೀಡಿಸುತ್ತದೆ.

ರಾ — ಹಾಗಾದರೆ ಇಲ್ಲಿ ನನ್ನ ತೊಡೆಯಮೇಲೆ, ಮು ಕವನ್ನು ಇಟ್ಟು ನಿಶ್ಚಿಂತಳಾಗಿ ಸಲ್ಪ ಹೊತ್ತು ಮಲ ಗಿಕ್ಕೊಂಡಿದ್ದರೆ—

ವಸಂತತಿಲಕಾವೃತ್ತಂ

ತಾರಾಪತಿ ದ್ಯುತಿಗೆ ನೀರ್ ಬಿಡುವಿಂದು ರತ್ನ ತನಾರೆ
ಹಾರಂಬೊಲೊಪ್ಪುವ ಭುಜಂಗಳಕಂತಕೀಯೇ ||
ತೋರಲ್ಕೆ ಚಿತ್ರವಪಿಸುರ್ಣವ ಛೀತಿಯಿಂದಾ |
ಸ್ಮೇರಾಸ್ಯ ರಾಜಿಪವೆ ಬೀಳಿತರಂತಿಪೆಂನಾ || ೩೫ ||

ರಾ — (ಹಾಗೇಮಾಡಿ ಬಹಳಾನಂದಪ್ರಸ್ಸವನಾಗಿ) ಪ್ರಾ ಣೇ ಇದೇನೇ? ನನಗೇನಾಗಿದೆಯೋ ತಿಳಿಯದು—

—o—

History of the Middle Ages

ಯುರೋಪಖಂಡದ ಮಧ್ಯ ಕಾಲದ ಇತಿ ಹಾಸವು.

೧ನೇ ಭಾಗ.

ಪಶ್ಚಿಮ ರಾಜ್ಯದಲ್ಲಿ ಬಾರ್ಬೇರಿಯನೆಂಬ ಕಾಡು ಜನರು ಸೇರಿದ ಸಂಗತಿಯು.

ಈ ಮಧ್ಯ ಕಾಲದವರೆಗೆ ಇತಿಹಾಸನೆಂಬ ಪ್ರವಾಹವು ಬ ತರವಾಗಿ ಒಂದೇ ಮಾರ್ಗದಿಂದ ಹರಿದುಬಂತು; ಬೇರೆ ರೆ ಕಾಲಗಳಲ್ಲಿ ಸಾಮ್ರಾಜ್ಯಾಧಿಕಾರವನ್ನು ಪಡೆದ ಜನರ ವಂಶಗಳಿದ್ದಂತೆ ಅದಕ್ಕೆ ಬೇರೆ ಬೇರೆ ಹೆಸರುಗಳು ಮಾತ್ರ ಬಂದವು. ಏಶಿಯದೊಳಗಿನ ದೊಡ್ಡ ರಾಜ್ಯವನ್ನು ಅಸೀರಿಯನ್ನರೂ ಮೀಡರೂ, ಇರಾಣಿಯರೂ ಒಬ್ಬರ ಹಿಂದೊಬ್ಬರು ಕ್ರಮವಾಗಿ ಆಳಿದರು. ಈ ರಾಜ್ಯಗಳನ್ನು ಮುರಿದು ಹೊಸ ರಾಜ್ಯವು ಬೆಳೆಯಿತು. ಕಡೆಯಲ್ಲಿ ಯೆಲ್ಲ ರಾಜ್ಯಗ ರೋಮದ ರಾಜ್ಯದಿಂದ ಗ್ರಸಿಸಲ್ಪಟ್ಟವು. ಈ ದೊಡ್ಡ ಸಾಗ ನೆರೆಹೊರೆಯಲ್ಲಿದ್ದ ಚಿಕ್ಕ ಚಿಕ್ಕ ರಾಜ್ಯಗಳು ಶಾಖಾ ವಾಹಗಳಂತೆ ಈ ದೊಡ್ಡ ರಾಜ್ಯಕ್ಕೆ ಆಗಾಗ್ಗೆ ಕೂಡಿ, ಇ ನ್ನು ಬೆಳಿಸಿದವು. ಆದರೆ ಇಂದು ಮುಂದೆ ಇತಿಹಾಸದ ರೂಪವು ಬದಲಾಗುತ್ತದೆ. ಹಿಂದಿನ ದೊಡ್ಡ ರಾಜ್ಯವನ್ನು ರಿದು ಹಲವು ಚಿಕ್ಕ ಸಂಸ್ಥಾನಗಳುಂಟಾಗುತ್ತವೆ. ಅವು ನ್ನೆಲ್ಲ ಮುರಿದು ಮತ್ತೊಂದು ದೊಡ್ಡ ರಾಜ್ಯವು ಯೆಂ ಸ್ಥಾಪಿಸಲ್ಪಡುವದಿಲ್ಲ. ಅನೇಕ ರಾಜ್ಯರೂಪ ಪ್ರವಾಹ ವೊಂದಕ್ಕೊಂದು ಹೊಂದಿ ಸಾಗಿ ಒಂದರಿಂದೊಂದರ ಹೆಚ್ಚು ಕಡಿಮೆಗಳು ಮಾತ್ರ ವ್ಯಂಜಿತಾಗುವವು. ಆದದರಿಂ

ದು   ನಾವು ಮುಂದೆ ಇತಿಹಾಸದ ಸಂಗತಿಗಳಲ್ಲಿ ಬೇರೆ
ರೆ ಭಾಗಗಳನ್ನು ಮಾಡಿ, ಆ ಆ ಭಾಗಗಳಲ್ಲಿ ವೃಂತಾ
ವೃತ್ತಾಂತಗಳನ್ನು ಬೇರೆಬೇರೆ ವರ್ಣಿಸುವೆವು.

ಮನುಷ್ಯ ಜಾತಿಯ ಇತಿಹಾಸದಲ್ಲಿ ಮಧ್ಯ ಕಾಲವು
ವಿರ ವರ್ಷಗಳ ವಿಸ್ತಾರವುಳ್ಳದ್ದಾಗಿರುತ್ತದೆ. ಇದರಲ್ಲಿ ಮೊ
ದಲಿನ ಆರು ನೂರು ವರ್ಷಗಳಿಗೆ ಕತ್ತಲೆಯ ಕಾಲವೆಂ
ಬ ಹೆಸರು ಯಥಾರ್ಥವಾಗಿ ಕೊಡಲ್ಪಟ್ಟಿದೆ. ಯಾಕಂದರೆ ರೋ
ಮ ರಾಜ್ಯವೆಂಬ ಅತಿ ಪ್ರದೀಪ್ತವಾದ ದಿವಸದ ನಂತರ
ಹು ದೀರ್ಘವಾದ ಅಂಧಃಕಾರವುಳ್ಳ ರಾತ್ರಿಯು ಮುಸುಕಿ
ತು. ಕಡೆಯ ನಾಲ್ಕು ನೂರು ವರ್ಷಗಳಲ್ಲಿ ಬೆಳಕು ಕ್ರಮ
ಕ್ರಮವಾಗಿ ಹೆಚ್ಚಾಗುತ್ತ ಹೋಗಿ ಕಡೆಯಲ್ಲಿ ಅರ್ವಾಚೀನ
ಕಾಲದ ಸುಧಾರಣೆಯೆಂಬ ದಿವಸವು ಉದಯವಾಯಿತು
ಧರ್ಮವು ಶುದ್ಧವಾಗುತ್ತ ಹೋಯಿತು; ಕಾಯ್ದೆಗಳು ಮೊ
ದಲಿನಂತೆ ಸಾಮ್ರಾಜ್ಯ ಪಡೆದವು; ಜನರ ನಡಾವಳಿಗಳು ತಿ
ದ್ದುತ್ತ ನಡೆದವು; ಶಾಸ್ತ್ರಗಳೂ, ಕಲಾ ಕೌಶಲ್ಯಾದಿಗಳೂ
ಕಳೆ ಯೇರಿದವು.

ಗಾಥೋ ಜರ್ಮನ್ನ ಜಾತಿಯ ಜನರು

ರೋಮದ ರಾಜ್ಯವನ್ನು ಮುರಿದವರೆಲ್ಲರು ಈ ಗೊಡ್ಡ
ಕುಲದವರಿದ್ದರು. ಇವರು ಬಹುತರವಾಗಿ ಯುರೋಪಖಂಡ
ದ ಉತ್ತರ ಭಾಗವನ್ನೆಲ್ಲ ಆಕ್ರಮಿಸಿದ್ದರು. ಇವರು ಆರಂ
ಭದಲ್ಲಿ ಕಾಸ್ಪಿಯನ್ ಸಮುದ್ರದ ಪೂರ್ವಭಾಗದಲ್ಲಿ ಬಹು
ಶಃ ಇರುತ್ತಿದ್ದರು. ಇವರ ಭಾಷೆಗಳಿಗೂ, ಹಿಂದುಸ್ಥಾನ, ಇ
ರಾಣ ದೇಶಗಳ ಭಾಷೆಗಳಿಗೂ ಬಹಳ ಸಾಮ್ಯವುಂಟು. ಆ
ದರೆ ಯುರೋಪಖಂಡದ ಇತಿಹಾಸವು ಆರಂಭವಾಗುವದಕ್ಕೆ

ಇವರು ಅಲ್ಲಿಂದ ಹೊರಳಿದರು. ಇವರ ಲಕ್ಷಣಗಳು
ಬರೆ, ನಿಲುವಿಕೆ ಯೆತ್ತರವಾದದ್ದು, ಕಂಣುಗಳು ಕರೆ
ವ್ವೆ ಬಂಣ ನಾಡಗೆಂಪು, ಸೃಷ್ಟಿಯ ವ್ಯಾಪಾರಗ
ನಾಗಿಸುವಂಥ ಸೂರ್ಯ ಚಂದ್ರಾದಿಗಳು ದೇವತೆಗಳೆಂ
ಅವುಗಳನ್ನು ಇವರು ಆರಾಧಿಸುವರು. ಐಸ್ಲಂಡಿನ
ಯೆಂಬ ಧರ್ಮ ಪುಸ್ತಕಗಳಲ್ಲಿ ಈ ಧರ್ಮ ಪಂಥವು
ಹೇಳಲ್ಪಟ್ಟಿದೆ.

ರೋಮಿನ ರಾಜ್ಯವು ಮುರಿದ ನಂತರ ಈ ಜನರಿಂದ ಸ್ಥಾ
ಪ್ಟಿ ಸಂಸ್ಥಾನಗಳನ್ನು ನಾವು ಸಂಕ್ಷೇಪವಾಗಿ ವಿವರಿ
ಸುವೆ. ಗಾಥ ಜನರಲ್ಲಿ ಪೂರ್ವ ಗಾಥರೆಂತಲೂ, ಪಶ್ಚಿ
ಮಗಾಥರೆಂತಲೂ ಯೆರಡು ದೊಡ್ಡ ಜನಾಂಗಗಳಿದ್ದವು.
ರೋಮಿನ ರಾಜ್ಯವು ಈ ಗಾಥಜನರ ಕೈವಶವಾಗುವ ಮೊ
ದಲು ಯುರೋಪಿನ ಪೂರ್ವ ಭಾಗದಲ್ಲಿ ರೋಮಿನ ಮೂ
ರಾಜ್ಯವಲ್ಲದೆ ಹೂನ್ ಜನರದೊಂದು ದೊಡ್ಡ ರಾಜ್ಯವಿತ್ತು.
ರಾಜ್ಯದ ಕಡೆಯ ಅರಸನಾದ ಅಟ್ಟಿಲನೆಂಬ ಮಹಾ ಪರಾ
ಯು ಹಂಗರಿಂದ ವ್ವೊಲ್ಗಾ ಹೊಳೆಯ ಪಟ್ಟಿಗೆ ರಾ
ತ್ತಿದ್ದನು, ಜಿಪಿಡೀ, ಲಾಂಗೋಬಾರ್ಡ, ಪೂರ್ವಗಾಥ,
ಜರ್ಮನ್, ಯೆಂಬ ನಾಡುಗಳು ಅವನಿಗೆ ಅಧೀನವಾ
ಅವನು ರಾಜ್ಯ ಗೆಲ್ಲುತ್ತ ಸಾಗಿ ಇತಲಿಯ ಶೇರಿ
ಪಟ್ಟಣವನ್ನು ಗೆದ್ದು ಅದನ್ನು ಸುಲಿದನು. ಅವನು
ಮ ಚಕ್ರವರ್ತಿಯ ತಂಗಿಯನ್ನು ಲಗ್ನ ಮಾಡಿಕೊಂಡ
ವೇ ಮರಣ ಹೊಂದಿದನು, ೪೫೩. ಅವನು ಮಡಿದ
ಹೂನ್ ಜನರ ರಾಜ್ಯವು ಮುರಿದು ಮೇಲೆ ಹೇಳಿ
ನಾಡುಗಳು ಸ್ವತಂತ್ರವಾದವು,

ಬಾಲ್ಟಿಕ ಸಮುದ್ರದ ಘಡದಲ್ಲಿ ಪೊಮರೇನಿಯ ಪ್ರಾಂತದಲ್ಲಿ ಪಶ್ಚಿಮ ಗಾಥರೊಳಗಿನ ಹಿರುಲೀ ಯೆಂ ದ ಜನರು ವಾಸಿಸುತ್ತಿದ್ದರು. ಅವರ ದಳಪತಿಯಾ ಡೋಸರನೆಂಬ ಶೂರ ಸರದಾರನು ದಂಡೆತ್ತಿ ಹೋಗಿ ಲಿಯನ್ನು ಕೈವಶ ಮಾಡಿಕೊಂಡನು. ಅವನು ರೋಮ ಗವನ್ನು ಸೇರಿದ ಕೂಡಲೆ ಅಲ್ಲಿಯ ಚಕ್ರವರ್ತಿಯಾದ ಮ್ಯುಲಸನೆಂಬವನು ತನ್ನ ಸಿಂಹಾಸನವನ್ನೂ, ರಾಜ್ಯ ವನ್ನೂ ಸುಮ್ಮನೆ ಆವನಿಗೆ ಒಪ್ಪಿಸಿ, ತಾನು ಅವನ ದಿನೊಳಗೆ ಸೇರಿದನು. ಈ ಮೇರಿಗೆ ರೋಮ ಪಟ್ಟಣವು ಪಿಸಲ್ಪಟ್ಟ ನಂತರ ೧೨೨೯ನೇ ವರ್ಷದಲ್ಲಿ, ಅದನ್ನು ಪಿಸಿದ ಅರಸನ ಹೆಸರಿನವನೇ ಅರಸನಾಳುತ್ತಿರಲು, ಗಳ ಕೈವಶವಾಯಿತು, ೪೭೬ ಆ ಸಮಯದಲ್ಲಿ ಆಫ್ರಿ ವಗೆ ವಂಡಲ್ಸೆಂಬ ಜನರದೊಂದು ಪ್ರಬಲವಾದ ರಾಜ್ಯವಿತ್ತು

—o—

Correspondence.

ಪತ್ರವ್ಯವಹಾರ

ಸೂಚನಾಪತ್ರಕವು.

—*—

ಟಪಾಲಹಾಶೀಲು ಸಹಿತ ಎಂಟು ಆಣೆ, ಆರು ಸ್ಟ ನ್ನು ಕಳಿಸಿದರೆ "ಮುಕುಂದದಾಸಾಮೃತ" ಎಂಬ ಕ ಪದ್ಯಾತ್ಮಕ ಗ್ರಂಥವು ಕೆಳಗೆ ಸಹಿಮಾಡಿದವರ ಹ ದೊರಕುತ್ತದೆ.

ಅಚ್ಚುಹಾಕದ ಗ್ರಂಥಗಳ ಪಟ್ಟಿ.

೧ ವಿರಹತರಂಗ, ೨ ಗಜೇಂದ್ರಮೋಕ್ಷ, ೩ ರಸಿಕಾ

…ಹಾರ ೪ ಬಾಲೋಪದೇಶ. ೫ ಶೃಂಗಾರಪದಸಂಗ್ರಹ ೬ ದೇ…ನ. ೭ ಬರಗಾಲರಸ (ದುಷ್ಕಾಳವರ್ಣನ). ೮ ಪಂಚ…ಸಾರ. ೯ ಹಾಸ್ಯಮಂದಿರ. ೧೦ ಪತಿಭಾರ್ಯಾಪುರಾ…ಜಂಗು) ೧೧ ಮದನವಿಹಾರ.

ಈ ೧೧ ಗ್ರಂಥಗಳು ಪದ್ಯಾತ್ಮಕಗಳೇ ಆದರೆ ಇವುಗಳ …ಪಾಲಕಿಯನ್ನು ಹೊಂದಲಪೇಕ್ಷಿಸುವವರು ಕೆಳಗೆ ಸಹಿ…ದವರಿಗೆ ರೋಖು ೨೦ ರೂಪಾಯಿಗಳನ್ನು ಕೊಡುವ…ಹರಬಾನಗೀ ಮಾಡಬೇಕು. ಈ ಮಾತು ಛಾಪಖಾನೆಯ… ಬಹಳೇ ಹಿತಕರವಾದದ್ದು.

೧ ಆನಂದಲಹರೀ, ೨ ಸುರಸರಂಜನ, ೩ ಕವಿಪ್ರಲಾಪ, …ಕಂಠಖಡ್ಗಗಳೆಂಬ ನಾಲ್ಕು ಗ್ರಂಥಗಳನ್ನು ಈಗ ಬರೆಯು…ಡಗಿರುವೆವು. ಮುಗಿದದನಂತರ ಮಾಡುವ ವ್ಯವಸ್ಥಾ ಕ್ರಮವನ್ನು ಬೇಗನೇ ಸೂಚಿಸುತ್ತೇವೆ.

ಈ ಸೂಚನಾ ಪತ್ರಕೋತ್ಪತ್ತಿಗೆ ಬರುತನವಲ್ಲದ ಅನ್ಯ ಕಾರಿಲ್ಲ- ಎಂಬುವದನ್ನು ಸರ್ವರಿಗೂ ಬಹು ವಿನಯದಿಂದ …ಸುತ್ತೇವೆ.

ತಾ ೨೮।೧।೭೯ } ಬಾಳಾಜೀ ಗೋಪಾಳ ಸಕ್ಕರೀ.
ಹೊಂಬಳ. } ಗ್ರಂಥಕರ್ತಾ.
ಹೆಡ್ಡಮಾಸ್ತರ ಹೊಂಬಳ ತಾ. ಗದಗು ಜಿಲ್ಹಾ ಧಾರವಾಡ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎದಿಟರವನ್ರಂತ…ಭಾಗ ಇವರ ಸನ್ನಿಧಾನಕ್ಕೆ—ವಿನಂತಿ ವಿಜ್ಞಾಪನಾ ವಿದ್ಯಾ…ದಲ್ಲಿ ಆನಂದದಿಂದ ಕ್ರೀಡಿಸುವ ಎದಿಟರ ಮಹಾರಾಯ

ರೀ ತಮ್ಮ ಕರಕಮಲದಿಂದ ಉದ್ಭವಿಸುವ ಮಾಸಪ
ನವಂಬರ ಸನ ೧೮೭೭ರ ಇಸವಿಯ ಮಾಸಪತ್ರಿಕೆಯ ೨
ಸಿನಲ್ಲಿ ಮುಖ್ಯಗಣಿತಶಾಲೆಯ ವಿದ್ಯಾರ್ಥಿಯರು ಎರಡು
ರೀತಿವಾರ ಮಾಡುವ ಸಲುವಾಗಿ ಪ್ರತಿಷ್ಠಾಪಡಿಸಿದ್ದರು
ಳಲ್ಲಿ ಒಂದು ಮಂದಮತಿಯಾದ ನನ್ನ ಬುದ್ಧಿಗೆ ತಿಳಿದ
ರಿಯಬೇಕೆಂದು ಕಾಂಕ್ಷಿತಚಿತ್ತವುಳ್ಳವನಾಗಿದ್ದೇನೆ. ಆ
ಅಂದವಾದ ಮಾಸಪತ್ರಿಕೆಯಲ್ಲಿ ಒಂದು ಲೆಖ್ಖದ ರೀತಿ
ದೊರಿಯಬೇಕೆಂದು ಪ್ರಾರ್ಥಿಸುತ್ತೇನೆ. ಆ ಲೆಖ್ಖದ ರೀ
ಗೆ ಬರೆದ ಪ್ರಕಾ.

ರೀತಿ.

ಇನ ಸಹಾಯ ತೆಗೆದುಕೊಂಡು ಸಂಕೇತಿನ ದಿವಸ
ಲಸವನ್ನು ಮುಗಿಸಿದ ಕಾರಣ ಇವನಿಗೆ ೩೦ ಶಿಲಿಂಗುಳು
ಇನನ್ನು ಸಹಾಯಕ್ಕೆ ತೆಗೆದುಕೊಳ್ಳದಲೇ ಅವಇವರು
ನ ದಿವಸಗಳಲ್ಲಿ ಮುಗಿಸಿದ್ದರೆ, ಇವನಿಗೆ ೩ ಶಿಲಿಂಗು
ಗಳು ಹೆಚ್ಚಿಗೆ ದೊರೆಯುತ್ತಿದ್ದವು; ಅಂದರೆ ಶಿಲಿಂಗು

(೩೦×೩

ಶಿಲಿಂಗುಗಳು ದೊರಿಯುತ್ತಿದ್ದವು; ಉಳಿದದ್ದು

ಶಿಲಿಂಗ . ೩. ಶಿಲಿಂಗು ಅವನಿಗೆ ದೊರಿಯುತ್ತಿದ್ದವು.

೯೦—೩೩ $\frac{೩}{೪}$ = ೫೬ $\frac{೧}{೪}$

೩. ದೊರೆಯುವವನಿಗೆ ಶಿಲಿಂಗುಗಳು ಮೊ. ೩. ದೊ.

೩೩ $\frac{೩}{೪}$ ೩೦ ೫೬ $\frac{೧}{೪}$ =

ಮೂವರಿಗೆ ಕೂಡಿ ೯೦ ಶಿಲಿಂಗುಗಳು ದೊರೆದವು.
ಲ್ಲಿ ಇನ ೫೦, ಇನ ೩೦ ಶಿಲಿಂಗುಗಳನ್ನು ಕಳೆ

ಶಾಲಾಪತ್ರಕವು.

ಪುಸ್ತಕ ೧೫] [ಸಂಚಿಕೆ ೩

ಮಾರ್ಚ ೧೮೭೯

Educational Intelligence.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು

ಚೀನ, ಜೇಪಾನ ದೇಶಗಳಲ್ಲಿ ದಪ್ಪಾದ ಕಬ್ಬಿಣ ತಗ
ಡಿಯಿಂದ ಮಥಾಯಿಸಿದಂಥ ಯುದ್ಧದ ಹಡಗಗಳು ಪ್ರೋಳಗ
ಡೆಯಲ್ಲಿ ಹುಟ್ಟಿ ಹತ್ತಿರುತ್ತವೆ. ನಮ್ಮ ದೇಶದಲ್ಲಿ ಈಗ
ರಾರು ವರ್ಷ ಇಂಗ್ಲಿಷ ಸರಕಾರದವರ ಅಮಲು ನಡಿ.
ಗ್ಯ್ರ ಇಂಥಾ ವಿಸ್ತೃಗಳು ಈ ದೇಶದೊಳಗೆ ಇನ್ನೂ
ವೇಶ ಮಾಡಲಿಲ್ಲೆಂಬುವದು ಆಶ್ಚರ್ಯವು.

—oo—

ಈ ತಿಂಗಳಲ್ಲಿ ಪಂಜಾಬದ ರಾಜಧಾನಿಯಾದ ಲಾಹೋರ
ಪಟ್ಟಣದಲ್ಲಿ ಕವಿಗಳ ಸಭೆ ಕೂಡಿತ್ತು. ಆ ಸಭೆಯ
ಕು ಜನರು ಕವಿಗಳು ಗದ್ಯ ಪದ್ಯ ರೂಪಗಳಿಂದ
ಸೆ ಷ ಗ್ರಂಥಗಳನ್ನು ಪಂಜಾಬೀ ಭಾಷೆಯಲ್ಲಿ
ಚಾರ ವಾದ ಭಾಷಾಂತರ ಮಾಡಿ ತಮ್ಮ ತಮ್ಮ ಕ
ನ ಮುಖ್ಯಾಸ್ಥ ಳು. ಇಂಥಾ ಸಭೆಗಳು ಈ ಪ್ರಾಂ

—o—

ಲೀ ತಪ್ಪುಕರಕವುಲದಿಂದ ಉದ್ಭವಿಸುವ ಪುತಪ
ನವಂಬರ ಸನ೧೮೭೭ರ ಇಸವಿಯ ಮಾಸಪತ್ರಿಕೆಯ ೨
ಸಿನಲ್ಲಿ ಮುಮ್ಮಿಗಟ್ಟಿಶಾಲೆಯ ವಿದ್ಯಾರ್ಥಿಯು ಎರಡು
ರೀತಿವಾರ ಮಾಡುವ ಸಲುವಾಗಿ ಪ್ರಸಿದ್ಧಿಪಡಿಸಿದ್ದರ
ಳಲ್ಲಿ ಒಂದು ಮಂದಮತಿಯಾದ ನನ್ನ ಬುದ್ಧಿಗೆ ತಿಳಿ
ರಿಯಬೇಕೆಂದು ಕಾಂಕ್ಷಿತಚಿತ್ತವುಳ್ಳವನಾಗಿದ್ದೇನೆ. ಅ
ಅಂದವಾದ ಮಾಸಪತ್ರಿಕೆಯಲ್ಲಿ ಒಂದು ಲೆಖ್ಖದ ರೀ
ದೊರಿಯಬೇಕೆಂದು ಪ್ರಾರ್ಥಿಸುತ್ತೇನೆ. ಆ ಲೆಖ್ಖದ ರೀ
ಗೆ ಬರೆದ ಪ್ರಕಾರ.

ರೀತಿ.

ಈನ ಸಹಾಯ ತೆಗೆದುಕೊಂಡು ಸಂಕ್ಷೇಪಿನ ದಿವಸ
ಲಸವನ್ನು ಮುಗಿಸಿದ ಕಾರಣ ಈನಿಗೆ ೩೦ ಶಿಲಿಂಗುಳು
ಈನನ್ನು ಸಹಾಯಕ್ಕೆ ತೆಗೆದುಕೊಳ್ಳದಲೇ ಅಷ್ಟೇ ಆವರು
ನ ದಿವಸಗಳಲ್ಲಿ ಮುಗಿಸಿದ್ದರೆ, ಈನಿಗೆ ೩ ಶಿಲಿಂಗು
ಗಳು ಹೆಚ್ಚಿಗೆ ದೊರೆಯುತ್ತಿದ್ದವು; ಅಂದರೆ ಶಿಲಿಂಗ

(೩೦×೩

ಶಿಲಿಂಗುಗಳು ದೊರಿಯುತ್ತಿದ್ದವು; ಉಳಿದದ್ದು

ಶಿಲಿಂಗ . ಶಿ. ಶಿಲಿಂಗು ಅನಿಗೆ ದೊರಿಯುತ್ತಿದ್ದವು.

೯೦—೩೩ ೧/೪ = ೫೬ ೩/೪

ಶಿ. ದೊರೆಯುವವನಿಗೆ ಶಿಲಿಂಗುಗಳುದೊ. ಶಿ. ದೊ.

೩೩ ೧/೪ ೩೦ ೫೬ ...

ವಂಟಗರಿಗೆ ಕೂಡಿ ೯೦ ಶಿಲಿಂಗುಗಳು ದೊರಕಿದರ ಕ್ರಮ
ಲ್ಲಿ ಅನ ೫೦, ಈನ ೩೦ ಶಿಲಿಂಗ

ಶಾಲಾಪತ್ರಕವು.

ಪುಸ್ತಕ ೧೫] [ಸಂಚಿಕೆ ೩

ಮಾರ್ಚ ೧೮೭೯

Educational Intelligence.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು

ಚೀನ, ಜೇಪಾನ ದೇಶಗಳಲ್ಲಿ ದಪ್ಪಾದ ಕಬ್ಬಿಣ ತಗಡಿಂದ ಮಥಾಯಿಸಿದಂಥ ಯುದ್ಧದ ಹಡಗಗಳು ಪ್ರೊಳಗಳುಲ್ಲಿ ಹುಟ್ಟಿ ಹತ್ತಿರುತ್ತವೆ. ನಮ್ಮ ದೇಶದಲ್ಲಿ ಈಗ ನೂರಾರು ವರ್ಷ ಇಂಗ್ಲಿಷ ಸರಕಾರದವರ ಅಮಲು ನಡೆದಿದ್ದಾಗ್ಯೂ ಇಂಥಾ ವಿದ್ಯೆಗಳು ಈ ದೇಶದೊಳಗೆ ಇನ್ನೂ ಪ್ರವೇಶ ಮಾಡಲಿಲ್ಲೆಂಬುವದು ಆಶ್ಚರ್ಯವು.

—oo—

ಈ ತಿಂಗಳಲ್ಲಿ ಪಂಜಾಬದ ರಾಜಧಾನಿಯಾದ ಲಾಹೋರ ಪಟ್ಟಣದಲ್ಲಿ ಕವಿಗಳ ಸಭೆ ಕೂಡಿತ್ತು. ಆ ಸಭೆಯ ಬಹು ಜನರು ಕವಿಗಳು ಗದ್ಯ ಪದ್ಯ ರೂಪಗಳಿಂದ ದ ಇಂಗ್ಲಿಷ ಗ್ರಂಥಗಳನ್ನು ಪಂಜಾಬೀ ಭಾಷೆಯಲ್ಲಿ ತಾ ರೂಪದಿಂದ ಭಾಷಾಂತರ ಮಾಡಿ ತಮ್ಮ ತಮ್ಮ ಶ… ವನ್ನು ತೋರಿಸಿದರು. ಇಂಥಾ ಸಭೆಗಳು ಈ ಪ್ರಾಂ…ಲ್ಲಿ ಯಾಕೆ ಆಗಬಾರದು?

—o—

ಬೇರೆ ಬೇರೆ ಪ್ರಾಣಿಗಳು ವೊಂದು ತಾಸಿನೊಳಗೆ
ಯುವ ವೇಗದ ಅಂದಾಜು ವೊಂದು ಇಂಗ್ಲಿಷ ವರ್ತ
ನ ಪತ್ರದಲ್ಲಿ ಪ್ರಸಿದ್ಧವಾದದ್ದು ಹ್ಯಾಗಂದರೆ,—ಶ
ಬ ಮೀನು ೧೬, ೧೭ ಮೈಲು; ನೊಣಗಳು ೪—೬ ವ
ಜೋಡಿನ ಕುದುರೆಗಳು ೪೦—೬೦ ಮೈಲು; ನಡಿಯುವ
ಮ್ಯಾನು ೪, ೫ ಮೈಲು; ಓಡುವ ಮನುಷ್ಯ ೧೨—೧೫
ಲು; ನಡಿಯುವ ಸಾಧಾರಣ ಕುದುರೆ ೪ ಮೈಲು;
ವ ಕುದುರೆ ೧೨|| ಮೈಲು, ಗರುಡ ಮುಂತಾದ
ಅತಿ ವೇಗವುಳ್ಳ ಪಕ್ಷಿಗಳು ತಾಸಿಗೆ ೧೫೦ ಮೈಲಿನ
ಹಾರುತ್ತವೆ. ಕಣ್ಣುಕಪ್ಪಡೆ ೯೨ ಮೈಲು; ಕಾಗೆ ೨೫
ಲು; ಹದ್ದು ೧೪೦ ಮೈಲು. ಅತಿ ವೇಗದಿಂದ ನಡಿ
ವ ಹೊಗೆ ಬಂಡಿಯು ಹದ್ದಿನ ವೇಗದ ಅರ್ಧಕ್ಕಿಂತ
ಡಿಮೆ ನಡಿಯುತ್ತದೆ, ಅಂದರೆ ತಾಸಿಗೆ ೬೦ ಮೈಲಿ
ಹೆಚ್ಚು ನಡಿಯುವದಿಲ್ಲ.

ಅದೇ ವರ್ತಮಾನ ಪತ್ರದಲ್ಲಿ ಬೇರೆ ಬೇರೆ ಪ್ರಾ
ಗಳ ಆಯುಷ್ಯಮರ್ಯಾದೆಯ ಪರಿಮಿತಿಯು ಬರೆದದ್ದು
ಗಂದರೆ,—ಆನೆಗಳು ೨೦೦ ವರ್ಷ; ಸಿಂಹ, ಕರಡಿ,
ಟಿ, ೫೦ ವರ್ಷ ತೋಳ, ಜಿಗತೆ ೨೫—೩೦;
ರೆ, ಕತ್ತೆ ೨೦—೩೦ ವರ್ಷ; ಹೇಸರಗತ್ತೆ ೩೫ ವ
ಹಂದಿ ೨೫—೩೦ ವರ್ಷ; ನರಿ ೧೪ ವರ್ಷ;
೧೫—೨೦ ವರ್ಷ; ಆಕಳು ೧೫ ವರ್ಷ; ಬೆಕ್ಕು ೧
೧೫ ವರ್ಷ; ಮೊಲ ೭ ವರ್ಷ.

—೧—

ಅಮೇರಿಕ ಖಂಡದಲ್ಲಿ ಇಲಿಜು ಬಿರತ್ತನೆಂಬವನೊಬ್ಬ
ವಿಖ್ಯಾತನಾದ ಕಮ್ಮಾರನಿದ್ದನು. ಅವನು ತನ್ನ ಕ
...ಗಾರಿಕೆಯನ್ನು ನಡಿಸುತ್ತಿದ್ದನಲ್ಲದೆ ಒಂದು ವರ್ತ
ಪತ್ರವನ್ನು ನಡಿಸುತ್ತಿದ್ದನು. ಆ ಪತ್ರವು ಬಹಳ
...ರಾದಲ್ಲುಂಟು. ಇದಲ್ಲದೆ ಅವನಿಗೆ ೫೦ ಬೇರೆ ಬೇರೆ
...ಗಳು ಬರುತ್ತಿದ್ದವೆಂದು ಹೇಳುತ್ತಾರೆ. ಈ ಮನುಷ್ಯ
ಹೋದ ತಿಂಗಳಲ್ಲಿ ಮರಣ ಹೊಂದಿದನು.

—o—

ಕೊಲ್ಹಾಪುರದಿಂದ ರಾಜಾಪುರದ ವರೆಗೆ ಹೊಗೆಬಂಡಿ
ಮಾರ್ಗವನ್ನು ಮಾಡಲಿಕ್ಕೆ ಸರಕಾರದವರು ಹುಕುಮು
...ಡಿದ್ದಾರೆ. ಎಪ್ರಿಲ ತಿಂಗಳಿನ ೨೨ ನೇ ತಾರೀಖಿಗೆ ಕೆ
ಲಸವು ಆರಂಭವಾಗ ತಕ್ಕದುಂಟೆಂದು ಕೇಳುತ್ತೇವೆ.

—o—

ಲಂಡನ ಪಟ್ಟಣದಲ್ಲಿ ಹೊಸದೊಂದು ಪ್ರಕಾರದ ಮದ್ಯ
ವೇಳಗಸೆಯಲ್ಲಿ ಕೆಲವೊಂದು ಕಂಪನಿಯವರು ಮಾ
ಡಹತ್ತಿದ್ದಾರೆ. ಅದರಿಂದ ಆ ಕಂಪನಿಯವರಿಗೆ ಹೋದ
೪೨೦೦೦೦೨ ರೂಪಾಯಿ ಲಾಭವಾಯಿತು!

—o—

...ಲೀಬಾಗ ಗ್ರಾಮದಲ್ಲಿ ಶ್ರೀಮಂತ ಭಾವೂಸಾಹೇಬ
...ಕರ ಯೆಂಬವರು ವೈಶಾಖ ಶುದ್ಧ ನವಮಿಯಿಂದ
...ಮಯಜ್ಞವನ್ನು ಆರಂಭ ಮಾಡತಕ್ಕವರಿದ್ದಾರೆಂದು ವರ್ತ
...ನವಿದೆ.

—o—

ಮಾಜೀ ಒರಿಯೆಂಟಲ್ ತ್ರಾನ್ಸಲೇಟರರಾದ ರಾ. ರಾ.

ವಿಚಾರಯುತರಾದ ವಾಸುದೇವಜೀ ಯೆಂಬವರು ಪುಣೆಯ ಪ್ರೊಂದು ತೋಟದೊಳಗೆ ಮಾಧವಸ್ವಾಮಿ ಯೆಂಬ ಸ ನಿಗೆ ಇರಲಿಕ್ಕಾಗಿ ವೊಂದು ಮಠವನ್ನು ಕಟ್ಟಿಸಿದ್ದಾರೆ. ಮಠದಲ್ಲಿ ಆ ಸ್ವಾಮಿಯವರ ಯೋಗಸಾಧನಕ್ಕಾಗಿ ಪ ದು ಗವಿಯನ್ನು ಮಾಡಿಸಿದ್ದಾರಂತೆ!

—೦—

ಮಣ್ಣಿಯಲ್ಲಿ ಕುರಂದವಾಡದ ಸಂಸ್ಥಾನಿಕರಾದ ಮಂತ ಬಾಳಾಸಾಹೇಬ ಯೆಂಬವರು ಈ ದಿಂಗಳಲ್ಲಿ ಕ ಯು ಸಮಾರಂಭವನ್ನು ಮಾಡಿಸಿದರು. ಹೆಸರಾದ ಪೈಲವಾ ರ ಕುಸ್ತಿಗಳು ಮೂರಾದವು. ಅವುಗಳಲ್ಲಿ ಕಡೆಯ ಕುಸ್ತಿ ಲ್ಲಿ ಹಮಜೀಖಾ ಯೆಂಬವನು ತನ್ನ ವಿರೋಧಿಯನ್ನು ಬ ಬೇಗ ಬಹು ಚಮತ್ಕಾರದಿಂದ ನೆಲಕ್ಕೆ ಹಾಕಿದರಿಂದ ಸದ ಸಂಸ್ಥಾನಿಕರು ಹಮಜೀಖಾ ಪೈಲವಾನನಿಗೆ ವೊಂದು ಚ ದ ಕಡೆಯನ್ನೂ ೩೦೦ ರುಪಾಯಿಗಳನ್ನೂ ಇನಾಮು ಕೊ ರು. ಅವನನ್ನು ತಮ್ಮ ಸಂಸ್ಥಾನದಲ್ಲಿ ಅವರು ಇಟ್ಟು ಳ್ಳ ತಕ್ಕವರಿದ್ದಾರೆಂದು ಸುದ್ದಿಯುಂಟು.

—೦—

ಬಾಗಲ ಪಟ್ಟಣದಲ್ಲಿ ಹೋದ ದಿಂಗಳಲ್ಲಿ ಬಹುಭಯಂ ಕರವಾದ ಆಣೀಕಲ್ಲಿನ ವೃಷ್ಟಿ ಯಾಯಿತು. ಆಣೀಕಲ ಳ ಪೆಟ್ಟಿನಿಂಥ ದೊಡ್ಡ ದೊಡ್ಡ ಇಮಾರತುಗಳು ನೆ ಸಾದವು; ಯೆಲ್ಲಕಡಿ ೪೬ ಗ್ರಾಮಗಳಲ್ಲಿ ಬಹಳ ಕೆ ಯಿತು, ೧೭೬೫ ಮನೆಗಳು ಬಿದ್ದವು.

—೦—

ಬಡೋದೆಯ ದಿವಾಣರಾದ ಸರ ಮಾಧವರಾವ ಇ

ಈಗ ರಜೆತಕ್ಕೊಂಡು ಸ್ವದೇಶಕ್ಕೆ ಹೋದದ್ದರಿಂದ ಅವರ ಕೆಲಸ ನಾಯಬ ದಿವಾನರಾಗಿದ್ದ ಕಾಜೀ ಶಹಬುದ್ದೀನ ಯೆಂಬವರು ಈಗ ದಿವಾನಗಿರಿಯ ಕೆಲಸ ನೋಡುತ್ತಾರೆ. ಪೂರ್ವಚಾರ್ಯರು ತಿರಿಗಿ ಬಂದ ಬಳಿಕ ಶಾಹಾಬುದ್ದೀನ ಸಾಹೇಬ ಸಾಹೇಬರು ದೇಶಪರ್ಯಟನಾರ್ಥವಾಗಿ ಯುರೋಪಖಂಡಕ್ಕೆ ಹೋಗತಕ್ಕವರಿದ್ದಾರೆಂದು ಸುದ್ದಿಯುಂಟು. ಕಾಜೀ ಶಾಹಾಬುದ್ದೀನ ಸಾಹೇಬರು ಧಾರವಾಡದ ಈಗಿನ ಮಾಮಲೇದಾರರಾದ ಕಾಜೀ ಕಮರುದ್ದೀನ ಸಾಹೇಬರ ಅಣ್ಣಂದಿರಾದದರಿಂದ ಈ ಸುದ್ದಿಯನ್ನು ಕೇಳಿ ನಮಗೆ ಬಹಳ ಸಂತೋಷ ವಾಗುತ್ತದೆ.

—೦—

ಅಮೇರಿಕದಲ್ಲಿ ಕಾನಡಾ ದೇಶದವನೊಬ್ಬ ಶಿಲ್ಪಿಗನು ತಗಡಿನ ಬೊಚ್ಚೆಗಳನ್ನು ಮಾಡಿದ್ದಾನೆ. ಈ ಬೊಚ್ಚೆಗಳನ್ನು ಹಾಕಿಕೊಂಡು ಅವನು ೬೦ ಮಿನಿಟಿನೊಳಗೆ ಪಾವು ಮೈಲು ನೀರಿನ ಮೇಲೆ ನಡೆದು ತೋರಿಸಿದನು. ಈ ಬೊಚ್ಚೆಗಳು ೩ ಫೂಟು ಉದ್ದ, ೧ ಫೂಟು ಅಗಲು ಇರುತ್ತವೆ. ಇವುಗಳೊಳಗೆ ಆ ಶಿಲ್ಪಿಗನು ಹವೆಯನ್ನು ತುಂಬಿ ನೀರ ಮೇಲೆ ತೇಲುವ ಹಾಗೆ ಮಾಡಿದ್ದಾನೆ.

—೦—

ಗ್ವಾಲ್ಹೇರಿಯಲ್ಲಿ ಮಹಾದಜೀ ಸಿಂದ್ಯನು ಮೊದಲು ತನ್ನ ಸೈನ್ಯದೊಂದಿಗೆ ಹೋಗಿ ನಿಂತದ್ದರಿಂದ ಅದಕ್ಕೆ ಲಷ್ಕರ ಎಂಬ ಹೆಸರು ಬಂತು. ಆದರೆ ಈಗ ಶ್ರೀಮಂತ ಜಯಾಜೀರಾವ ಸಿಂದೆ ಇವರು ಈ ಪಟ್ಟಣಕ್ಕೆ ಜಯನಗರವೆಂಬ ಹೆಸರು ಇಟ್ಟಿದ್ದಾರೆಂದು ಕೇಳುತ್ತೇವೆ.

—೦—

ಮೆಹರ್ಬಾನ್ ರಸೆಲ್ ದೊರೆಗಳು ಮೇ ೧ ನೇ ತಾ ರೀಖಿನ ಪೂರ್ವದಲ್ಲಿ ನಿಶ್ಚಯವಾಗಿ ಬರತಕ್ಕವರಿದ್ದಾರೆಂ ತಿಳಿದದೆ.

—೦—

ರಾ. ರಾ. ರಾಮಜೀ ಬಾಳಾಜೀ ಕರಂದೀಕರ ಇವರು ಳಗಾವಿಗೆ ಹೋಗಿ ಅಲ್ಲಿ ಡೆಪ್ಯುಟಿ ಇನಸ್ಪೆಕ್ಟರರ ಆಫೀಸಿ ಚಾರ್ಜ ತಕ್ಕೊಂಡರು

—೦—

ಇಲ್ಲಿ ಹಾಯಸ್ಕೂಲಿನ ಹೆಡ್ಡ ಮಾಸ್ತರರಿಗೆ ಇಲ್ಲಿಯ ಹವೆಯು ಅನಾರೋಗ್ಯಕರವಾದದರಿಂದ ಅವರು ಬೇಗ ಮತ್ತೊಂ ದು ಕಡೆಯಲ್ಲಿ ವರ್ಗ ಮಾಡಿಸಿಕೊಳ್ಳುವ ಪ್ರಯತ್ನ ನಡೆ ಸಿದ್ದಾರೆಂದು ಕೇಳುತ್ತೇವೆ.

—೦—

ಶ್ರೀರಂಗ ಕಾಲೇಜದ ಹೈಸ್ಕೂಲ ಪ್ರಿನ್ಸಿಪಾಲರಾದ ರಾ. ರಾ. ಶ್ರೀನಿವಾಸ ರಾಮಚಂದ್ರ ಸಾಠೇ ಇವರು ಸದ್ಯಕ್ಕೆ ತಿರುಗಿ ಬರುವದಿಲ್ಲ. ಇವರು ಬಹುತರ ಹಾಯ್ಕೋರ್ಟಿ ಲ್ಲಿ ಕಾಯಮ್ ಆಗಿ ನಿಂತಾರೆಂದು ತೋರುತ್ತದೆ. ಇವ ರ ಸ್ಥಳದಲ್ಲಿ ಈಗ ರಾ. ರಾ. ಸುಬ್ಬರಾವ ಯಾಜಗಿ ಇವರು ಕೆಲಸ ಮಾಡುತ್ತಾರೆ.

—೦—

ರಾವಸಾಹೇಬ ಸೀತಾರಾಮ ವಿಶ್ವನಾಥ ಪಟವರ್ಧನ ಇ ವರು ಈ ದಕ್ಷಿಣಭಾಗಕ್ಕೆ ಬಂದಾಗಿನಿಂದ ತಾಲೂಕು ಜಿಲ್ಲೆ ಗಳಲ್ಲಿ ಕೂಡಿ ಸುಮಾರು ೧೫೦ ಶಾಲೆಗಳು ಈ ಪ್ರಾಂತ ದಲ್ಲಿ ಹೆಚ್ಚಾದದ್ದಲ್ಲದೆ ಇನ್ನೂ ಕೆಲವು ಹೊಸ ಶಾಲೆ

ಗ ಆಗ ತಕ್ಕವುಗಳೆಂದು ಕೇಳುತ್ತೇವೆ.

ಪೂರ್ವದಲ್ಲಿ ಧಾರವಾಡದ ಅಂಗ್ಲೋವರ್ನಾಕ್ಯು
ಶಾಲೆಯ ಹೆಡ್ ಮಾಸ್ತರರಾಗಿದ್ದ ರಾ. ರಾ. ಭಾ
ಘೋಂಡದೇವ ಗೋಖಲೆ ಇವರಿಗೆ ಮೆಹರಬಾನ ಡಾ
ಸ್ಕರ ಧೊರೆಗಳು ಸದ್ಯಕ್ಕೆ ಇಲ್ಲಿಯ ಹಾಯಸ್ಕೂಲಿನ
ಫಸ್ಟ್ ಆಸಿಸ್ಟಾಂಟರ ಕೆಲಸ ಕೊಟ್ಟದ್ದು ಕೇಳಿ ನಮ್ಮ
ಬಹಳ ಸಂತೋಷ ವಾಯಿತು.

ಭೂಮಿಯ ಒಳಮೈಯು.

೫೩ ಹಿಂದಿನ ಪಾಠಗಳಲ್ಲಿ ಭೂಪೃಷ್ಠದ ಮೇಲೆ ನ
ಡೆಯುವ ಸಂಗತಿಗಳಲ್ಲಿ ನಿಮ್ಮ ಲಕ್ಷ್ಯವು ತೊಡಗಿತ್ತು.
ನ್ನು ಭೂಮಿಯ ಒಳಮೈಯನ್ನು ಕುರಿತು ನಾವು ಯೆ
ೀನು ಅರಿತು ಕೊಳ್ಳ ಬಹುದು ನೋಡುವ.

೫೪ ಭೂಮಿಯ ಗರ್ಭದೊಳಗಿನ ಸ್ಥಿತಿಗತಿಗಳು ನ
ಯಷ್ಟು ಮಾತ್ರವೂ ತಿಳಿಯುವದು ಅಸಾಧ್ಯವೆಂದು
ಸ್ಪರ್ಶನಕ್ಕೆ ತೋರಬಹುದು. ಭೂಮಿಯು ಅತಿಮಾ
ಧದಷ್ಟೊಂದು ಗೋಲವಿರುತ್ತದೆ. ದೊಡ್ಡ ರೊಂದು ಪರ್ವ
ಮೇಲೆ ನೊಣಗಳು ತಿರುಗಾಡಿದಂತೆ ಭೂಮಿಯ ಮೇ
ನಾವು ತಿರುಗಾಡುತ್ತೇವೆ. ಅತ್ಯುನ್ನತವಾದ ಪರ್ವತದ
ಯಿಂದ ಅತಿ ನಿಮ್ನ ಖನಿಯ ಬುಡದವರೆಗೆ ನಾವು
ಡುವ ಪದಾರ್ಥಗಳೆಲ್ಲ ಕೃತ್ರಿಮ ಭೂಗೋಲದ ಮೇ
ಹಚ್ಚಿದ ಬಣ್ಣದೊಳಗಿನ ಪದಾರ್ಥಗಳಂತೆ ಇರುತ್ತವೆ
ಗಲೂ ಕೆಲ ಕೆಲವು ದೇಶಗಳಲ್ಲಿ ಭೂಮಿಯ ಗರ್ಭ

ಹೊಳಗೆ ನಡೆಯುವ ಸಂಗತಿಗಳನ್ನು ತಿಳಿಕೊಳ್ಳುವ ಗಳು ಉಪಲಬ್ಧವಾಗಿರುತ್ತವೆ. ಭೂಗರ್ಭದ ಜ್ಞಾನ ಕ್ಕಿಗೆ ವಿಶೇಷವಾಗಿ ಆ ಮಾರ್ಗಗಳಿಂದ ಪ್ರಾಪ್ತವಾಗಿ

೨೫೪ "ಜ್ವಾಲಾಮುಖಿ"ಗಳೆಂದರೆ ಉರಿಯುವ ಗ ನ್ನು ಕುರಿತು ನೀವು ಯಾವದಾದರೂ ಪುಸ್ತಕದ ರ ಬಹುದು (೧೯ ನೇ ಆಕೃತಿಯನ್ನು ನೋಡು). ದ್ದಗಳು ಭೂಗರ್ಭದ ಸ್ವರೂಪವನ್ನು ತಿಳಿಸುವ ಮು ರ್ಗಗಳಾಗಿರುತ್ತವೆ.

೨೫೫ ಕೆಲತ್ತೊಂದು ಜ್ವಾಲಾಮುಖಿಯನ್ನು ಅದು ಉರಿಯು ಹುಟ್ಟುವ ಪೂರ್ವದಲ್ಲಿ ನೀವು ನೋಡಿ ಕಲ್ಪಿಸಿರಿ. ಈ ಗುಡ್ಡವು ಶಂಕ್ವಾಕೃತಿಯದಾಗಿ ತು ಅತಿಸ್ವಲ್ಪ ಅಗಲವಾದದ್ದಿರುತ್ತದೆ. ಇದರ ತುದಿಯೊ ಳಗೆ ಹೊಗೆಯು ಹೊರಡುತ್ತಿರುತ್ತದೆ. ಈ ಗುಡ್ಡದ ಕಲಿನ ಮೇಲೆ ಬೂದಿಗಲ್ಲುಗಳೂ, ಬೂದಿಯೂ, ಹುದ ದ ಕರೆ ಕಲ್ಲಿನ ದೊಡ್ಡ ದೊಡ್ಡ ಹಾಸಿಗೆಗಳೂ, ಇರು ನೀವು ಈ ಗುಡ್ಡದ ಮೇಲೆ ಯೇರುವಾಗ ಮೇಲಕ್ಕೆ ದ ಹಾಗೆ ನೆಲವು ನಿಮ್ಮ ಕಾಲಿಗೆ ಹೆಚ್ಚಿಗೆ ಬಿಸಿ ತ್ತದೆ, ಮತ್ತು ಅಲ್ಲಲ್ಲಿಗೆ ಉಗಿಯು ನೆಲದೊಳಗಿಂದ ಕಡುವದು ನಿಮ್ಮ ದೃಷ್ಟಿಗೆ ಬೀಳುವದು. ಕಡೆಯಲ್ಲಿ ದ ತುದಿಗೆ ಹೋಗಿ ನೋಡಲಾಗಿ ಅಲ್ಲಿ ದೊಡ್ಡದೊ ಪ್ರೊರಳನಂಥ ಬಾಯಿಯು ನಿಮಗೆ ಕಾಣಿಸುವದು, ಆ ರಳಿನಂಥ ಸುರಂಗದಿಂದ ಹೊರಡುವ ನಿಬಿಡವಾದ ಘ ತ್ತು ನಿಮ್ಮ ಮೋರೆಗೆ ತಗಲಿದ ಹಾಗೆ ಕೈಲಾದ ವ ಬಿಸ್ತವಾಗಿ ಮೋರೆಯನ್ನು ಆಚ್ಛಾದಿಸಿಕೊಂಡು, ಸ್ಥೋ

ವರೆಗೆ ಯೇರಿ ಬೊಗ್ಗಿ ನೀವು ವೊಳಗೆ ನೋಡಬಹು
ದು. ಆಳವಾದ ಬಾವಿಯ ಬುಡದಲ್ಲಿ ಕಾಣಿಸು
ವಂತೆ ಆ ಸುರಂಗದ ಬುಡದಲ್ಲಿ ನಿಮಗೆ ಹೊಂ
ಗೆಯ ಪ್ರವಾಹವು ಕಾಣಿಸುವದು. ಅದು ಕಾದು
ಕುದಿಯುತ್ತಿರುತ್ತದೆ. ಅದರ ಮೇಲೆ ಗುಡ್ಡ
ಮೇಲೆ ನೀವು ನೋಡಿದಂಥ ಕರೆ ಕಲ್ಲಿನ ಬಣ್ಣದ ಕೆ
ಅಲ್ಲಲ್ಲಿಗೆ ಕಾಣಿಸುತ್ತಿರುತ್ತದೆ. ಈ ಕುದಿಯುವ
ಳಗಿಂದ ಕಲ್ಲುಗಳೂ ಹೊಗೆಯೂ ಆಗಾಗ್ಗೆ ಮೇಲಕ್ಕೆ
ಚಿಮ್ಮುತ್ತಿರುತ್ತವೆ; ಒಮ್ಮೊಮ್ಮೆ ಈ ರಸವು ತಾನೇ
ರವಾಗಿ ಹಾರಿ ಹೊರಚೆಲ್ಲುತ್ತದೆ. ಈ ರಸದಿಂದ ಹಾ
ರುವ ಕಲ್ಲು, ಧೂಳಿ, ಹೊಗೆಗಳು ಆಕಾಶವನ್ನು ಮು
ಚ್ಚುತ್ತವೆ.

೫೬. ಜ್ವಾಲಾಮುಖಿಯ ಸುರಂಗದಂಥ ಮುಖಕ್ಕೆ ಇಂಗ್ಲಿಷಿ
ನಲ್ಲಿ "ಕ್ರೇಟರ" ಯೆಂಬ ಹೆಸರುಂಟು. ಅದರ ಬು
ಡದಲ್ಲಿ ಅತಿಶಯವಾಗಿ ಕಾದು ಕುದಿಯುವ ರಸಕ್ಕೆ "ಲಾ
ವಾ" ವೆಂಬ ಹೆಸರು ಕೊಡಬಹುದು. ಯಾಕೆಂದರೆ
ಈ ರಸವು ಹೊರಗೆ ಬಂದು ಬಿದ್ದು ಆರಿತೆಂದರೆ ಮೇ
ಲೆ ಹೇಳಿದ ಕರೆ ಕಲ್ಲು ಆಗುತ್ತದೆ. ಈ ರಸದೊಳಗಿಂದ
ಗಳೂ ಉಗಿಯೂ ಅತಿವೇಗದಿಂದ ಮೇಲಕ್ಕೆ ಹಾರಿ
ವಾಗ ಸುರಂಗದ ಒಳ ಪೈಗೆ ಜಗಲಿ ಅಲ್ಲಿಯ ಬೂ
ಧೂಳಿ, ಕಲ್ಲು, ಮುಂತಾದವುಗಳನ್ನು ಕಿತ್ತಿ ಜಪ್ಪು
ದ ಹಾರಿಸಿಕೊಂಡು ಬರುತ್ತವೆ.

೫೭. ಜ್ವಾಲಾಮುಖಿಯ ಬುಡದಲ್ಲಿ ಶಿಲಾರಸವು ಬೆಳ್ಳಗಾಗು
ವರೆಗೆ ಕಾಯುತ್ತಿರುವ ಕಾರಣ ಅದರ ಬುಡದಲ್ಲಿ ಆ

ತಿಶಯವಾದ ಉಷ್ಣತೆಯು ಇರುತ್ತದೆಂದು ತರ್ಕಿಸ
ಆಸ್ಪದ ವಾಗುತ್ತದೆ. ಈ ಉಷ್ಣತೆಯು ಸಾವಿರಾರು
ರ್ಷಗಳಿಂದ ಏಕಪ್ರಕಾರವಾಗಿ ತನ್ನ ಕೆಲಸವನ್ನು ನ
ತ್ತಿರುವ ಕಾರಣ, ಇದಕ್ಕೆ ಯೆಂದೂ ಭಂಗವಿಲ್ಲೆಂದು
ಳ ಬಹುದು.

ಆದರೆ ಜ್ವಾಲಾಮುಖಿಯು ಉರಿಯಲಿಕ್ಕೆ ಆರಂಭಿಸಿ
ಮೇಲೆ ಹೇಳಿದ ಉಷ್ಣತೆಯ ನಿಜವಾದ ಸ್ವರೂಪವು
ವಾಗುತ್ತದೆ. ಉರಿಯು ಹೊರಡುವ ಪೂರ್ವದಲ್ಲಿ ಪ್ರ
ರಡು ದಿವಸ ಜ್ವಾಲಾಮುಖಿಯು ಸುತ್ತು ಮುತ್ತಲಿನ
ವು ನಡುಗ ಹತ್ತುತ್ತದೆ. ಕಡೆಯಲ್ಲಿ ದೊಡ್ಡ ತೋ
ಗಳನ್ನು ಹಾರಿಸಿದಂತೆ ಸಪ್ಪಳವು ಯೆದೆಬಿಡುವ ಹೊರಡ
ತ್ತುತ್ತದೆ. ಅನಂತರ ಜ್ವಾಲಾಮುಖಿಯ ಬಾಯಿಯ
ದೇಶವು ಬಹುತರವಾಗಿ ಕೆತ್ತಿ ತುಂಡು ತುಂಡಾಗಿ
ಶಕ್ಕೆ ಹಾರಿ ಹೋಗುತ್ತದೆ. ಆ ಮುಖದೊಳಗಿಂದ ರ
ಡುವ ಉಗಿಯಿಂದ ಹುಟ್ಟಿದ ಅತಿ ವಿಶಾಲವಾದ
ದಗಳು ಮುಗಿಲಿನಲ್ಲಿ ದಿಕ್ಕಿಲ್ಲದೆ ಹಬ್ಬುತ್ತವೆ. ಆ
ಯು ಸಂಗಡ ಕಾದ ಕಲ್ಲುಗಳೂ ಧೂಳಿಯೂ ಏಕಪ್ರ
ವಾಗಿ ಹಾರಿ ಹೋಗುತ್ತಿರುತ್ತವೆ. ದೊಡ್ಡ ದೊಡ್ಡ ಕ
ಳು ಹಿಂದಿರುಗಿ ಆ ಮುಖದೊಳಗೇ ಆಗಲಿ ಗುಡ್ಡದ
ಲಿನ ಮೇಲಾಗಲಿ ಬೀಳುತ್ತವೆ. ಆದರೆ ಬೂದಿಯು
ಮೀರಿ ಹಾರಿ ಹೋಗಿ ಆಕಾಶವನ್ನು ಮುಸುಕಿ ಸುತ್ತು
ತ್ತು ಯೆಷ್ಟೋ ಮೈಲುಗಳವರೆಗೆ ಕತ್ತಲೆಯನ್ನುಂಟು
ಡುತ್ತದೆ. ಕಡೆಯಲ್ಲಿ ಆ ಬೂದಿ ಸುತ್ತುಮುತ್ತಲಿನ ಗ್ರಾಮ
ಮೇಲೆ ದಟ್ಟವಾಗಿ ಬಿದ್ದು ಜನರನ್ನು ಗೋಳಾಡಿಸುತ್ತದೆ.

ಂದ ಬೆಳ್ಳಗಾಗಿ ಹೊಳೆಯುವ ಶಿಲಾರಸವು ಮೇಲಕ್ಕೆ
ಗುಡ್ಡದ ಇಳುಕಲಿನ ಮೇಲೆ ಬಿದ್ದು ಬುಡದ ಮಟ್ಟ
ಳಿದು ಅಲ್ಲಿದ್ದ ತೋಟ, ಹೊಲ, ಮುಂತಾದವುಗಳ
ಸುಟ್ಟುಬಿಡುತ್ತದೆ. ಈ ಬಗೆಯ ಸ್ಥಿತಿಯು ಯೆ
ವಾರಗಳವರೆಗೆ ನಡೆದು ಕಡೆಯಲ್ಲಿ ಜ್ವಾಲಾಮುಖಿಯು
ಶಾಂತ ವಾಗುತ್ತದೆ. ಅಂದರೂ ಉಗಿಯೂ ಗ್ಯಾಸಗಳೂ
ಂದ ಯೆಷ್ಟೋ ದಿವಸಗಳವರೆಗೆ ಹಾರಿ ಬರುತ್ತಿರುತ್ತವೆ.
ಸುಮಾರು ೧೬೦೦ ವರ್ಷಗಳ ಪೂರ್ವದಲ್ಲಿ ನೇಪಲ್ಸ್
ಣದ ನೆರೆಯಲ್ಲಿ ಜ್ವಾಲಾಮುಖಿಯಂಥಾದೊಂದು ಪರ್ವ
ತ್ತು. ಅದರ ಬಾಯಿ ಮೇಲೆಲ್ಲ ಅಡವಿ ಬೆಳೆದಿದ್ದ
ರಣ ಅದು ಜ್ವಾಲಾಮುಖಿಯುಂಟೆಂದು ಯಾರಿಗೂ ಗೊ
ತ್ತಿಲ್ಲ. ಅದರೊಳಗಿಂದ ಹೊಗೆ, ಉಗಿ, ಬೂದಿ, ಶಿಲಾ
ಸ, ಮುಂತಾದವುಗಳು ಯೆಂದೆಂದು ಹೊರಡುತ್ತಿದ್ದಿಲ್ಲ.
ದರಿಂದ ಆ ಪರ್ವತದ ಸುತ್ತುಮುತ್ತು ಯೇಷ್ಟೋ ಗ್ರಾ
ಗಳು ವಸ್ತಿಯಾಗಿದ್ದವು. ಆ ಪ್ರಾಂತದ ಹವೆಯು ಬ
ಮನೋಹರವಾಗಿದ್ದ ಕಾರಣ ರೋಮಾಪಟ್ಟಣದ ನಿವಾಸಿಗ
ಸಾವಿರಾರು ಬಂಗಲೆಗಳನ್ನು ಆ ಪರ್ವತದ ಮೇಲೆ ತ
ದ್ದರು. ಆದರೆ, ವೊಂದಾನೊಂದು ದಿವಸ ಮೊದಲು
ನೂ ಚಿನ್ಹಗಳನ್ನೂ ತೋರಿಸದೆ ದೊಡ್ಡದೊಂದು ತೋ
ಹಾರಿಸಿದ ಹಾಗೆ ಭಯಂಕರವಾದ ಸಪ್ಪಳವಾಗಿ ಆ ಪರ್ವ
ತದ ಮೇಲ್ಭಾಗವು ಆಕಾಶಕ್ಕೆ ಹಾರಿ ಹೋಯಿತು. ಅತ
ಶವಾದ ಬೂದಿಯ ವೃಷ್ಟಿಯು ಸುತ್ತುಮುತ್ತು ಕೆಲವು
ಲುಗಳವರೆಗೆ ಏಕಪ್ರಕಾರವಾಗಿ ನಡೆದದರಿಂದ ಮೇಲೆ
ಳಿದ ಗ್ರಾಮಗಳಲ್ಲಿ ಮಧ್ಯರಾತ್ರಿಯಂತೆ ಕತ್ತಲು ಮುಸು

ಕಿತ್ತು. ಆ ಗುಡ್ಡದೊಳಗಿಂದ ಹಾರಿ ಬೀಳುವ ಕಲ್ಲು
ಗಳೂ ಬೂದಿಯಿಂದಲೂ ಬಹು ಜನರು ಸತ್ತು ಹ
ರು. ಕಡೆಯಲ್ಲಿ ಯಾವತ್ತು ಪ್ರಳಯವು ಶಾಂತವಾ
ಳಿಕ ಮೊದಲು ಮನೋಹರವಾದ ಗ್ರಾಮಗಳಿಂದಲೂ
ಣಗಳಿಂದಲೂ ಸಸ್ಯಾದಿಗಳಿಂದಲೂ ಅತಿ ರಮಣೀಯ
ಕಾಣುತ್ತಿದ್ದ ಆ ಪರ್ವತದ ಸುತ್ತು ಮುತ್ತಲಿನ ಪ್ರ
ತ್ತು ದಾವಾಗ್ನಿಯಿಂದ ಸುಡಲ್ಪಟ್ಟ ಅಡವಿಯಂತೆ
ಸಹತ್ತಿತು. ಯತ್ತ ನೋಡಿದತ್ತ ಧೂಳಿಯ ರಾಶಿ
ಸುಟ್ಟ ಕಲ್ಲುಗಳೂ ಕಾಣುತ್ತಿದ್ದವು. ಆ ಧೂಳಿಯ
ಪರ್ವತದ ಸುತ್ತುಮುತ್ತಲಿನ ಗ್ರಾಮಗಳೆಲ್ಲ ಪೂರಾ ಕ
ಹಾಗೆ ಮುಚ್ಚಿ ಹೋದವು. ಆ ಗ್ರಾಮಗಳಲ್ಲಿ ಹರ
ನಿಯಮ್ ಪಾಂಪಿಯಾಯು ಯೆಂಬೆರಡು ಬಹಳ ಹ
ದ ಪಟ್ಟಣಗಳಿದ್ದವು. ಈ ಗ್ರಾಮಗಳು ಧೂಳಿಯಿಂದ
ರ್ಣವಾಗಿ ಮುಚ್ಚಿ ಹೋದಕಾರಣ ಇವು ಯಿಂಥಾ
ದಲ್ಲಿ ಇದ್ದವೆಂಬ ಕುರುಹು ಸಹ ಮುಂದೆ ಉಳಿಯ
ಆದರೆ ಸುಮಾರು ೧೫೦೦ ವರ್ಷಗಳ ನಂತರ ಅ
ತ್ತಾಗಿ ಈ ಪಟ್ಟಣಗಳು ಗೊತ್ತು ಹತ್ತಿದವು. ಅದ
ಯವುಗಳಮೇಲೆ ಬಿದ್ದಂಥ ಕಲ್ಲು, ಮಣ್ಣು, ಧೂಳಿ,
ೞ, ಮುಂತಾದವುಗಳನ್ನು ಅಗಿದು ತೆಗೆದು ಈ ಪಟ್ಟ
ಳು ಮೇಲೆ ಕಾಣುವಹಾಗೆ ಮಾಡಿದ್ದಾರೆ. ಪಾಂಪಿ
ಈ ಪಟ್ಟಣದ ಬೀದಿಗಳಲ್ಲಿ ಈಗ ನೀವು ಸುಖದಿಂದ
ಗಾಡಬಹುದು. ಅಲ್ಲಿಯ ಮನೆಗಳೂ, ಅಂಗಡಿಗಳೂ,
ಟಕ ಗೃಹಗಳೂ, ಗುಡಿಗಳೂ, ಈಗ್ಯೂ ಕಾಣುತ್ತ
ಆದರೆ ಅವುಗಳ ಛಾವಣಿಗಳು ಮಾತ್ರ ಇರುವ

Notices.

ಜಾವಕ ನಂಬರು ೨೧೮.

ಧಾರವಾಡ ಜಿಲ್ಹೇದೊಳಗಿನ ಯಾವತ್ತು ಸ್ಕೂಲ ಮಾ
ರರಿಗೆ—

ಕೆಳಗೆ ಸಹೀ ಮಾಡುವವರ ಕಡೆಯಿಂದ ನೋಟೀಸು ಕೊ
ಡುವದೇನಂದರೆ—೧ನೇ ಯೆತ್ತೆಯಿಂದ ೩ನೇ ಯೆತ್ತೆಯ
ನಕ ಹುಡುಗರಿಗೆ ಓದುವದಕ್ಕೂ ಬರೆಯುವದಕ್ಕೂ ಮತ್ತು
ತ ಮಾಡುವದಕ್ಕೂ ಉತ್ತಮ ರೀತಿಯಿಂದ ಬರಲಿಕ್ಕೆ
ಬೇಕು. ಭೂಗೋಲ ವಿಷಯದ ಕಡೆಗೆ ಆಠವಡೇದಲ್ಲಿ ವಂ
ದಡು ತಾಸು ಕೊಟ್ಟರೆ, ಸಾಕು. ಉಳಿದ ವೇಳೆಯಲ್ಲಿ
ಮೇಲೆ ಬರದ ೩ ಪ್ರಕಾರ ವಿಷಯದಕಡೆಗೆ ಯೆಲ್ಲ ಮಾ
ಸ್ತರರು ವಿಶೇಷ ಲಕ್ಷ್ಯ ಕೊಡಬೇಕು.— ತಿಳಿಯುವದು
ರೀಖು ೧೯ ಯಪ್ರೇಲ ೧೮೭೯. ೩.

Chanabassappa B. Dharwar.
ಡಿ. ಎ. ಇನಸ್ಪೇಕಟರ ಜಿಲ್ಲಾ ಧಾರವಾಡ.

—o—

ಸರಕ್ಯೂಲರ ನಂಬರು. ೩೧೩೪

ಧಾರವಾಡ ಜಿಲ್ಹೇದೊಳಗಿನ ಯಾವತ್ತು ಸ್ಕೂಲ ಮಾಸ್ತ
ರಿಗೆ—

ಕೆಳಗೆ ಸಹೀಮಾಡುವವರ ಕಡೆಯಿಂದ ನೋಟೀಸು ಕೊಡಲ್ಪ
ಡುವದೇನಂದರೆ—ಮುಲಕೀ ಪರೀಕ್ಷೆಯ ದರಿಯಿಂದ ಪಾಸಾ
ದವಾರ ಜನರಿಗೆ ಮಾಸ್ತರ ಜನರು ಆ ಪರೀಕ್ಷೆಯಲ್ಲಾಗ

ವ ಪೂರ್ವದಲ್ಲಿ ಯೇನಿಕೆ ದಿವಸಗಳತನಕ ಇವನು
ಊರಿನಲ್ಲಿ ಇದ್ದನೆಂಬ ಬಗ್ಗೆ ಸರಟೀಫಿಕೀಟನು ಕೊ
ಹುಂವಾಟು ಇರುತ್ತದೆ. ಅದರಂತೆ ಖಾನದೇಶಜಿಲ್ಲೆ
ಲೋಹಾನೇರ ಯೆಂಬ ಊರಿನ ಮಾಸ್ತರನು ಜೋಸಿ
ಬವನೊಬ್ಬ ಅದ್ದ ಹೆಸರಿನ ಉಮೇದವಾರನಿಗೆ—ಇವ
ಪರೀಕ್ಷೆಯಾಗುವ ಪೂರ್ವದಲ್ಲಿ ಯೇನಿಕೆ ಮುದ್ದತಿನ
ಇಂಥಾ ಊರಿನಲ್ಲಿ ಇದ್ದನೆಂಬ ವಿಷಯವಾಗಿ ಸ
ಟು ಕೊಟ್ಟಿದ್ದನು. ಪರಂತು ಆ ಉಮೇದವಾರನು
ಮುದ್ದತಿನ ತನಕ ಆ ಊರಲ್ಲಿ ಇದ್ದದ್ದು ಸುಳ್ಳು
ಈ ಅಪರಾಧದ ದೆಸೆಯಿಂದ ಆ ಮಾಸ್ತರನಿಗೆ ಆರು ತಿಂ
ನಕ ಆತನ ಪಗಾರದ ಅನೇ ಹಿಂಸೆ ದಂಡ ಮಾ
ಮುಂದೆ ಅವನ ಸ್ಥಿತಿ ಸುಧಾರಿಸಿದರೆ ಅವನ ಪ
ಪಗಾರವನ್ನು ಕಾಯಂ ಮಾಡಬೇಕು. ಇಲ್ಲದಿದ್ದರೆ,
ಮುಂದೆ ಆರು ತಿಂಗಳ ತನಕ ಇದೇ ಪ್ರಕಾರ ದಂ
ಡಬೇಕೆಂದು ಮೇಹರಬಾನ ಡಾಯರೇಕಟರ ಸಾಹೇಬ
ಹದ್ದೂರವರು ಠರಾವು ಮಾಡಿದ್ದಾರೆ. ಆದಕಾರಣ ಮಾ
ಸರು ಇದನ್ನು ಲಕ್ಷದಲ್ಲಿಟ್ಟು ಉಮೇದವಾರ ಜನರ
ವಾಗಿ ಪಕ್ಕಾ ಮಾಹಿತಿ ತಿಳಕೊಳ್ಳದ ಹೊರತು ಸ
ಕೀಟನ್ನು ಕೊಡಬಾರದು. ತಿಳಿಯುವದು ತಾ. ೩೧
ರ್ಷ ೧೮೭೯ ಮುಕ್ಕಾಮ ಲಕ್ಷ್ಮೇ

Chanabassappa B. Dharw
ಡ. ಎ. ಇನಸ್ಪೇಕಟರ ಜಿಲ್ಲಾ ಧಾರವಾ

ಸರಕ್ಯೂಲರ ನಂಬರು. ೨೨೩೬

ಬೆಳಗಾವ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ ಸೂಚನೆಯೇನಂದರೆ—ಯಾವ ತಿಂಗಳ ಫಿ ಅದೇ ತಿಂಗಳಿನ ಪಗಾರ ಬಿಲ್ಲಿನೊಳಗೆ ಯಾವತ್ತು ವಸೂಲ ಮಾಡಿ ತಾಲೂಕ ಖಜಾನೆಯೊಳಗೆ ಸರ್ಕಾರ ಕಡಿಗೆ ಭರಣಾ ಮಾಡುತ್ತಿರುವದಕ್ಕೆ ಬಳಗಡೆ ಸರ್ಕಾರ ಹುಕುಂಗಳಿದ್ದು ಕೆಲವು ಮಾಸ್ತರರು ಕೆಲವು ಭರಣಾ ಮಾಡಿ ಕೆಲವು ಶಿಲಕು ಬಾಳಿಸುತ್ತಾರೆ ಇದು ಬಹಳ ಗೈರ ಶಿಸ್ತದೆ. ಇನ್ನು ಮುಂದೆ ಫೀ ಶಿಲಕು ಇಡದೆ ಭರಣಾ ಮಾಡುತ್ತಿರಬೇಕು. ಶಿಲಕು ಬಾಳಿಸಿದರೆ ದಂಡ ಆಗರ ಯೋಗ್ಯ ತಜವೀಜ ಆಗುವದು. ತಿಳಿಯುವದು ತಾ॥ ೨೨ ಮಾರ್ಚ ೭೯.

Roaji B. Karandikar.
ಡಿ. ಇ. ಇ. ಬಿ. ಬೆಳಗಾವ.

ಸರಕ್ಯೂಲರ ನಂಬರು. ೨೨೩೭.

ಬೆಳಗಾವ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ. ಸೂಚನೆಯೇನಂದರೆ—ಕೆಲವು ಮಾಸ್ತರರು ರಜೆದ ಮೇಲೆ ಹೋಗ್ಯ ಸಾಲಿಯ ಚಾರ್ಜ ಯಾವತ್ತು ಕೊಡದೆ ಚಾಲು ಸದಾ ಮಾತ್ರ ಚಾರ್ಜ ಕೊಟ್ಟು ರಿಪೋರ್ಟ ಮಾಡಿ ಹೋಗುತ್ತಾರೆ. ಇದು ಬಹಳ ಗೈರ ವಹಿವಾಟ ಇರುತ್ತದೆ. ಸರ್ಕಾರ ಕಡಿಗೆ ಸರಕಾರಿ ಹಣವು ಶಿಲಕು ಇದ್ದರೆ ಅದರ ಸಹಿತ ಯಾವತ್ತು ಚಾರ್ಜ ಕೊಡಲಿಕ್ಕೇ ಬೇಕು. ಇನ್ನು ಮುಂದೆ ಈ ಪ್ರಕಾರ ಗೈರ ವಹಿವಾಟ ಮಾಡಿದರೆ ಅವರ ವಿಷಯ ಯೋಗ್ಯ ವಿಚಾರ ಮಾಡಲಾದೀತು. ತಿಳಿಯುವದು

ತಾ. ೨೨ ಮಾರ್ಚ ೧೮೭೯.

Roaji B. Karan
ಡಿ. ಇ. ಇ. ಜಿ. ಬಿ

Correspondence.
ಪತ್ರವ್ಯವಹಾರವು.

ರಾ|| ದಕ್ಷಿಣ ಭಾಗದ ಶಾಲಾಪತ್ರಕದ, ಎಡೀಟರ
ಸ್ನಿಧಾನಕ್ಕೆ.

ಮಿ|| ವಿ|| ಅಯ್ಯಾ! ನನ್ನ ೧೮೭೯ ಇಸವಿ ಫೆಬ್ರುವಾರಿ
ಗಳ, ಸ್ಕೂಲ ಪೇಪರ ಪಾನು ೪೭—೪೮ರಲ್ಲಿ, ಕಲ
ಜಿಲ್ಲಾ ವಿಜಾಪುರ ತಾಲೂಕ ಪೈಕಿ, ಕನ್ನೂರ ಸಾಲೆ
ನೀಟರ, ಸಂಗಪ್ಪಾ ಬಾಪು ಅವರ, ಇವರು ಕೊಟ್ಟ
ಐವ ಹಣ್ಣಿನ ಲೆಖ್ಖವನ್ನು ಬಿಡಿಸಿ, ಅಚ್ಚುಹಾಕಿ,
ಮಾಡುವಗೋಸ್ಕರ, ಸನ್ನಿಧಾನಕ್ಕೆ ಕಳುಹಿಸಿದ್ದೇನೆ.
ಸ್ತಾರದ ಭಯದಿಂದಾ, ಅವರು ಕೊಟ್ಟ ಲೆಕ್ಕವನ್ನು
ನು ಇಲ್ಲಿ ವಿವರಿಸಲಿಲ್ಲ. ಗ್ರಾಹಕರು, ಸದರಹು
ವನ್ನು, ನೋಡಬೇಕು.

ರೀತಿ

ಜನರ ಸಂಖ್ಯಾ ಸಮವಿದ್ದರೆ, ಆ ಸಂಖ್ಯೆಯ ಅರ್ಧ
ಮಾತ್ರದಲ್ಲಿ ಒಂದು ಕಡಿಮೆ ಮಾಡಿ, ಬಂದು ಕಡಿಮೆ
ರ ಸಂಖ್ಯೆಯಿಂದಾ, ಗುಣಿಸಬೇಕು. ಅಂದರೆ ಇಚ್ಛಿತ
ಸ್ಥ್ಯ ಯಾಗುವದು.

ಜನರ ಸಂಖ್ಯಾ ವಿಷಮ ವಿದ್ದರೆ, ಆ ಸಂಖ್ಯಾದ

ಷ್ಟ ಘಾತಮೂಲ, ಅದರಲ್ಲಿ; ಒಂದು ಕಡಿಮೆ, ಮೂಲ-
ದ ಸಂಖ್ಯೆಯು ಕಳೆಯಲಾಗಿ, ಇಚ್ಛಿತ ಸಂಖ್ಯೆ ದೊರೆಯುವದು.
ಅನೇಕ ಉತ್ತರಗಳು ಬೇಕಾದರೆ, ಮೇಲಿನಂತೆ ಉತ್ತ
ರವನ್ನು ತೆಗದು, ಅದರಲ್ಲಿ ಮೂಲ ಸಂಖ್ಯೆಯ, ಒಂದು
ಕಡ್ಮೆ ಘಾತ ಕೂಡಿಸುತ್ತ ಹೋದರೆ; ಬೇಕಾದಷ್ಟು ಹೊಸ
ಉತ್ತರಗಳು, ದೊರೆಯುತ್ತವೆ.

ದೃಷ್ಟಾಂತಕ್ಕೆ, ಅವರು ಕೊಟ್ಟ ಸಂಖ್ಯೆ;(೪) ಸಮ ವಿರುವ ಕಾರಣದಿಂದ,

(ವರ್ಗ) (ಚತುರ್ಘಾತ)

×೪ = ೧೬ × ೧೬ = ೨೫೬ − ೧ = ೨೫೫ × ೩ = ೭೬೫.

೩) ವಿಷಮ ಸಂಖ್ಯೆ ಇದ್ದ ಕಾರಣದಿಂದ. ೩ × ೩ = ೯ × ೩ = ೨೭ −
೨ = ೨೫ ಉತ್ತರ.

ತಾ॥ ೧೭ ಏಪ್ರೀಲ ೧೮೭೯ ಇ. { ಜಗನ್ನಾಥ ಶ್ರೀಧರಗೋ.
ಹೆ. ಮಾ. ಬೊಮ್ಮನ ಹ.

ಮು. ಬಿ. ತಾ. ಹಾ. ಜಿ. ಧಾ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರ ಸಂ
ನ್ನಿಧಾನಕ್ಕೆ,

ಬಹಳ ವಿನಯಪೂರ್ವಕವಾಗಿ ಬೇಡಿಕೊಳ್ಳುವದು ಯೇನಂ
ದರೆ ಈ ಕೆಳಗೆ ಬರೆದ ಲೆಖ್ಖವನ್ನು ತಮ್ಮ ಕರಕಮಲ
ದಿಂದ ಶುದ್ಧಪಡಿಸಿ ಪತ್ರಿಕೆಯಲ್ಲಿ ಪ್ರಕಟಿಸಿ ಇದಕ್ಕೆ ಯಾರಾ
ದರೂ ಕೊಟ್ಟ ಉತ್ತರವನ್ನು ತಮ್ಮ ಪತ್ರದ್ವಾರದಿಂದಾ ಪ್ರ
ಕಟಿಸಿ ಸಂತೋಷ ಪಡಿಸ ಬೇಕೆಂದು ಕೋರುತ್ತೇನೆ. ನಾ
ನಿದು ತಮಗೆ ಪತ್ರ ಬರೆದವನಲ್ಲ ಇದು ನೂತನವಾಗಿ
ಬರೆದಿರುವದು ಏನಾದರು ನ್ಯೂನತೆ ಇದ್ದಾಗ್ಯೂ ಕ್ಷಮಿಸಿರಿ

ದು ನಂಬಿದ್ದೇನೆ.

ಲೆಖ್ಖ

(೧) ಒಬ್ಬ ಮನುಷ್ಯನು ಒಂದು ಎಕ್ರೆಗ ಡೋಣಿಯ
ತಿಯುಳ್ಳ ಭೂಮಿಯನ್ನು ಅಗಿಸಿದನು. ಅದು ಹ್ಯಾಗ
ಬುದಲ್ಲಿ ಹತ್ತು ಚವಕ ಸಾಲ್ಯವೊಳಾ ಮೊಬ್ಬಾಗ
ಚವಕ ಹತ್ತು ಮೊಳಾ ಮತ್ತು ಒಗ್ಗ ಸಾಲ್ಲತ್ತು
ಈ ಪ್ರಕಾರ ಅಗಿಸಬೇಕಾದದಿ ಘನವದ ಘನಫೊಳಕ್ಕೆ
ದು ಆಣೆ ಕೂಲಿಯಂತೆ ಆ ಭೂಮಿಯು ಬೆಲೆ ಯೇಸಾಗುವ

ತಾರೀಖು ೩೧ | ೩ | ೭೯ ಮುಕ್ಕಾಮು ಕೋಟೂರ ತಾಲೂಕ ಧಾರವಾಡ ಜಿಲ್ಲಾ ಮುಜಕೂರ } ದಾವಲ ಮಲ್ಲದ ಹ ಸಾಹೇಬ ಹೆಡ್ಡ ಮಾ ರ ಕೋಟೂರ.

—o—

೮೩ || ದಕ್ಷಿಣ ಭಾಗದ ಕನ್ನಡ ತಾಲೂಕಾಪತ್ರಿಕೆಯ
ಟರಂಗೆ.

ತಾ || ೫ || ಐಯ್ಯಾ ತಾಲೂಕಾಪುಸ್ತಕ (೧೩)
೩೮೭ | ೮೮ ರಲ್ಲಿ ಬಂದಿಗಟ್ಟಿ ವಿದ್ಯಾರ್ಥಿಗಳು ಕೊಟ್ಟ
ಉದಾವೇ ಲೆಖ್ಖವನ್ನು ಹಿಂದಿನ ಪತ್ರದಲ್ಲಿ ಸಮಯೋನು
ಬಿಡಿಸುವೆನೆಂದು ಹೇಳಿದ್ದೆ, ಆಪ್ರಕಾರ ಸದರೀ ಲೆಖ್ಖವ
ಬಿಡಿಸಿದ ವಿವರಾ.

(ಕ)ನಿಗೆ ಕೂಡಿಕೊಳ್ಳಸೇ (ಅಬ) ಅಷ್ಟರಿಂದ್ರೇ ಆ
ಸವನ್ನು ಮಾಡಿದ್ದರೆ, (ಬ)ನಿಗೆ ಈಗ ತಿಕ್ಕ, ಮಿ
ತಿಂಗಳ ಕಿಂತಲೂ, (೩ ೧/೪) ತಿಂಗಳು ಹೆಚ್ಚು ತಿಗುತ್ತಿದ್ದವು
ಅದ ಪ್ರಯುಕ್ತ, ಇಷ್ಟು (೯೦) ತಿಂಗಳಲಿ (೩೩ ೧/೪)

ಗಲಾಗಿ, ಉಳಿದ (೫೬ ೧/೪) ಶಿ || (ಅ)ನಿಗೆ, ದೊರಿಯು
ತ್ತು. ಪರಂತು, (ಕ)ನ್ನ ಸಹಾಯಕ್ಕೆ ತೆಗದುಕೊಂಡ
ದ್ದು, (ಬ)ನಿಗೆ (೩೦) ಶಿ || ಶಿಕ್ಕವು. ಇವರ ಮೇಲಿಂದಾ
ಶಿ|| (ಬ)ನು (ಕ)ನಿಗೆ ಎರಡು ದಿವಸದ ಕೂಲಿ ಕೊಟ್ಟಂ
ತಾಯಿತು. ಆದೇ ನೇಮದ ಪ್ರಕಾರಾ (ಅ)ನು ತನ್ನ (೫೬ ೧/೪)
ರಲ್ಲಿ, (ಕ)ನಿಗೆ ಎರಡು ದಿವಸದ ಕೂಲಿ, ಕೂಲಿ (೬ ೧/೪)
ಶಿ|| ಕೊಡಬೇಕಾಯಿತು. ಮತ್ತು (ಕ)ನಿಗೆ (೧೦) ಶಿ|| ದೊರೆತ
ಇದೇ ಪ್ರಕಾರಾ, (ಅ)ನಿಗೆ (೫೦) ಶಿ|| (ಬ)ನಿಗೆ (೩೦)
ಶಿ|| ಬಂದವು. (ಕ)ನಿಗೆ ಎರಡು ದಿವಸಕ್ಕೆ (೧೦) ಶಿಲಿಂಗು
ಕೆ ೯೦ ಶಿ || ದೊರಕಿಸಲಿಕ್ಕೆ (೧೮) ದಿವಸಗಳು ಬೇಕು.
ದರೆ, (ಕ)ನು ಆ ಕೆಲಸಾ (೧೮) ದಿವಸದಲ್ಲಿ ಮಾಡುತ್ತಾನೆ. ಉ.
ಇದೇ ಕೆಲಸದಲ್ಲಿ (ಕ)ನ ಎರಡು ದಿವಸದ ಕೆಲಸಾ (೧/೯)
ಗಲಾಗಿ, ಉಳಿದ (೮/೯) ಕೆಲಸಾ (ಅಬ) ಇವರು (೫) ದಿ
ವಸಗಳಲ್ಲಿ ಮಾಡಿದಂತಾಯಿತು. ಅಂದರೆ, ಯಾವತ್ತು ಕೆ
ಲಸಾ (ಅಬ) ಇವರಿಗೆ ಮಾಡಲಿಕ್ಕೆ, (೫ ೫/೮) ದಿವಸಗಳು ಬೇ
ಕಾಗಾದರೆ, ಅವರಿಗೆ (೯೦) ಶಿ|| ಗಳು ಶಿಕ್ಕುತ್ತವೆ.
ಾಗುವ ಹಾಗೆ ಮಂದ ಪ್ರಕಾಶವಿರಬಾರದು. ೨ ಶಾಲೆಗ
ಲ್ಲಿ ವಿದ್ಯಾರ್ಥಿಗಳು ಕೂಡ್ರುವ ರೀತಿಯನ್ನು ಮಾಸ್ತರರು
ಕ್ಷವಿಟ್ಟು ನೋಡಬೇಕು, ಮತ್ತು ಅವರಿಗೆ ಬಹಳ ಸೂಕ್ಷ್ಮ
ವಾದ ಪಾಠಗಳನ್ನು ಕಲಿಯಲಿಕ್ಕೆ ಕೊಡಬಾರದು. ೩ ಹು

ಡುಗರ ಅಕ್ಷರಗಳು ತಕ್ಕ ಮಟ್ಟಿಗೆ ದೊಡ್ಡವಿರಬೇಕು. ೪ ದ್ಯಾರ್ಥಿಗಳ ಕೈಯಲ್ಲಿ ಕೊಡತಕ್ಕ ಪುಸ್ತಕಗಳಲ್ಲಿ ಸ್ವ ವಾದ ಬಿಳೆ ಕಾಗದದ ಮೇಲೆ ಅಕ್ಷರಗಳು ಅಚ್ಚು ಕಪ್ಪಾ ಮುದ್ರಿಸಲ್ಪಟ್ಟಿರಬೇಕು. ೫ ಶಾಲೆಗಳ ಕಮಿಟೀದಾರರು ಸಂಗತಿಗಳ ಸಂಬಂಧ ಆಗಾಗ್ಗೆ ಬೋಧವನ್ನು ಮಾಡುತ್ತಿರಬೇಕ

—o—

ಬಡೋದೆಯ ಶ್ರೀಮಂತ ಸಯಾಜಿರಾವ ಗಾಯಕವಾ ಇವರ ಲಗ್ನವು ಹೊಂದೆರಡು ತಿಂಗಳೊಳಗೆ ಆಗತಕ್ಕದ್ದಿ ತ್ತದೆ. ಇವರ ಪತ್ನಿಯಾಗತಕ್ಕ ಕುಮಾರಿಕೆಯು ಇಂಗ್ಲಿ ಭಾಷೆಯಲ್ಲಿಯೂ ಗಾಯನ ಕಲೆಯಲ್ಲಿಯೂ ಅತಿ ನಿಪು ಳಿದ್ದಾಳೆಂದು ಕೇಳುತ್ತೇವೆ.

—o—

ಮಿಸ್ತರ ಥಾಮಸ ಹಾಲೋವೆ ಯೆಂಬ ಬಹು ಪ್ರಖ್ಯ ತನಾದ ಡಾಕ್ತರನು ವಿಲಾಯತಿಯಲ್ಲಿ ಹೆಂಗಸರಿಗಾಗಿ ಹೊಂ ಕಾಲೇಜವನ್ನು ಕಟ್ಟಿಸಲಿಕ್ಕೆ ಆರಂಭ ಮಾಡಿದ್ದಾನೆ. ಈ ಕೆಲಸ ಅವನು ೨೫,೦೦೦೦ ರೂಪಾಯಿ ವೆಚ್ಚ ಮಾಡತಕ್ಕವನಿದ್ದಾ

———

ಅಮೇರಿಕದಲ್ಲಿ ಕೆಲವರು ಬುದ್ಧಿವಂತರು ಹುಡುಗ ರೆರಡೂ ಕೈಗಳಿಂದ ಬರೆಯಲಿಕ್ಕೂ ನಕಾಶ ತೆಗೆಯಲಿಕ ಕಲಿಸುವ ಪ್ರಯತ್ನ ನಡಿಸಿದ್ದಾರೆ. ಈ ಸಾಧನದಿಂದ ಪ ಷ್ಯ ಜಾತಿಯವರಿಗೆ ಅತಿ ಲಾಭವಾಗುವದೆಂದು ಹೊಬ್ಬ ಕೆತನು ಬರೆಯುತ್ತಾನೆ.

—c—

ಜೇಪಾನ ದೇಶದವರು ಯೆಲ್ಲಿ ಕಡೆಯಲ್ಲಿ ಸುಧಾರಣೆ

ಕ್ರಮವನ್ನು ಅತಿ ತ್ವರೆಯಿಂದ ನಡಿಸಿದ್ದಾರೆಂಬುವದು ಪ್ರಸಿದ್ಧವೇ ಉಂಟು, ಆದರೆ ಆ ದೇಶದಲ್ಲಿ ಈಗ ಚಿತ್ರಲಿಪಿಯು ನಡಿಯುತ್ತದೆ. ಅಂದರೆ ಶಬ್ದಗಳ ಸಂಜ್ಞೆಗಾಗಿ ಬೇರೆ ಬೇರೆ ಪದಾರ್ಥಗಳ ಆಕೃತಿಗಳನ್ನು ಬರಿಯ ಬೇಕಾಗುತ್ತದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳು ಲೇಖನ ವಿದ್ಯೆಯನ್ನು ಕಲಿತವರೆಂದೆನಿಸಿಕೊಳ್ಳ ಬೇಕಾದರೆ, ನಿಕೃಷ್ಟ ಪಕ್ಷಕ್ಕೆ ೧೦೦೦ ಚಿತ್ರಗಳನ್ನು ತೆಗಿಯುಲಿಕ್ಕೆ ಕಲಿಯಬೇಕು. ವಿದ್ವಾಂಸನೆಂದೆನಿಸಿ ಕೊಳ್ಳುವವನು ೧೦೦೦೦ ಚಿತ್ರಗಳನ್ನು ತೆಗಿಯುಲಿಕ್ಕೆ ಕಲಿತಿರುತ್ತಾನೆ. ಕವಿಗಳೆಂಬುವವರು ಅಸಂಖ್ಯ ಚಿತ್ರಗಳನ್ನು ಕಲಿಯ ಬೇಕಾಗುತ್ತದೆ. ಆದರೆ ಅತಿ ಸುಲಭವಾದ ಚಿತ್ರವನ್ನು ತೆಗಿಯಲಿಕ್ಕೆ ಹತ್ತೆಂಟು ವಿಧಿಗಳನ್ನು ಕಲಿಯ ಬೇಕಾಗುತ್ತದೆ. ಈ ಬಗೆಯಾಗಿ ಮಿತಿಯಿಲ್ಲದಂಥ ತೊಂದರೆಗಳುಳ್ಳ ಈ ಚಿತ್ರಲಿಪಿಯನ್ನು ತೆಗೆದು ಹಾಕಿ, ಇಂಗ್ಲಿಷ ಲಿಪಿಯನ್ನು ತಮ್ಮ ದೇಶದಲ್ಲಿ ನಡಿಸಬೇಕೆಂದು ಜಪಾನೀ ಸರಕಾರದವರು ಆಲೋಚಿಸುತ್ತಾರೆ.

— * —

ವಿಲಾಯತಿಯೊಳಗಿನ ಸರಕಾರೀ ಶಾಲೆಗಳಲ್ಲಿ ಧರ್ಮಸಂಬಂಧದ ವಿಷಯಗಳನ್ನು ಕಲಿಸುವ ನಡಾವಳಿಯು ಬಹು ದಿವಸದಿಂದ ಕಟ್ಟಾಗಿದೆ. ಅದರಿಂದ ಆ ಶಾಲೆಗಳಲ್ಲಿ ಕಲಿತು ದೊಡ್ಡವರಾದಂಥವರೆಲ್ಲರು ಬಹುತರ ಧರ್ಮಕ್ಕೆ ವಿರೋಧಿಗಳಾಗಿ ನೀತಿಯನ್ನು ತೀರ ಬಿಟ್ಟು ಕೊಡುತ್ತಾರೆಂದು ಮಿಸ್ತರ ಡಿಕ್ಸನ್ನೆಂಬವನೊಬ್ಬ ವಿದ್ವಾಂಸನು ಸಾರ್ವಜನಿಕ ರೀತಿಯಿಂದ ದೊಡ್ಡ ದೊಡ್ಡ ಸಭೆಗಳಲ್ಲಿ ಪ್ರತಿಪಾದಿಸಿದರಿಂದ ಹೊಳಗಡೆಯಲ್ಲಿ ಸರಕಾರೀ ಶಾಲೆಗಳಲ್ಲಿ ಧರ್ಮದ ಪಾಠಗಳನ್ನು ಕಲಿ

ಸಃವ ಉದ್ಯೋಗವು ನಡೆದಿತು. ವಿಲಾಯತಿಯ ಸರಕಾರಿ ಶಾಲೆಗಳಲ್ಲಿ ಧರ್ಮದ ಪ್ರವೇಶವಾದ ಬಳಿಕ ಈ ದೇಶದ ಳಗಿನ ಸರಕಾರೀ ಶಾಲೆಗಳಲ್ಲಿ ಸಹ ಅದರ ಪ್ರವೇಶವಾ ಲಿಕ್ಕೆ ಅವಕಾಶವಾಗಲಿಕ್ಕಿಲ್ಲೆಂಬುವದು ಸ್ವಾಭಾವಿಕವೇ.

ರಶಿಯಾ ದೇಶದ ಸರಕಾರೀ ಶಾಲೆಗಳಲ್ಲಿ ಕಲಿಯು ವಿದ್ಯಾರ್ಥಿಗಳೆಲ್ಲ ಬಹುತರವಾಗಿ ತಮ್ಮ ದೇಶದ ಬಾದಶ ನಿಗೆ ವಿರೋಧಿಗಳಾಗುತ್ತ ನಡೆದಿದ್ದಾರೆ. ಅದರಿಂದ ಬಾದ ಶಹನಿಗೆ ಮನಃಪೂರ್ವಕವಾಗಿ ಸನ್ಮಾನ ಕೊಡುವಂಥ ಶಿಕ್ಷಕ ನ್ನೇ ಹುಡುಕಿ ತೆಗೆದು ಅಂಥವರನ್ನೇ ಸರಕಾರೀ ಶಾಲೆಗಳ ನೇಮಿಸಬೇಕೆಂದು ರಶಿಯನ್ ವಿದ್ಯಾ ಖಾತೆಯ ಪ್ರಧಾನ ಜಾಹೀರನಾಮೆಯನ್ನು ಪ್ರಕಟಿಸಿದ್ದಾನೆ.

ಅಮೇರಿಕದೊಳಗಿನ ಮಸಾಚಸೆಟ್ಸ ಯೆಂಬ ಸಂಸ್ಥಾನ ಲ್ಲಿ ೨೦ ಲಕ್ಷಕ್ಕಿಂತ ಹೆಚ್ಚು ಪ್ರಜೆಗಳಿಲ್ಲ. ಆದರೆ ಅಲ್ಲಿಂ ಸರಕಾರದವರು ವಿದ್ಯಾ ಖಾತೆಗಾಗಿ ಪ್ರತಿವರ್ಷ ೧೦೦೦೦೦ ಪೌಂಡು ವೆಚ್ಚ ಮಾಡುತ್ತಾರೆ. ಆ ಸಂಸ್ಥಾನದಲ್ಲಿ ೫೭೭೫ ಶಾಲೆಗಳೂ ಅವುಗಳಲ್ಲಿ ೮೫೦೦ ಜನ ಶಿಕ್ಷಕರೂ ೩೧೦೦೦ ವಿದ್ಯಾರ್ಥಿಗಳೂ ಉಂಟು.

ದಕ್ಷಿಣಭಾಗದ ವಿದ್ಯಾರ್ಥಿಗಳ ಮ್ಯಾಟ್ರಿಕ್ಯುಲೇಶನ್ ಪರೀ ಯು ಹೋದವಾರದಲ್ಲಿ ಬೆಳಗಾವಿಯೊಳಗೆ ಆರಂಭವಾಗಿತ

ಮಿ. ಡಾಯರೆಕ್ಟರ ದೊರೆಗಳು ಬೇಗ ಇತ್ತ ಕಡೆಗೆ!

ತಕ್ಕವರಿದ್ದಾರೆಂದು ಕೇಳುತ್ತೇವೆ.

—o—

ಪೊ. ಇನ್‌ಸ್ಪೆಕ್ಟರ ಧೋರಣೆಗಳಿಂದ ಧಾರವಾಡದ ಹಾಯ ಸ್ಕೂಲು, ಟ್ರೇನಿಂಗ ಕಾಲೇಜುಗಳ ವಾರ್ಷಿಕ ಪರೀಕ್ಷೆಗಳನ್ನು ಈ ತಿಂಗಳಿನ ಆರಂಭದಲ್ಲಿ ಮುಗಿಸಿ, ಈಗ ಕೊಲ್ಹಾಪುರದ ಹಾಯಸ್ಕೂಲಿನ ಪರೀಕ್ಷೆ ತಕ್ಕೊಳ್ಳಲಿಕ್ಕೆ ಹೋಗಿದ್ದಾರೆ.

—o—

ಟ್ರೇನಿಂಗ ಕಾಲೇಜದೊಳಗಿನ ಗಣಿತದ ಶಿಕ್ಷಕರಾದ ರಾ. ರಾ. ಸುಬರಾವ ಯಾತಗಿರಿ ಇವರು ಪುಣೆಯ ಕಾಲೇಜಕ್ಕೆ ವಿದ್ಯಾಭ್ಯಾಸಕ್ಕೋಸ್ಕರ ಬೇಗ ಹೋಗತಕ್ಕವರಿದ್ದಾರೆ. ಅವರ ಸ್ಥಳದಲ್ಲಿ ಇಲ್ಲಿಯ ಹಾಯಸ್ಕೂಲಿನಲ್ಲಿ ಅಸಿ. ಮಾಸ್ತರರಾಗಿದ್ದ ರಾ. ರಾ. ಸುರಜಭಾನ ಇವರನ್ನು ನೇಮಿಸುವ ಬಗ್ಗೆ ಶಿಫಾರಸು ಆಗುತ್ತದೆಂದು ಕೇಳುತ್ತೇವೆ.

—o—

ದೀಪಾವಳಿಯ ಸೂಟಿ ಮುಗಿದು ಇಲ್ಲಿಯ ಹಾಯಸ್ಕೂಲ್ ಟ್ರೇನಿಂಗ ಕಾಲೇಜುಗಳು ಹೋದ ವಾರದಲ್ಲಿ ಶುರುವಾದವು.

—o—

Uttara Ramacharitra.

ಉತ್ತರರಾಮಚರಿತ್ರವು.

೩ನೇ ಅಂಕವು.

(೧೯೯ನೇ ಪುಟದಿಂದ ಮುಂದಕ್ಕೆ ಸಾಗಿದ್ದು.)

ತ — ಅಗೋ! ನೋಡು! ಜಾನಕಿಯು ಗೋದಾವರೀ ಗಂ ರತ್ನದಿಂದ ಹೊರಟು ಈ ಕಡೆಗೆ ಬರುತ್ತಾಳೆ:—

||ಸಾಕಿಗಳು||

ಬಿಳುಪೇರಿವೆ, ಬಾಡಿಹವು ಕಪೋಲಂಗಳು ಸುಳಿಮುಂಗು
ರುಳಲ್ಲಿ ॥ ಸುಳಿದಾಡುತ್ತಿವೆ, ಸುಂದರಮುಖಿ ಜಾನಕಿ ಬ
ರುವಳು ವನದಲ್ಲಿ ॥೪॥

ಕರುಣಾರಸದಾಕೃತಿಯೋ ಸತಿಯೈ! ಮಿಥಿಲೇಂದ್ರಾನ್ವಯಜಾ
ತೆ । ವಿರಹವ್ಯಥೆಯೋ ಪ್ರತ್ಯಕ್ಷಮೆನಲ್ ತೋರುವಳೀಬಹ
ಸೀತೇ ॥೫॥

ಮುರಲಾ— ಹೌದು! ಇವಳು ಜಾನಕಿಯೇ!

ಮಾಲಿನೀ

ಅಸಿಯುಜನಿಯುಬೆಳ್ಪಾಂತಿರ್ಪಮೈಗೊಂಚಲಿಂ,ಫೇ ।
ಬಿಸಿಡಕಿಸಲಯಂಬೋಲ್ ಕೋಮಲಂಬಾಡುತಿರ್ಪಂ ॥
ಅಸುವಳಿಸುವಳಲ್ಲಿತ್ತಗ್ರಹಂಮಾಗಿನೇರ್ಪ ।
ಬಸಿಗೆಬಳಲುವಂತಾಕೇತಕೀಗರ್ಭಪತ್ರಂ॥೬॥

(ಈ ಪ್ರಕಾರ ಮಾತಾಡಿ ಇಬ್ಬರೂ ಹೊರಟು ಹೋಗುತ್ತಾರೆ)

॥ಇತಿ ವಿಷ್ಕಂಭಕಃ॥

(ಬಳಿಕ ಹೂಗಳನ್ನು ಕೊಯ್ಯುತ್ತಾ ಕಾರುಣ್ಯದಿಂದಲೂ, ಉತ್ಕಂಠೆಯಿಂದಲೂ ಆಲಿಸಿ ಕೇಳುತ್ತಾ ಸೀತೆಯು ಬರುತ್ತಾಳೆ)

ಸೀ— ಅಪ್ಪಯ್ಯಾ ನನ್ನ ಜೀವದ ಗೆಳತಿಯಾದ ವಾಸಂತಿಯು ಮಾತನಾಡುತ್ತಾಳೆಂಬಂತೆ ಕೇಳುತ್ತದೆ.

(ಪಡದೆಯ ಹಿಂದೆ ಶಬ್ದವಾಗುತ್ತದೆ.)

॥ಮಂದಾಕ್ರಾಂತಾ ಪೂರ್ವಾರ್ಧಂ॥

ಹಿಂದಕ್ಕಾಸಲ್ಲಕಿಯಚಿಗುರಂ ಕೊಯ್ದುಕೊಟ್ಟೋವಿದಕ್ಕೈ
ಯಿಂದೀಸ್ತಂಬೇರಮಕಲಭನಂಲೋಲನಂ ಸೀತೆಮಾತೆ॥

ಸೀ— (ನಡುವೇ ಮಾತನಾಡುತ್ತಾಳೆ) ಆದರೆ ಆತನಿಗೇನಾಯಿತು.

(ಮತ್ತೆ ಶಬ್ದವಾಗುತ್ತದೆ.)

॥ಪೂರ್ವಶ್ಲೋಕದಉತ್ತರಾರ್ಧಂ॥

ಂದಂಬುಕ್ರೀಡೆಯೊಳಿರೆ ವಧೂಸಂಗತಂತಾನದಂಮ ।
ಕ್ರಂದೋಡ್ಡತ್ತೋಡಿಸುವೆನೆನುತಂ ಬಂತು ಮತ್ತಂಗಜೇಂ
ದ್ರಂ॥ ೭ ॥

—(ಗಾಬರಿಯಾಗಿ ಕಿವಿಚ್ಚೆಗಳನಿಟ್ಟು) ಆರ್ಯಪುತ್ರರೇ
ವ ಪ್ರಿಯ ಪುತ್ರನನು ಕಾಪಾಡಿರಿ(ಮತ್ತೆ ಚನ್ನಾಗಿ ಧ್ಯಾನಕ್ಕೆ
) ಅಹಾಹಾ! ಈ ಪಂಚವಟೀ ದರ್ಶನದಿಂದ ದುರ್ದೈವಿಯಾ
ನ್ನಮುಖದಿಂದ ಪೂರ್ವಾಭ್ಯಾಸದ ಅವೇ ಅಕ್ಷರಗಳು
ಡುತ್ತವಲ್ಲಾ ಹಾ ಪ್ರಾಣವಲ್ಲಭರೇ ನನ್ನ ಶಬ್ದವು ನಿಮ್ಮ
ಳಿಗೆ ಇನ್ನು ಹ್ಯಾಗೆ ಕೇಳೀತು (ಎಂದು ಮೈಮರಿಯುತ್ತಾಳೆ)
ಇಷ್ಟರಲ್ಲಿ ತಮಸಾದೇವಿ ಬರುತ್ತಾಳೆ)

— ವತ್ಸೇ ಏಳಮ್ಮಾ ಏಳು!

(ಪಡದೆಯಲ್ಲಿ ಶಬ್ದವಾಗುತ್ತದೆ.)

ಲ್ಕೆ ವಿಮಾನರಾಜಾ ನೀನು ಇಲ್ಲೇ ನಿಲ್ಲಬೇಕು!

ನೀ—(ಅಂಜುತ್ತಾ, ಕಂಪಿಸುತ್ತಾ, ಉಲ್ಲಾಸಪಡುತ್ತಾ)
ಯ್ಯಾ ನೀರು ತುಂಬಿದ ಮೇಘದ ಗರ್ಜನೆಯಂತೆ, ಈ ಗಂ
ಧ್ವನಿಯು ಎಲ್ಲಿಂದಾಗಿರಬಹುದು? ಯಾವ ಧ್ವನಿಯ ನಿ
ೀವವು ನನ್ನ ಕರ್ಣರಂಧ್ರದಲ್ಲಿ ಪ್ರವೇಶಿಸಿ, ಮಂದಭಾ
ದ ನನಗೆ ಇದೇ ಕ್ಷಣದಲ್ಲಿ ಜೀವದಾನವನ್ನು ಕೊಟ್ಟಿತು,

ತ—(ವಾತ್ಸಲ್ಯದಿಂದ ಕಣ್ಣಿಗೆ ನೀರುತಂದು) ಹೇ ವತ್ಸೇ

॥ಇಂದ್ರವಜ್ರಾವೃತ್ತಂ॥

ಎಲ್ಲಿಂದಿದಾಯ್ತೋ ಧ್ವನಿಯುಸ್ಫುಟಂನೀಂ।
ತಲ್ಲೀನೆ ಯುತ್ಕಂಠಿತೆಯಂತಿದ್ದನಾ! ॥

ಪುಲ್ಲಾಕ್ಷಿನಿಷ್ಫೋಟಪದೋಷಧಿಂಕೇ |
ಖುಲ್ಲಾನಪಾಂತಾಳ್ಪಮಯಾರಿಯಂತೆ ||೮||

ಸೀ—ಹೇ ಭಗವತಿ ಅಸ್ಫುಟವೆಂದು ಯಾಕೆ ಅನ್ನು
ವಾನು ಪುನಃ ಚನ್ನಾಗಿ ಕಿವಿಗೊಟ್ಟು ಕೇಳಿದೆನು, ನಿಶ್ಚ
ಯವಾಗಿ ನಮ್ಮ ಪ್ರಾಣಪ್ರಿಯರೇ ಮಾತನಾಡುತ್ತಾರೆ.

ತ—ಹೌದು ಹೌದು ತಪೋನಿಷ್ಠನಾದ ಒಬ್ಬ ಶೂದ್ರ
ಗೆ ದಂಡನನ್ನು ಮಾಡುವದಕ್ಕಾಗಿ ಇಕ್ಷ್ವಾಕುವಂಶದ ರಾಜೇಂದ್ರ
ಬ್ಬನು ದಂಡಕಾವನಕ್ಕೆ ಬಂದಿದ್ದಾನೆಂದು ಕೇಳುತ್ತೇನೆ.

ಸೀ—ಹೀಗಿದ್ದರೆ ಇದೊಂದು ದೊಡ್ಡ ಭಾಗ್ಯವೆಂದು ತಿಳಿ
ತ್ತೇನೆ ಯಾಕಂದರೆ ಆ ಭೂಪತಿಯು ಇನ್ನೂ ತನ್ನ ರಾ
ರ್ಮವನ್ನು ಬಿಟ್ಟಿಲ್ಲ?

(ಮತ್ತೂ ಹಿಂದೆ ಶಬ್ದವಾಗುತ್ತದೆ)

||ವಸಂತತಿಲಕಾವೃತ್ತಂ||

ಈ ಧಾರುಣೀರುಹ ಮೃಗಂಗಳು ಬಾಂಧವರ್ನಂ|
ಗಾದಂ, ನಿವಾಸಿಸಿದೆನಿಲ್ಲಿ ಚಿರಂ ಸಭಾರ್ಯಂ||
ಹೌದಿಂತಿವು ಬಹಳ ನಿರ್ಝರಗಂಹರಂಗಳ್ |
ಗೋದಾವರೀನಿಕಟದಂತ್ರ ತಟಸ್ಥಳಂಗಳ್ ||೯||

(ಇಷ್ಟರಲ್ಲಿ ರಾಮಚಂದ್ರನ ವಿಮಾನವು ಕೆಳಗಿಳಿಯುತ್ತಾ

ಸೀ—(ರಾಮನನ್ನು ಕಂಡು)— ಓಹೋ! ಆರ್ಯಪುತ್ರರ
ತಿಯು ಹಸನಾಗಿ ಹೋಗಿದೆ ಪ್ರಭಾತ ಚಂದ್ರಮಂಡಲದಂತೆ
ಬಿಳುಪಾದಂಥ, ಕ್ಷೀಣವಾದಂಥ ದುರ್ಬಲವಾದಂಥ ಆಕಾರಗಳ
ಕೂಡಿದ್ದಾರೆ; ಇವರ ಸೌಮ್ಯ ಗಂಭೀರ ಪ್ರಭಾವದಿಂದ
ತ್ರ ನನಗೆ ಗೊತ್ತು ಸಿಕ್ಕಿತು; ಇವರೇ ನನ್ನ ಪ್ರಾಣಪ
ಳಹನು; ಇವರ ಕ್ಷೀಣದಶೆಯನ್ನು ನೋಡಿದರೆ ನನಗೆ

-ಬರುತ್ತದೆ; ಅವ್ವಾ ತಮಸಾಪೇಖಿ ನನ್ನನ್ನು ಸಂಬಾಳಿಸು
ಡವ್ವಾ (ಎಂದು ಆಕೆಯನ್ನು ಆಲಿಂಗಿಸಿ ಮೂರ್ಛಿತಳಾಗುತ್ತಾಳೆ)

ತ—(ಜಾನಕಿಯನ್ನು ಜೋಕಿಯಿಂದ ಹಿಡಿದು) ತಂಗೀ ಪ
ಸ್ವಾ ಏಳು

ಸ್ವರಲ್ಲಿ ಮತ್ತೆ ಹಿಂದೆ ಶಬ್ದ ವಾಗುತ್ತದೆ)

ನನಗೆ ಈ ಪಂಚವಟೀಸಂದರ್ಶನವಾದದರಿಂದ—

ಇತ್ತಂನೊಳಿಂನೆಗಮಗಲ್ಕೆಯ ಕಿಚ್ಚುಗುಪ್ತಂ ।
ಮತ್ತಂದುಹ್ರೊತ್ತಿ, ಭುಗಿಲೆಂದುರಿವಂತೆ ಶೋಕಾಗ್ನಂ ||
ಮುತ್ತುತ್ತದ್ದೈಯುದರ ಧೂಮಸಮೂಹದಂತೆ ಬಂ ।
ತೆತ್ತಂವಿಮೋಹವಿದು ನನ್ನದಕ್ಕೆಮುನ್ನಂ ||೧೦||

Vibrating Things

ಕಂಪಿತ ಪದಾರ್ಥಗಳು.

ಪದಾರ್ಥಗಳ ಕಂಪನವೆಂದರೆ ನಡುಗು—ನಡುಗುವ ಅಥವಾ ತೂಗಾಡುವ ಪದಾರ್ಥಗಳು ತಮ್ಮ ಸ್ಥಳ ಬಿಡುವದಿಲ್ಲ. ಉದಾಹರಣಾರ್ಥವಾಗಿ ತೊಟ್ಟಿಲ ನೋಡಿರಿ, ತಾಯಿಯು ತನ್ನ ಕೂಸನ್ನು ತೊಟ್ಟಿಲದೊಳಗೆ ಮಲಗಿಸಿ ಅದನ್ನು ತೂಗುತ್ತಾಳೆ, ಆದರೆ ಆ ತೊಟ್ಟಿಲವು ತನ್ನ ಸ್ಥಳ ಬಿಡದೆ ಹಿಂದಕ್ಕೂ ಮುಂದೆ ಮಾತ್ರ ಹೋಗಿ ಬರುತ್ತಿರುತ್ತದೆ.

ಕತ್ತುರ್ಗತ್ತುವ ರೂಪಾಂತರವು—ಪದಾರ್ಥಗಳ ಕತ್ತುರ್ಗತ್ತುವಿಯಿಂದ ನಿರಂತರವಾಗಿ ಪ್ರೊಂದೇ ಕೆಲಸವಾಗುತ್ತಿರುವದು. ನೀವು ಚಿಚ್ರೊಂದು ಕಟ್ಟಿಗೆಯನ್ನು ಬಿಸಾಕಿದರೆ, ಅದಕ್ಕೆ ಕತ್ತುರ್ಗತ್ತು ಬರುತ್ತದೆ. ಆ ಕಟ್ಟಿಗೆಯು ಕೆಲವೊಂದು ಕ್ಕೆ ತಗಲಿದರೆ ಆ ಚಕ್ರವು ತನ್ನ ಪ್ಯಸುತ್ತು ತಿರುಗು

ತ್ತದೆ; ತೂಗಗಟ್ಟಿದ ತೊಟ್ಟಿಲಕ್ಕೆ ತಗಲಿದರೆ, ಆ ತೊಟ್ಟಿಲ
ತೂಗಾಡುತ್ತದೆ; ನೀರು ತುಂಬಿದ ಪಾತ್ರೆಗೆ ತಗಲಿದರೆ,
ನೀರಿನಲ್ಲಿ ತೆರೆಗಳು ಹುಟ್ಟುತ್ತವೆ. ಇದಲ್ಲದೆ ಇವೆಲ್ಲವ
ಳಿಂದ ಹವೆಗೆ ಆಘಾತವಾಗಿ ಆ ಗತಿಯು ಹವೆಯಲ್ಲಿ
ತ್ತದೆ. ಮುಂದೆ ಹವೆಯಿಂದ ಈ ಗತಿಯು ಇನ್ನೂ
ವ ಯಾವ ಪದಾರ್ಥದಲ್ಲಿ ಹೋದೀತೆಂಬುವದಕ್ಕಂತೂ ನೇ
ವೇ ಇಲ್ಲ. ಗತಿಯು ಈ ರೂಪಾಂತರವನ್ನು ಚೆನ್ನಾಗಿ ತಿ
ರಿಸಲಾಗಿ ತಿಳಿಯುವದೇನೆಂದರೆ ಕಟ್ಟಿಗೆಯಲ್ಲಿ ಮೊದಲು
ರಳ ಮಾರ್ಗಹಿಡಿದು ಹೋಗುವ ಶಕ್ತಿಯುಂಟಾದಾಗ್ಯೂ, ಅ
ಶಕ್ತಿಯು ಚಕ್ರಾಕಾರವಾಗಿ ಭ್ರಮಣಮಾಡುವ ರೂಪವನ
ತೂಗಾಡುವ ರೂಪವನ್ನೂ ನಡುಗಿನ ರೂಪವನ್ನೂ ಧರಿಸಲ
ಸಮರ್ಥವಾಗಿರುತ್ತದೆ. ನೀರಿಗೆ ಆ ಶಕ್ತಿಯ ಸಂಬಂಧವ
ಕೂಡಲೆ ತೆರೆಗಳ ರೂಪದಿಂದ ಅದು ದೃಷ್ಟಿಗೋಚರವಾ
ತ್ತದೆ. ಈ ಪ್ರಕಾರವಾಗಿ ಶಕ್ತಿಯು ವಿಧ ವಿಧದ
ಪಾಂತರಗಳನ್ನು ಹೊಂದುತ್ತದೆ. ಆದರೆ ಅದು ಯೆಂ
ಯೆಲ್ಲಿಯೂ ನಾಶ ಹೊಂದುವದಿಲ್ಲ.

ಪದಾರ್ಥಗಳು ಅಥವಾ ಅವುಗಳ ಕಣಗಳು ಬಹಳ
ವಕಾಶವಾಗಿ ಹಿಂದೆ ಮುಂದೆ ಹರಿದಾಡಿ, ಆ ಹರಿದಾ
ಡು ನಮ್ಮ ಕಣ್ಣಿಗೆ ಕಾಣಿಸುತ್ತಿದ್ದರೆ, ಅದು ತೂಗಾ
ಡೆಂದು ನಾವು ಅನ್ನುತ್ತೇವೆ. ಆದರೆ ಆ ತೂಗಾಡುವ ಗತಿ
ಬಹು ತೀವ್ರವಾಗಿ, ಅದರ ಮೇಲೆ ನಮ್ಮ ದೃಷ್ಟಿಯು
ದ ಹಾಗಿದ್ದರೆ, ಅದಕ್ಕೆ ನಾವು ಕಂಪ ಅಥವಾ ನ
ಯೆಂದೆನ್ನುತ್ತೇವೆ. ಉದಾಹರಣಾರ್ಥವಾಗಿ, ತೊಟ್ಟಿ
ಅಗಳಾಡಿದರೆ ಅದು ತೂಗಾಡುತ್ತದೆಂದೆನ್ನುತ್ತೇವೆ;

ಬೂರಿಯ ತಂತಿಯು ಅಗಳಾಡಿದರೆ ಅದು ಕಂಪಿತವಾ
ಬತೆಂದನ್ನುತ್ತೇವೆ. ಕಂಪಿತ ಪದಾರ್ಥಗಳಿಗೆ ಹೊಂದಿಕೊಂ
ರುವ ಪದಾರ್ಥಗಳು ಸಹ ನಡಗ ಹತ್ತುತ್ತವೆ. ಆ ಹೊಂದಿ
ಕೊಂಡಿರುವ ಪದಾರ್ಥಗಳು ಪ್ರವಾಹಿ ಅಥವಾ ವಾಯು ರೂಪಿ
ಳಾಗಿದ್ದರೆ, ಅವುಗಳಲ್ಲಿ ತರಂಗಗಳು ಹುಟ್ಟುತ್ತವೆ.

೩೧ನೇ ಪ್ರಯೋಗ——ನೀವು ಒಂದು ಕೆರೆಯ ದಂಡೆ
ು ಮೇಲೆ ಹೋಗಿ ಕೂತುಕೊಂಡು ಅದರೊಳಗಿನ ನೀರನ್ನು
ಯಿಂದ ಅಗಳಾಡಿಸಿದರೆ, ಅಥವಾ ಅದರೊಳಗೆ ಕಲ್ಲು ಒ
ದರೆ, ಅದರಲ್ಲಿ ತೆರೆಗಳು ಹುಟ್ಟುತ್ತವೆ. ಆ ತೆರೆಗಳು ಒಂ
ರ ಹಿಂದೊಂದು ಬೆಳೆಯುತ್ತ ಹೋಗುವದು ನಿಮ್ಮ ದೃಷ್ಟಿ
ಬೀಳುವದು. ಹೊಳೆಯ ಮೇಲಾಗಲಿ ಸಮುದ್ರದ ಮೇಲಾ
ಲಿ ಗಾಳಿ ಬೀಸುವಾಗ ತೆರೆಗಳುಂಟಾಗಿ, ಅವು ದಂಡೆಗೆ
ಂದು ಅಪ್ಪಳಿಸುವದನ್ನು ನೀವು ನೋಡಿರಬಹುದು.

೩೨ನೇ ಪ್ರಯೋಗ——ನನ್ನ ಮುಂದೆ ನೀರು ತುಂಬಿದ
ರಾತವಿದೆ. ಈ ಪರಾತದ ಮೇಲೆ ನಾನು ಕಟ್ಟಿಗೆಯಿಂದ
ಡಿಯುತ್ತೇನೆ. ನೋಡಿರಿ, ಈ ಪೆಟ್ಟಿನಿಂದ ಮೊದಲು ಪ
ಾತದೊಳಗೆ ನಾದ ಹುಟ್ಟಿ ನಿಮಗೆ ಕೇಳಿಸಿತು; ತರುವಾಯ
ದರೊಳಗಿನ ನೀರಿನಲ್ಲಿ ನಾಲ್ಕು ದಿಕ್ಕುಗಳಲ್ಲಿ ಯೆದುರು
ದರಾಗಿ ತೆರೆಗಳು ಹುಟ್ಟಿದ್ದು ನೀವು ನೋಡಿದಿರಿ. ಕಟ್ಟಿಗೆ
ಯ ಪೆಟ್ಟಿನಿಂದ ಮೊದಲು ಪರಾತದಲ್ಲಿ ನಡುಗು ಹುಟ್ಟಿತು,
ಅಂದರೆ ಅದರ ಅಂಚು ಹಿಂದೆ ಮುಂದೆ ತೂಗಾಡ ಹತ್ತಿ
ತು. ಪ್ರತಿಯೊಂದು ತೂಗಿನಿಂದ ನೀರಿಗೆ ಪೆಟ್ಟು ತಗಲಿ,
ನೀರು ಅಗಳಾಡ ಹತ್ತಿತು; ಅದರಿಂದ ತೆರೆಗಳುಂಟಾದವು;
ವುಗಳನ್ನು ನೀವು ನೋಡಿದಿರಿ. ಆದರೆ ಪರಾತದ ಹೊರ

ಪೆಟ್ಟಿಯೊಳ್ಳಿ ಹವೆಯು ಅದಕ್ಕೆ ಹೊಂದಿ ಇರುತ್ತದೆ. ಪ
ಶದ ಅಂಚಿನ ಪೆಟ್ಟು ತಗಲಿ ಅದರೊಳಗಿನ ನೀರಿನಲ್ಲಿ
ಗಳುಂಟಾದಂತೆ ಹೊರಗಿನ ಹವೆಗಾದರೂ ಆ ಅಂಚಿನ
ಟ್ಟು ತಗಲಿ ಅದರಲ್ಲಿಯೂ ತೆರೆಗಳುಂಟಾಗುವವು. ಆದರೆ
ತಾವರಣವೇ ನಮಗೆ ಕಾಣಿಸುವದಿಲ್ಲ; ಅದರೊಳಗಿನ ತೆ
ಳಂತು ಕಾಣಿಸುವದು ಅಸಂಭಾವ್ಯವೇ. ಆದಾಗ್ಯೂ ಆ
ರೆಗಳು ನಮ್ಮ ಕಿವಿಯೊಳಗೆ ಸೇರಿ, ಅಲ್ಲಿರುವದೊಂದು ದ
ಳ್ಳಿನ ಚರ್ಮದಂಥ ಪಟಲದ ಮೇಲೆ ಅಪ್ಪಳಿಸುತ್ತವೆ. ಅ
ರಿಂದ ನಮಗೆ ಪರಾತದ ಸಪ್ಪಳವು ಕೇಳಿಸುತ್ತದೆ. ಈ
ಯೋಗದಿಂದ ನಿಮಗೆ ತಿಳಿದದ್ದೇನಂದರೆ ಪದಾರ್ಥಗಳ ಕಂ
ನದಿಂದ ನೀರೊಳಗೆ ಹುಟ್ಟುವ ತೆರೆಗಳು ಕಣ್ಣಿಗೆ ಕಾಣ
ಸುತ್ತವೆ, ಹವೆಯೊಳಗೆ ಹುಟ್ಟುವ ತೆರೆಗಳು ಕಿವಿಗೆ ಕೇಳಿಸುತ್ತ

ಸಪ್ಪಳವೂ ಸ್ವರವೂ—ಪರಾತದ ಮೇಲೆ ಒಂದೇ
ಟ್ಟು ಬಡಿದದರಿಂದ ಹವೆಯೊಳಗೆ ಒಮ್ಮೆ ಮಾತ್ರ ತೆ
ಗಳು ಹುಟ್ಟಿ ನಮ್ಮ ಕಿವಿಯೊಳಗೆ ಒಂದರಹಿಂದೊಂ
ಯಡೆ ಬಿಡದೆ ಸೇರುವ ವರೆಗೆ ಪರಾತದ್ದು ಒಂದೇ ಸ
ಳವು ನಮಗೆ ಕೇಳಿಸಿತು. ಆ ತೆರೆಗಳು ಹುಟ್ಟುವದು ನಿಂ
ಕೂಡಲೆ ಸಪ್ಪಳವಾದರೂ ನಿಂತಿತು. ಆದರೆ ಪರಾತದ ಮೇ
ಒಂದರ ಹಿಂದೊಂದು ಪೆಟ್ಟುಗಳನ್ನು ಹಾಕಿದರೆ, ಪ್ರ
ತೊಂದು ಪೆಟ್ಟಿನಿಂದ ಹವೆಯೊಳಗೆ ಹೊಸ ಹೊಸ ತೆರೆಗ
ಹುಟ್ಟುತ್ತ ನಡೆದು ಒಂದರ ಹಿಂದೊಂದು ಸಪ್ಪಳಗಳು
ಮಗೆ ಕೇಳಿಸುತ್ತವೆ. ಆ ಪೆಟ್ಟುಗಳ ಕ್ರಮವು ಅತಿ ತ್ವ
ಯಿಂದ ನಡೆದರೆ, ಸಪ್ಪಳಗಳಾದರೂ ಅತಿ ತ್ವರೆಯಿಂ
ಹೊರಡುತ್ತವೆ. ಅದರಿಂದ ಅವು ಬೇರೆ ಸಪ್ಪಳಗಳಿರು

ುಬುವನು ನಮ್ಮ ಕಿವಿಗೆ ಗೋಚರವಾಗದೇ, ಯೆಲ್ಲ ಕೂ ವ್ರೊಂದೇ ಬಹು ಉನ್ನವಾದ ಸಪ್ಪಳವಾದಂತೆ ನಮಗೆ ೋರುತ್ತದೆ. ಈ ಬಗೆಯಾಗಿ ಕೆಲವು ವೇಳೆ ಯೆಡೆ ಬಿಡದೆ ೇಳ ಬರುವ ಸಪ್ಪಳಕ್ಕೆ ನಾವು ಸ್ವರವೆಂದೆನ್ನುತ್ತೇವೆ. ಆ ಾರಣ ಸ್ವರವು ಹಲವು ಪೆಟ್ಟುಗಳ ಯೆಡೆ ಬಿಡದೆ ಕ್ರಮ ಂದ ಹವೆಯಲ್ಲಿ ಹುಟ್ಟುವ ತೆರೆಗಳಿಂದ ಹೊರಡುತ್ತದೆಂ ು ತಿಳಿಯ ತಕ್ಕದ್ದು. ನಿಯಮಿತ ಕಾಲದೊಳಗೆ ಈ ಪೆ ್ಟುಗಳ ಸಂಖ್ಯವು ಹೆಚ್ಚಾದ ಹಾಗೆ ಸ್ವರವು ಹೆಚ್ಚಿಗೆ ಉ ್ತವಾಗಿ ಕೇಳ ಬರುತ್ತದೆ. ಒಂದು ಸೇಕಂಡಿನಲ್ಲಿ ೧೬ ಂತೆ ಪೆಟ್ಟುಗಳು ಬೀಳುತ್ತ ನಡೆದರೆ, (ಮುಂದಿನ ಯಂತ್ರ ೋಡರಿ) ಅವುಗಳ ಭಿನ್ನತ್ವವು ಅಗೋಚರವಾಗಿ, ಯೆಲ್ಲ ಕ್ಕ ನೀಚಸ್ವರವು ಕೇಳ ಬರುತ್ತದೆ. ಮುಂದೆ ಪೆಟ್ಟುಗಳ ಸಂ ್ಯವು ಬೆಳೆದಂತೆ ಉಚ್ಚೋಚ್ಚವಾದ ಸ್ವರಗಳು ಹುಟ್ಟುತ್ತ . ಒಂದು ಸೇಕಂಡಿನಲ್ಲಿ ೩೨ರಿಂದ ೮೧೯೨ರ ವರೆಗೆ ಟ್ಟುಗಳು ಬೀಳುವದರಿಂದ ಹೊರಡುವ ಸ್ವರಗಳು ಸಾಧಾರ ಗಾಯಕರಿಗೆ ತಿಳಿಯುತ್ತವೆ. ಈ ಮರ್ಯಾದೆಯಲ್ಲಿ ಆ ನೆ ್ಠಕಗಳೆಂದರೆ ೫೬ ಸ್ವರಗಳಾಗುತ್ತವೆ. ಆದರೆ ಗಾಯನದ ರ್ಮವನ್ನು ಚನ್ನಾಗಿ ಬಲ್ಲವರು ವ್ರೊಂದು ಸೇಕಂಡಿನಲ್ಲಿ ೩೦೦೦ ಪೆಟ್ಟುಗಳ ವರೆಗೆ ಹುಟ್ಟುವ ಸ್ವರಗಳನ್ನು ತಿಂಗ ಸುತ್ತಾರೆ.

ಸಪ್ತ ಸ್ವರಗಳಲ್ಲಿ ಯೆಲ್ಲಕ್ಕೂ ನೀಚವಾದ ಷಡ್ಜ ಸ್ವರ ನ್ನು ಗವಾಯಿಗಳು ತೆಗಿಯುವಾಗ ಅ ಅ ಅ ಅ ಯೆಂಬ ಧ್ವನಿಗಳು ಬೇರೆ ಬೇರೆಯಾಗಿ ಹೊರಡುವ ಹಾಗೆ ತೋ ುತ್ತವೆ. ಆದರೆ ಮುಂದಿನ ಉಚ್ಚ ಸ್ವರಗಳಲ್ಲಿ ಈ ಭಿನ್ನತ್ವ

ವು ಹೆಚ್ಚೆಚ್ಚು ಅಸ್ಪಷ್ಟವಾಗುತ್ತ ಹೋಗುತ್ತದೆ. ತಂ
ರಿಗೆ ಹಚ್ಚಿದ ಪತ್ರದ ತಂತಿಯು ಹೆಚ್ಚಿಗೆ ಸಡಿಲಾಗಿರು
ದೆ. ಅದರಿಂದ ಅದನ್ನು ಬಾರಿಸಲಾಗಿ ಅದರ ತೂಗಾಟ
ಹೆಚ್ಚಿಗೆ ಸಾವಕಾಶವಾಗಿ ನಡೆಯುತ್ತದೆ. ಆದರೆ ಉಳಿದ
ತಿಗಳನ್ನು ಹೆಚ್ಚಿಗೆ ಬಿಗಿದಿರುತ್ತಾರೆ. ಅದರಿಂದ ಅವು
ತೂಗಾಟವು ಅಷ್ಟು ಸ್ಪಷ್ಟವಾಗಿ ಕಾಣಿಸುವದಿಲ್ಲ.

Notices.

ಧಾರವಾಡ ಜಿಲ್ಲೆಯಲ್ಲಿ ಲೋಕಲ್ ಫಂಡಿನ ಖರ
ಜಿ. ಪತ್ರಕ.

ಧಾರವಾಡ ಜಿಲ್ಲೆಯೊಳಗಿನ ವಿದ್ಯಾ ಖಾತೆಗೆ ಸಂಬಂಧ
ಲೋಕಲ್ ಫಂಡಿನ ಜಮಾ ಖರ್ಚಿನ ಪಟ್ಟಿ ಸನ್ ೧೮೭೭-

ರೂ. ಆ.

ಜಮೆ.

ತಾ. ೧ನೇ ಎಪ್ರಿಲ್ ಸನ್ ೧೮೭೮
ಇಸವಿ ಬಜಸ ಶಿಲಕು.... .... ೫೦೩೫೪—೧೩-

ಪ್ರೊವಿನ್ಸಿಯಲ್ ಸರ್ವಿಸಿನ
ಫಂಡಿನೊಳಗಿಂದ ನೇಮಣೂಕು.

ದೇಶಭಾಷೆಯ ಶಾಲೆಗಳಿಗೆ ಸಹಾ
ಯಕ್ಕಾಗಿ ಕೊಟ್ಟ ಹಣ ... . ೧೬೧೦೩—೦-
ಕಲಾಕೌಶಲ್ಯದ ಶಾಲೆಗೆ ಸದರ.... .... ೭೦೦೦—೦-

ಭೂಮಿಯ ತೆರಿಗೆ.

ಹಿಂದು ಆಣೆಯ ತೆರಿಗೆ(ತೃತೀಯಾಂಶ). ೫೩೪೦೮— ೦
ವಿದ್ಯಾ ಸಂಬಂಧದ ತೆರಿಗೆಯಿಂದ ವಸೂ

...ಪ ಶಾಲೆಗಳ ಫೀ ವಸೂಲು.... ೪೭೩೦— ೨—೦

ರಕಾರದಲ್ಲಿ ಇಟ್ಟ ಹಣದ ಬ.... ೧೫೫೦— ೪ —೪

...ನಿಸಿಪಾಲಿಟಿಗಳೂ ಬೇರೆ ...ರೂ

ಇಟ್ಟ ಹಣ.... .... . . ೧೨೦— ೦—೦

ತರ ಯಾವತ್ತು ಪ್ರಕಾರದ ಜಮೆ.... ೭೯೨೯—೧೩ —೭

...ರವಾಡದ ಕಲಾಕೌಶಲ್ಯದ ಶಾಲೆಗೆ

...ಕೋಸಂಯೋಗಿ ಖಾತೆಯಿಂದ ಲೋ

ಲ್ ಫಂಡಿನ ಹಣ.... .... ೨೦೦೦— ೦—೦

ಅಂತು ೧೪೩೧೯೬— ೬—೭

ಮೇಲೆ ತೋರಿಸಿದ ಶಿಲಕಿನ

ತಪಶೀಲು.

ನ್ ೧೮೭೭—೭೮ನೇ

ವರ್ಷದ ಪತ್ರಿಕೆಯಲ್ಲಿ

ತೋರಿಸಿದ ಶಿಲಕ....೪೬೩೫೪—೧೨—೪

ನ್ ೧೮೭೬—೭೭ನೇ

ವರ್ಷದ ಲೆಖ್ಖದಲ್ಲಿ ಜ

...ಯಾಗತಕ್ಕದ್ದು ಉ

ದ ಹಣ.... .... ೪೦೦೦— ೦—೦

ಅಂತು ೫೦೩೫೪—೧೨—೪

ಖರ್ಚು

...ಪಸ ಭರಣಾ ಮಾಡಿದ ಹಣ.... ೪೮— ೯—೮

ರಿಗೆ ವಸೂಲು ಮಾಡಿದಂಥ ಗ್ರಾಮಾಧಿ

...ರಸ ರಿಗೆ ಕೊಟ್ಟ ಹಣ ... . ೧೦೮೨— ೪—೬

ವಿದ್ಯಾಸಂಬಂಧದ ಖರ್ಚು

ಸಂಬಳಗಳು.

ಹೆಡ್ಡ ಮಾಸ್ತರರೂ ಅಸಿಸ್ಟಾಂಟರೂ..	೪೨೫೨೯—೭—೧೧
ನೌಕರರೂ	೧೩೩೦—೧—೯

ಸಾದಿಲ್‌ವಾರ

ಪುಸ್ತಕಗಳ ಬೆಲೆ....	೩೬೩—೭—೯
ಫಿರತೀ ಭತ್ತೆ....	೨—೪—೦
ಬಾಡಿಗೆ....	೮೨೪—೧೨—೫
ಶಾಲೆಯ ಸಾಮಾನು	೧೨೩೦—೪—೦
ಸಾದಿಲ್‌ವಾರ ಖರ್ಚು	೩೦೪೯—೧೨—೦

ಇತರ ಶಾಲೆಗಳು

ಧಾರವಾಡ ಕೆಳಕಾಕೋಸ್ತ್ರೀಯರ ಶಾಲೆ....	೪೫೬೨—೩—೦
ಸಾದಿಲ್‌ವಾರ.	೪೫೩೭—೧೫—೬

ಸಾರ್ವಜನಿಕ ಕೆಲಸಗಳು.

ಬಿಲ್ಡಿಂಗ್ ಡಿಪಾರ್ಟಮೆಂಟ ಮಾಡಿದಂಥವೂ ಲೋಕಲ್ ಫಂಡ್ ಖಾತೆಯವರು ಮಾಡಿದಂಥವೂ	೧೬೪೪೧—೧೪—೧೦
ವಿದ್ಯಾರ್ಥಿಗಳಿಗೆ ಕೊಟ್ಟ ಸಂಬಳ....	೩೪೨೭—೭—೧೧
ಇನಾಮು....	೪೦—೦—೦
ಇತರ ಯಾವತ್ತು ಖರ್ಚು....	೨೬೩—೧೦—೦

ತಾ. ೩೧ನೇ ಮಾರ್ಚ ೧೮೭೯ ದಿವಸ

ಶಿಲ್ಕು.... ....೬೩೪೪೯— ೩—೧೦

ಅಂತು ೧೪೩೧೯೬— ೬— ೮

ಧಾರವಾಡ
ತಾ. ೧ನೇ ಆಗಸ್ಟಂಬರ ೧೮೭೯

J. Elphinston
ಆಕ್ಟಿಂಗ ಕಲೆಕ್ಟರ ಮತ್ತು
ಡಿ. ಲೋ. ಕಮಿಟಿಯ ಪ್ರೆ.

—o—

ಸರ್ಕ್ಯೂಲರ ನೋಟೀಸು.

ಶಾಲೆಗಳಿಗಾಗಿ ಸ್ಥಳಗಳನ್ನು ಗೊತ್ತು ಮಾಡುವಾಗ ಈ ಕೆಳಗಿನ ಸಂಗತಿಗಳನ್ನು ಯಾವಾಗಲೂ ಲಕ್ಷ್ಯದಲ್ಲಿ ಇಡಲಿಕ್ಕೆ ಬೇಕು. (ಒಳಗಡೆಯಲ್ಲಿ ಕೆಲವು ಉದಾಹರಣೆಗಳಲ್ಲಿ ಈ ಸಂಗತಿಗಳ ಅಜ್ಞಾನವೂ ದುರ್ಲಕ್ಷ್ಯವೂ ಕಂಡು ಬಂದದರಿಂದ ಡೆಪ್ಯುಟೀ ಇನಸ್ಪೆಕ್ಟರರಿಗೂ ಬೇರೆ ಯೆಲ್ಲ ಜನರಿಗೂ ಮಾರ್ಗದರ್ಶನಾರ್ಥವಾಗಿ ಇವುಗಳನ್ನು ಕೆಳಗೆ ಬರೆದಿದ್ದೇವೆ)

೧ ಬೈಲು—ಅನುಕೂಲವಿದ್ದಲ್ಲಿ ಶಾಲೆಯ ಮನೆಯ ಸುತ್ತ ಮುತ್ತು ಬೈಲು ಪ್ರದೇಶವನ್ನು ಇಡಲಿಕ್ಕೆ ಬೇಕು. (ಅದರಲ್ಲಿ ಮುಂದೆ ತೋಟ ಮಾಡಬಹುದು). ಶಾಲೆಯ ಹತ್ತರ ವೊಂದಾಗಲಿ ಹೆಚ್ಚಾಗಲಿ ಗಿಡಗಳು, ಹರಿಯುವ ನೀರು, ಅಥವಾ ಬಾವಿ ಇದ್ದರೆ ಬಹಳ ವೊಳ್ಳೇದು. ಪ್ರತಿಯೊಬ್ಬ ಹುಡುಗನಿಗೆ ೧೦ ಚಚ್ಚೌಕು ಫೂಟಿನಂತೆ ಲೆಕ್ಕಹಿಡಿದು ಕಟ್ಟಿದ ಶಾಲೆಯಲ್ಲಿ ಮೊದಲು ಗೊತ್ತು ಮಾಡಿದ ಹುಡುಗರ ಸಂಖ್ಯೆಕ್ಕಿಂತ ಹೆಚ್ಚು ಹುಡುಗರ ಸಮಾವೇಶವಾಗಲಿಕ್ಕೆ ಅವಕಾಶ ವಿರುತ್ತದೆ. ಆ ಕಾರಣ ಶಾಲೆಯೊಳಗಿನ ಪ್ರದೇಶವನ್ನು ಪ್ರತಿ ಹುಡುಗನಿಗೆ ೧೦ ಚಚ್ಚೌಕು ಫೂಟಿನಂತೆ ಇಡಬೇಕು. ಹೊರಗಿನ ಪ್ರ

ಬೇಕಷ್ಟು (ಅಂದರೆ ಮೇಲೆ ಹೇಳಿದ ಬೈಲು) ಇದರ ಹೆಚ್ಚಾಲು, ಅಥವಾ ಪ್ರತಿಒಬ್ಬ ಹುಡುಗನಿಗೆ ೫೦ ಚಚ್ಚೌಕ ಫೂಟಿನಂತೆ (ದೊರೆಯುವ ಹಾಗಿದ್ದಲ್ಲಿ ಶಾಲೆಯ ಸುತ್ತುಮುತ್ತು ಪಡಸಾಲೆ ಸಹಿತವಾಗಿ) ಇರಬೇಕು.

೨ ಭೂಮಿಯೊಳಗಿನ ಥರಗಳು—ಲೋಕೋಪಯೋಗೀಖಾತೆಯವರು ಪಾಯಾ ಹಾಕುವದಕ್ಕೋಸ್ಕರ ಸುಮಾರು ೧೦ ಫೂಟು ತಗ್ಗು ಅಗಿಯುತ್ತಿರುತ್ತಾರೆ. ಶಾಲೆಯ ಕೆಲಸವನ್ನು ಯಾರು ಮಾಡಿದರೂ ಈ ತಗ್ಗು ಅಗಿಯಲಿಕ್ಕೇ ಬೇಕು; ಬಿಡಲಾಗದು.

೩ ನೆರೆಹೊರೆ—ಶಾಲೆಯ ಸುತ್ತುಮುತ್ತಲಿನ ಸ್ಥಿತಿಯು ಆರೋಗ್ಯಕರವಾದದ್ದಿರಬೇಕು. ಶಾಲೆಯ ನೆರೆಯಲ್ಲಿ ಯಾವದೊಂದು ಬಗೆಯ ಉಪದ್ರವವು ಅಥವಾ ಕೆಟ್ಟ ಹವೆಯು ಇರಲಿಕ್ಕಾಗದು.

೪ ಸ್ಥಳದ ಮಾಲಿಕಿಯು—ಶಾಲೆಯು ಸ್ಥಳವನ್ನು ಗೊತ್ತು ಮಾಡುವ ಪೂರ್ವದಲ್ಲಿ ಅದರ ಮಾಲೀಕರು ಸರಕಾರದವರೋ, ಬೇರೆ ಯಾರಾದರೂ ಇರುತ್ತಾರೋ, ಎಂಬುವದನ್ನು ಅಲ್ಲಿಯ ಅಧಿಕಾರಿಗಳು ನಿಃಸಂದೇಹವಾಗಿ ತಿಳಿದುಕೊಂಡು ಸರಕಾರೀ ರೀತಿಯಿಂದ ಅದನ್ನು ಇತ್ತಕಡೆಗೆ ತಿಳಿಸಬೇಕು.

೫ ಡೆಪ್ಯುಟೀ ಇನ್‌ಸ್ಪೆಕ್ಟರರೂ, ಮಾಸ್ತರರೂ, ತಾಲೂಕಾ ಕಮಿಟೀದಾರರೂ, ಸ್ಕೂಲಕಮಿಟಿಯವರೂ, ಬೇರೆ ಜನರೂ ಈ ಅವಶ್ಯಕವಾದ ಸಂಗತಿಗಳಿಗೆ ಯಾವಾಗಲೂ ಲಕ್ಷ ಕೊಡಲಿಕ್ಕೆ ಬೇಕು.

ಬೆಳಗಾವಿ
ತಾ. ೩೦ನೇ ಸಪ್ಟಂಬರು ೧೮೭೮

W. A. Russell
ಇ. ಇನ್‌ಸ್ಪೆಕ್ಟರ ದಕ್ಷಿಣಭಾ

ಸರ್ಕ್ಯೂಲ್ಲರು

ಪಾಸ್ಸೀ ವಿದ್ಯಾರ್ಥಿಗಳ ವಿಷಯವಾಗಿ—

ೀರೆ ಯೆಲ್ಲ ಪ್ರಕಾರದ ಹುಡುಗರಿಗೆ ಶಾಲೆಯ ಫೀಯನ್ನು
ು ಮಾಡುವ ಪೂರ್ವದಲ್ಲಿ ಕೂಲಿಕಾರರೂ ಮುಂತಾದವರ
ಳಿಗೆ ಮಾಫಮಾಡಲಿಕ್ಕೆ ಬೇಕು. ಸರಕಾರಕ್ಕೆ ತೆರಿಗೆ
ಲಂಥ ಜನರೂ ಕೂಲಿಕಾರರೂ ಹಣ ವೆಚ್ಚಮಾಡದೆ ವಿ
ಭ್ಯಾಸದ ಲಾಭವನ್ನು ಪಡೆಯ ಬೇಕೆಂಬ ಉದ್ದೇಶವಿರು

ಡೆಪ್ಯುಟೀ ಇನ್‌ಸ್ಪೆಕ್ಟರು ಈ ಹುಕುಮು ಅಮಲಿನಲ್ಲಿ
ು ಇದರ ಪರಿಣಾಮವೇನಾಯಿತೆಂಬುವದನ್ನು ನಮಗೆ ತಿ
ಬೇಕು. ಈ ಹುಕುಮಿನಿಂದ ಈ ಸಂಬಂಧ ಯಾವತ್ತು ಹು
ುಗಳು ರದ್ದು ಮಾಡಲ್ಪಟ್ಟವೆ.

ಗಾವಿ
೨೧ನೇ ನವಂಬರು೧೮೭೯

W. A. Russell
ಇ. ಇನ್‌ಸ್ಪೆಕ್ಟರ ದಕ್ಷಿಣಭಾಗ

ಸರಕ್ಯೂಲರ ನಂಬರು. ೧೧೮೯

ಬೆಳಗಾವ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾ
ಸ್ತರರಿಗೆ—

ಈ ಜಿಲ್ಹೆಯಲ್ಲಿ ಸಗಾರ ವೇಳೆ ವೇಳೆಕ್ಕೆ ಮುಟ್ಟಿಸದಿಲ್ಲ.
ಗೆ ತೋರುತ್ತದೆ. ಕಾರಣ ಗೋಕಾವಿಯ ಮಾಸ್ತರರು
ಗೆ ಬರದಂತೆ ಯಲ್ಲಾ ಮಾಸ್ತರರು ವಹಿಮಾಟ ಇಡಬೇಕು.
ಗೋಕಾವಿಯ ಸ್ಕೂಲ ಮಾಸ್ತರರು ಕೆಲಸಾ ಚನ್ನಾಗಿ
ುಸುವದನ್ನು ನೋಡಿ ನಮಗೆ ಬಹಳ ಸಂತೋಷವಾಯಿ
ಇದೇ ಪ್ರಕಾರ ಯಲ್ಲಾ ತಾಲೂಕಾ ಸ್ಕೂಲ ಮಾಸ್ತ
ಕೆಲಸಾ ನಡಿಸಿದಲ್ಲಿ ಒಳ್ಳೇದಾಗುವದು. ತಾರೀಖು ೨೨

ಸೆಪ್ಟೆಂಬರ ೧೮೭೯

Raoji B- Karandikar.

ಡಿ. ಎ. ಇ. ಜಿ. ಬೆಳಗಾವ.

ರಾ. ರಾ. ಗೋಕಾಕ ತಾಲೂಕಿನೊಳಗಿನ ಸ್ಕೂಲ ಮಾಸ್ತರರಿಗೆ—ಗೋಕಾಕ ಸ್ಕೂಲ ಮಾಸ್ತರ ಸಂಬತು ೧ ಕಡಿಂದ ಬರವು ಹೋಗುವದೇನಂಧರೆ—

ನಡಿಯುವ ತಿಂಗಳಿನ ೧೨ನೇ ತಾರೀಖಿನ ವರಿಗೆ, ರದು ಫೋಕೆ ಮಾಮಲೇದಾರರ ಕಚೇರಿಗೆ ಬಂದಿದ್ದಿಲ್ಲ. ರಣಾ ಪಗಾರ ಹಣಾ ನಮ್ಮ ಕೈಯಲ್ಲಿ ಬರು ಯಂಡರ್ ನಾಲ್ಕು ದಿವಸಗಳಾದರೂ ಬೇಕಾಗುವವೆಂಬು ಬಂದವರಿಂದ ತಾರೀಖು ೧೪ನೇ ದಿವಸ ನಮ್ಮ ಸಾ ಬಂದು ನಂತರವಾವು ಇವನನ್ನು ತಾಲೂಕ ಮ.ಜಕೂರ ಪೂರ್ವ ಭಾಗದ ಮಾಸ್ತರರ ಕಡಿಂದ ಫೀ ಹಣಾ ವವಕ್ಕೆ ಕಳಸಿದವಿ, ಈ ಕೆಲಸಕ್ಕೆ ಯಾವಾಗಲು ೩, ವಸಗಳು ಬೇಕಾಗುತ್ತವೆ. ಅದರಂತೆ ತಾ. ೧೬ನೇ ಶಿಕಾಯಿಯು ತಿರಿಗಿ ಬರತಕ್ಕವನಿದ್ದು ಇನ್ನುವರೆಗೆ ರ.ವಲ್ಲಿ. ಕಾರಣಾ ತಾ. ೧೮ನೇ ದಿವಸು ಪಗಾರ ಣಾ ಖಜಾನೆಯಿಂದ ನಮ್ಮ ಕಡಿಗೆ ಬಂದಿದ್ದು ನಿಮ್ಮ ಕಡಿಗೆ ಕಳಿಸುವದಕ್ಕೆ ಹರಕತ್ತು ಆಗಿರುತ್ತದೆ, ಇವು ಜ್ಜಿಗೆ ದಿವಸಗಳು (ಯೇನು ಕಾರಣ) ಹತ್ತಿದವು ಇದ ಯ..ಷದಿಲ್ಲ. ಕಾರಣಾ ಈ ಪತ್ರ ನಿಮಗೆ ಬರದಿರು ದಂಬಮಾಡಿ ಶಿಪಾಯಿಯು ನಿಮ್ಮ ಊರಲ್ಲಿ ಯಂ ಯಷ್ಟು ತಾಸಿಗೆ ಬಂದಿದ್ದನು ಇವನ್ನು ಬರಹು ಕ ಮೆಷಬರ್ನಗಿ ಮಾಡಬೇಕು. ಮತ್ತು ಮುಂದಾದರು

ಗೆ ಈ ಕ್ರಮವು ಚಾಲು ಇಡಬೇಕು ಅಂದರೆ ಸುಸ್ತಿ
ರುತ್ತಿಲ್ಲ. ಶಿವಾಯಿಯು ಸಂಗಡ ಯುರೋಪ ಸರಕ್ಯಾಲರ
ನ್ನು ಕೊಟ್ಟಿರುತ್ತೇನೆ. ಆದರೆ ಅವುಗಳ ನಕಲು ತೆಗದು
ಳ್ಳಲಿಕ್ಕೆ ೧೫ ದಿವಸಕಿಂತಾ ಹೆಚ್ಚು ವೇಳೆ ಬೇಕಾಗು
ತೆ ಇರುವದಿಲ್ಲ. ಹೀಗಿದ್ದು ಇಷ್ಟು ತಡವಾದದರಿಂದ ತ
ಲ್ಲರ ಪಗಾರ ಮುಟ್ಟಲಿಕ್ಕೆ ಅವಕಾಶಸಿಗುವದು. ಆಚಾರ
ಂತಾದ ಅಕಸ್ಮಾತ ಬರುವ ಕಾರಣದ ಹೊರ್ತು ಪ್ರಳಕಿ
ಯಲ್ಲಿ ಶಿವಾಯಿಯನ್ನು ತೀವ್ರವಾಗಿ ಮುಂದಕ್ಕೆ ರವಾ
ವ ವಿಷಯದಲ್ಲಿ ಯುಲ್ಲರ ಕಡೆಂದ ಬಂದೋಬಸ್ತ ಇ
ಯುಲ್ಲರ ಘಾಯಿದೆಯಾಗಿ ನನ್ನ ಮೇಲೆ ಪಗಾರ ಮು
ವದಕ್ಕೆ ತಡವಾದ ಶಬ್ದವು ಬರಲಿಕ್ಕಿಲ್ಲ. ನಮ್ಮ ಬಾಂ
ಜನರಿಗೆ ಪಗಾರ ಅಗದಿ ಅಲ್ಪ ಇದ್ದು ಅದು ಸಹ
ದೊರಿಯದಿದ್ದರೆ ಅವರ ಅವಸ್ಥೆ ಯೇನಾಗುತ್ತದೆಂಬು
ಯುಲ್ಲರು ಒಳ್ಳೆ ಆದಷ್ಟು ತೀವ್ರದಿಂದ ಯುಲ್ಲರ
ರ ಕಳಸುತ್ತಿರಬೇಕೆಂದು ಆಶಿಸುತ್ತೇನೆ. ಆದರೆ ಈ ಕೆ
ತಾವೆಲ್ಲರು ಮನಸಿನಿಂದ ಮದತು ಮಾಡದ ಹೊ
ಕೆಲಸ ಸಿದ್ಧಿಗೆ ಹೋಗುವಂತೆ ಇಲ್ಲ. ಕಾರಣ ತ
ಲ್ಲರಿಗೂ ಪ್ರಾರ್ಥನೆ ಮಾಡುತ್ತಲಿದ್ದೇನೆ. ಆದರೆ ಶಿವಾ
ಯು ನಿಮ್ಮಲ್ಲಿ ಯಾವಾಗ್ಗೆ ಬರದು ಯಾವಾಗ್ಗೆ ಹೋ
ಮತ್ತು ಪೋಷಲಿನ ಊರಿಂದ ನಿಮ್ಮಲ್ಲಿ ಬರಲಿಕ್ಕೆ ಹಿಂ
ವೇಳೆ ಯೋಗ್ಯವಿದೆಯೋ ಇಲ್ಲೋ ಈ ವಿಷಯಗಳಲ್ಲಿ
ವಾಗಲೂ ಬರಿಯುತ್ತಿರಬೇಕು. ನದಿ ಮುಂತಾದ್ದರ ದಡ
ದ ತಡವಾಗುವದೆಂದು ಕಂಡು ಬಂದಲ್ಲಿ ನದಿ ದಾಟಿ
ಕೆಲಸದಲ್ಲಿ ನಿಮ್ಮ ಕಡೆಂದ ಆಗುವಂಥಾ ಮದತು

ಮಾಡುತ್ತಿರಬೇಕೆಂದು ಪ್ರಾರ್ಥನೆಯದೆ. ದಯಮಾಡಿ ಈ
ನಕಲು ತೆಗೆದುಕೊಂಡು ಇದರ ಕೆಳಗೆ ತಿಳಿಸೋಣ
ಮುಂದೆ ಈ ಬಗ್ಗೆ ನಡೆಯುವ ಕಾರಣವು ಬೀಳಲಿಕ್ಕಿಲ್ಲ
ಆಶಿಸುತ್ತೇನೆ. ತಾ. ಆಗಸ್ಟ ೧೮೭೯ ಇ.

पुरुषोत्तम नारायण पाटणकर
स्कूलमास्तर गोकाक नंबर १

—o—

ಜ್ಞಾಪಕನಂಬರ ೫೯೬

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರ
ಡಿ. ಎ. ಇನಸ್ಪೆಕ್ಟರ ಜಿ. ಕಲಾದಗಿ ಇವರಕಡೆಯಿಂದಾ
ಉಪದೇಶಿಸುವದೇನಂದರೆ— ಬಾದಾಮಿ ಸಾಲೆಯ ಹೆಡ್ಡಮಾ
ರ ನಾರಾಯಣ ಖಂಡೋಜಿ ಜಾಜೂರ ಮತ್ತು ಕೆರೂರ ಸಾ
ಯ ಮಾಸ್ತರ ರಾಘವೇಂದ್ರ ರಾಮಚಂದ್ರ ಪಡಕಿ ಇ
ಬ್ಬರು ಬಗರ ರಜೆಯಿಂದಾ ತಮ್ಮ ತಮ್ಮ ಸ್ಥಳಗಳನ್ನು ಬಿ
ಕಲಾದಗಿಗೆ ಬಂದದರಿಂದ ಸದರ ಮಾಸ್ತರರ ಪೈಕಿ ಪ್ರತಿ
ನಿಗೆ ೧ ರೂಪಾಯಿ ಮಾತ್ರ ದಂಡಮಾಡಿ ಮುಂದೆ ಈ
ಕಾರ ಮಾಡಿದ್ದು ತಿಳಿಯ ಬಂದಲ್ಲಿ ಸಖ್ತ ತಜವೀಜ ಮಾ
ಲಾಗುವದೆಂದು ತಾಕೀತು ಕೊಟ್ಟಿರುತ್ತದೆ.— ಈ ಸಂಗತಿಯ
ಯಾವತ್ತು ಮಾಸ್ತರರು ಚನ್ನಾಗಿ ಮನಸಿಲ್ಲಿಟ್ಟು ತಮ್ಮ ತ
ಮ್ಮೂರಗಳನ್ನು ಬಗರ ರಜೆಯಿಂದಾ ಬಿಡದಂತೆ ತಜವೀಜ ಇಡ
ದ್ದು— ತಿಳಿಯೋಣು ತಾ. ೧೪ ಅಗಟೋಬರ ೧೮೭೯

Ramchandra. A. Savar

ಡಿ. ಎ. ಇ. ಜಿ. ಕಲಾ

ಸರಕ್ಯೂಲರ ನಂಬರು ೭೪೩

ಅಜಂ ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರ ವ ಅಶಿಸ್ಟಂಟ ಇವರಿಗೆ—

ಡಿ. ಎ. ಇನಸ್ಪೆಕ್ಟರ ಜಿ. ಕಲಾದಗಿ ಇವರಕಡೆಯಿಂದಾ ತಿಳಿಯಪಡಿಸುವದೇನಂದರೆ— ಈ ಜಿಲ್ಹೆದಲ್ಲಿಯ ಕೆಲವು ಮಾಸ್ತರರು ಮತ್ತು ಅಶಿಸ್ಟಂಟರು ಕಲೆಕ್ಟರರ ಉಮೇದವಾರ ಲಿಷ್ಟಿನಲ್ಲಿ ಹೆಸರು ನಮೂದ ಆದದರಿಂದಲೂ ಮತ್ತು ಕೆಲವರು ಎರಡನೆ ಖಾತೆದಲ್ಲಿ ಕೆಲಸ ದೊರಕಿಸುವ ಪ್ರಯತ್ನ ಮಾಡುತ್ತಿರುವದರಿಂದಲೂ ತಮ್ಮ ಈಗಿನ ಕೆಲಸದ ಕಡೆಗೆ ದುರ್ಲಕ್ಷ ಮಾಡುತ್ತಾರೆ. ಕಾರಣ ಅವರಿಗೆ ಈ ಸರಕ್ಯೂಲರದಿಂದಾ ತಿಳಿಸುವದೇನಂದರೆ ಅವರು ಈ ಖಾತೆಯಲ್ಲಿ ಕೆಲಸ ಚಂನಾಗಿ ಮಾಡಿ ಶಿಫಾರಸ ಪಡೆದ ಹೊರತು ಅವರಿಗೆ ಎರಡನೆ ಯಾವ ಖಾತೆಯಲ್ಲಾದರೂ ಕೆಲಸ ಮಾಡುವ ಪರವಾನಗಿ ಕೊಡಲಾಗದು—ಇದನ್ನು ಲಕ್ಷದಲ್ಲಿಟ್ಟು ಯಲ್ಲರು ತಂಮ ತಮ್ಮ ಕೆಲಸ ಜಾಗ್ರತೆಯಿಂದಾ ಮಾಡುತ್ತಿರಬೇಕು ತಿಳಿಯೋದು ತಾ. ೨ನೇ ನೊವೆಂಬರ ಸನ್ ೧೮೭೮ ಇ.—ಮುಕ್ಕಾಂ ಕಲಾದಗಿ.

Ramchandra. A. Savanur

ಡಿ. ಎ. ಇ. ಜಿ. ಕಲಾದಗಿ

Correspondence.

ಪತ್ರವ್ಯವಹಾರ.

ಸಂಶಯವು

ರಾವಸಾಹೇಬ ಕನ್ನಡಶಾಲಾಪತ್ರಿಕ ಕರ್ತರಿಗೆ—

ರಾ.ವಿ. ಅಯ್ಯಾ ಪತ್ರಕರ್ತರೇ, ಮಾಹೆ ಸಪ್ಟಂಬರ ೧೮೭೯

ಇಸವಿಯ ಶಾಲಾಪತ್ರಿಕದ ನಾನು ೨೦೨ರಿಂದ ೨೦
ಹು. ಇ. ಇ. ದಕ್ಷಿಣಭಾಗ ಇವರು ಕೊಟ್ಟ ಸರಕ್ಯೂಲರ ನಂ
೧೯ ಇದರ ವಿಷಯಕ್ಕೆ ಸಂಶಯ ಬಂದ ಕಾರಣ ಇವೇ
ದ್ವಾರಯಿಂದ ತಿಳಿಸಬೇಕೆಂಬ ಕ್ಷಾಂಕ್ಷೆ ಇದ್ದು ಬರದ ನ
ಪಂಕ್ತಿಗೆ ಸ್ಥಳ ದೊರಿಯುವ ಮೋಹವಾನಗಿ ಆಗಬೇಕು

೧ ಟ್ರೇನಿಂಗಕಾಲೇಜದಲ್ಲಿ ಇದ್ದು ಸರಟಿಫಿಕೇಟು ಇಲ್ಲದ
ಟವರ ಮುದ್ದತಿ ಮೇಲಿಂದ ಸರಟಿಫಿಕೇಟಿನ ರಕಮು ನೇ
ಮಾಯಿತು.

೨ ಸ್ವಲ್ಪ ದಿವಸ ಟ್ರೇನಿಂಗ ಕಾಲೇಜದಲ್ಲಿ ಇದ್ದವರು
ಟ್ರೇಂಡರೆಂದು ಗೊತ್ತಾಯಿತು– ಆದರೆ ಮುಲ್ಕಿ ಸರಟಿಫಿಕೆ
ಇದ್ದರೆ ಅವರ ಪಗಾರ ಬಡತಿ, ಅಲೋನ್ಸ, ಕೊ
ವರೋ ಕ್ಯಾಗೆ ತಿಳಿಯೊಬಿಲ್ಲಾ—

೩ ಸನ್ನ ೧೮೬೫ ಇಸವಿಯ ಜಾನೇವಾರಿ ೧ನೇ ತಾ
ನ ಪೂರ್ವದ ನವಕರರು ಈ ನೇಮಕ್ಕೆ ಲಾಗು ಆಗಬಲ್ಲ
ಗೆ ಗೊತ್ತಾಯಿತು—
ಆದರೆ ಸದರ ೧೮೬೫ ಯಿಸವಿ ಜಾನೇವಾರಿ ೧ನೇ ತಾ
ನ ಈಚಿಕಡಿಯು ನೌಕರರು ಇದ್ದು ಕಾಲೇಜಕ್ಕೆ ಹೋಗದವ
ಯೂ ಸರಟಿಫಿಕೇಟು ಇಲ್ಲದವರಾಗಿಯೂ ೧೦ ರೂಪಾಯ
ಮೇಲೆ ಪಗಾರ ಪ್ರಳವರಾಗಿಯೂ ಇರುವ ಅಂಟ್ರೇಂಡರು
ವ ವರ್ಗದವರು ಇದು ತಿಳಿಯುಬರದಕಾರಣ ಗಜೇಂದ್ರಗಡ ವ
ತಾದ ಕೆಲವು ಮಾಸ್ತರರಿಗೆ ಸಂಶಯ ಬಂದಂತೆ ಕಾಣ
ದೆ. ಯಾಕಂದರೆ ಅವರು ಈ ಸಂಶಯಕ್ಕೆ ಪಾತ್ರರಾಗಿರುವ

೧೮। ೧೧। ೬೯ [

[illegible]

ಪುಸ್ತಕ ೧೪] [ಸಂಚಿಕೆ ೧೨

ಡಿಶಂಬರ, ೧೮೭೯

Educational Intelligence.
ವಿದ್ಯಾಸುಧಾರಣೆಗೆ ಸಂಬಂಧವಾದ ವೃತ್ತಾಂತಗಳು.

ಕಲಕತ್ತೆಯಲ್ಲಿ ಹಿಂದೂ ಸುಧಾರಣಾ ಸಭೆಯೆಂಬುದೊಂದು ಸಜಯಿಸುತ್ತದೆ. ಬಂಗಾಲದಲ್ಲಿ ಇಂಗ್ಲಿಷ ಕಲಿತವರು ಬೇಗ ಮದುವೆಮಾಡಿಕೊಳ್ಳದೆ ಇರುವದರಿಂದ ಆ ಜನರ ನಡತೆಯಲ್ಲಿ ಬಹಳ ಹೆಚ್ಚು ಕೆಡುಕುಂಟಾಗಿದೆಂದು ಬಹಳ ಜನ ಬಾಲವಿವಾಹಗಳನ್ನು ಮಾಡಿಸಿದ್ದಾರೆ. ಬಾಲವಿವಾಹದಿಂದ ಕೇಡುಂಟಾಗುತ್ತದೆ. ಆದರೆ ಪ್ರಾಯದಲ್ಲಿ ಲಗ್ನವಿಲ್ಲದೆ ಇರುವದರಿಂದ ಅದಕ್ಕೂ ಹೆಚ್ಚಿನ ಕೇಡಾಗುತ್ತದೆ. ಯುರೋಪದ ಜನರು ಬಹುಕಾಲ ಅಂದರೆ ಹೆಚ್ಚು ವಯಸ್ಸಿನ ವರೆಗೆ ಲಗ್ನ ಮಾಡಿಕೊಳ್ಳುವದಿಲ್ಲ. ಅದರ ಪರಿಣಾಮವು ಕ್ರೂರವಾಗಿದೆ, ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಈ ಸಮಾಜದವರು ನಮ್ಮ ತರುಣ ಜನರಿಗೆ ಬೋಧಿಸುತ್ತಾರೆ. ಆದರೂ ಯುರೋಪದವರು ಸ್ವಧರ್ಮದಲ್ಲಿ ನಿಷ್ಠೆಯುಳ್ಳವರಾಗಿದ್ದದರಿಂ ಅವರ ಅನಾಚಾರಕ್ಕೆ ಸ್ವಲ್ಪ ಮಟ್ಟಿಗೆ ಪ್ರತಿಬಂಧವುಂಟಾಗಿದೆ. ಆದರೆ ವಿದ್ಯೆ ಕಲಿತಂಥ ತರುಣ ಹಿಂದೂ ಜನರು ಸ್ವಧರ್ಮವನ್ನೂ ಸ್ವಧರ್ಮಗ್ರಂಥಗಳನ್ನೂ ಸರಿಯಾಗಿ ಧಿಕ್ಕರಿಸಿ ಕೇವಲ ನಾಸ್ತಿಕರಂ

ಕೆ ವರ್ತಿಸುತ್ತಾರೆ. ಇಂಥಾ ಸ್ಥಿತಿಯಲ್ಲಿ ಇವರು ಬೇಗ ಲ
ಮಾಡಿಕೊಳ್ಳದಿದ್ದರಿಂದ ಅತಿಭಯಂಕರವಾದ ಪರಿಣಾಮ ಪ್ರ
ಹಗುವದೆಂತಲೂ, ಆ ಪರಿಣಾಮದ ಪೂರ್ವರೂಪವು ಈಗಲೇ
ಕಾಣಿಸ ಹತ್ತಿದೆಯೆಂತಲೂ ಆ ಸಭೆಯವರು ಬಹು ಹೆದರಿಂ
ಸ್ವಜನರನ್ನು ಬೋಧಿಸುತ್ತಾರೆ.

—o—

ನಮ್ಮ ದೇಶದವರ ಆಚಾರ ವ್ಯವಹಾರಗಳನ್ನು ಸುಧಾರಿಸ
ವದಕ್ಕೋಸ್ಕರ ಬಹು ಜನರು ಬಗೆ ಬಗೆಯ ಉದ್ಯೋಗಗಳನ್ನು ನ
ಡೆಸಿದ್ದಾರೆ. ಆದರೆ ಇಂಥಾ ಉದ್ಯೋಗಗಳಿಗೆ ಕೈ ಹಾಕುವವರು ಕೇ
ಲ ಆರಂಭ ಶೂರರಿರುವದರಿಂದ ಅವರ ಉದ್ಯೋಗದಿಂದ ಯೇನ
ವು ಲಾಭವಾಗುವ ಆಶೆಯಿಲ್ಲೆಂಬ ಬಗ್ಗೆ ಸುಬೋಧಪತ್ರಿಕಾ
ಕಾರರು ತೋರಿಸುವ ಪ್ರಮಾಣಗಳು ಹ್ಯಾಗಂದರೆ-೧ ಸರಕಾರ
ದವರು ಪುಣೆಯಲ್ಲಿ ಸ್ತ್ರೀ ಶಿಕ್ಷಕಿಯರ ಶಾಲೆಯನ್ನಿಟ್ಟು ಐದಾ
ವರ್ಷಗಳಾದವು. ಆದರೆ ಅದರಲ್ಲಿ ಕಲಿತಂಥ ಶಿಕ್ಷಕಿಯರ
ದ್ಧಿಯನ್ನು ಯಾರೂ ಕೇಳಲಿಲ್ಲ, ಪುಣೆ, ಮುಂಬಯಿಗಳಂಥ ದೊ
ಡ್ಡ ಪಟ್ಟಣಗಳಲ್ಲಿಯೂ ಬೇರೆಕಡೆಯಲ್ಲಿಯೂ ಹೆಣ್ಣು ಮಕ್ಕ
ಶಾಲೆಗಳು ಬಹು ದಿವಸದಿಂದ ನಡೆಯುತ್ತವೆ. ಆದರೆ ಈಗ ೩
ವರ್ಷಗಳ ಪೂರ್ವದಲ್ಲಿ ಇದ್ದ ಸ್ಥಿತಿಯೇ ಈಗಲೂ ಇ
ತ್ತದೆ—೨ ಬಾಲ ವಿವಾಹ ನಿಷೇಧಕಸಭೆಯು ಕೆಲವು ವ
ಗಳ ಹಿಂದೆ ಸ್ಥಾಪಿತವಾಯಿತು ಆ ಸಭೆಯವರ ಉದ್ದೇ
ಳು ಡೊವಾರ್ಹವಾಗಿದ್ದವು, ಆದರೂ ಆ ಸಭೆ ಸಹ ಈಗ "
ಮಾಪಿನ ಶುಶ್ರೂಯುತೆ" ಆಗಿದೆ—೩ ಧರ್ಮಸುಧಾರಣೆಗಾಗಿ
ಲ್ಲಲ್ಲಿಗೆ ಸಮಾಜಗಳು ಸ್ಥಾಪಿಸಲ್ಪಟ್ಟವು. ಆದರೆ ಅವೆಲ್ಲ
ಗಳಿಂದ ನಾಸ್ತಿಕಮತಕ್ಕೆ ಆಶ್ರಯ ಪುಟಾಯಿತೇ ಹೊ

ಬಗೆಯ ಸುಧಾರಣೆಯೇನು ಆದಂತೆ ಕಂಡುಬರುವದಿ
—ಳ ಪುನರ್ವಿವಾಹದ ಉದ್ಯೋಗವನ್ನು ಮಧ್ಯದಲ್ಲಿ ಕೈ
ರರು ನಡಿಸಿದರು. ಅವರ ಉತ್ಸಾಹವು ಇಷ್ಟರೊಳಗೆ ಹ
ದ ಹಾಗೆ ಕಾಣುತ್ತದೆ. ಈಗ ಅಲ್ಲಿ ಸ್ವಲ್ಪವಾಗಿ ಆಗು
ಪುನರ್ವಿವಾಹಗಳು ದುರಾಚಾರಕ್ಕೆ ಮಾತ್ರ ಹಾನಿಯಾಗಿರುತ್ತ
ಆದರೆ ಬಂಗಾಲ ಇಲಾಖೆಯಲ್ಲಿ ಬ್ರಹ್ಮಸಮಾಜದವರು ನಿ
ಾದ ಸುಧಾರಣೆಯ ಲಕ್ಷಣಗಳನ್ನು ತೋರಿಸುತ್ತಾರೆಂದು ಸ
ಪತ್ರಿಕರ್ತರು ಸಂತೋಷ ತೋರಿಸುತ್ತಾರೆ.

—o—

ಮಿಸೆಸ್ ಅಮಿಂಡಾ ಸ್ಮಿಥ್ ಯೆಂಬ ಕ್ರಿಸ್ತೀಯಧರ್ಮದ ಸ್ತ್ರೀ
ಅಮೇರಿಕದಿಂದ ಮುಂಬಯಿಗೆ ಬಂದಿರುತ್ತಾಳೆ. ಈಕೆ ಸಿ
ಜಾತಿಯವಳಾಗಿ ಕೆಲವು ಕಾಲ ಗುಲಾಮತನದಲ್ಲಿ ಜನ್ಮ
ಳು. ಆದರೆ ಈಕೆಯು ಧರ್ಮನಿಷ್ಠೆ, ಸದಾಚಾರ, ವಿದ್ಯಾ
ಾನ, ಮುಂತಾದ ಸದ್ಗುಣಗಳು ಹೊಗಳತಕ್ಕಂಥವುಗಳುಂ
ಈಕೆ ಯುರೋಪ ಸಭೆಗಳಲ್ಲಿ ಅತಿ ಮಂಜುಲವಾದ ಸ್ವರ
ದಲೂ ಪರಮ ಭಕ್ತಿಯಿಂದಲೂ ದೇವರ ಪ್ರಾರ್ಥನೆಯನ್ನು
ದದ್ದು ನೋಡಿ, ಅಲ್ಲಿ ಕೂಡಿದ ಶಿಷ್ಟಜನರೆಲ್ಲ ತಲೆದೂಗಿ

—o—

ಮಾಯನಾಡಿನೊಳಗಿನ ಚಿನ್ನದ ಖಣಿಯ ಕೆಲಸವನ್ನು ನಡಿ
ವಕೋಸ್ಕರ ಲಂಡನದಲ್ಲಿ ೧೦ ಲಕ್ಷ ರೂಪಾಯಿ ಬಂಡವ
ಳ್ಳದ್ದೊಂದು ಕಂಪನಿಯು ಸಿದ್ಧವಾಗಿದೆ. ಆ ಕಂಪನಿಯವರ
ಸವು ಬೇಗ ನಡಿಯತಕ್ಕದ್ದುಂಟು. ಅವರ ಕೆಲಸವು ಚ
ಗಿ ನಡಿದರೆ, ನಮ್ಮ ದೇಶದಲ್ಲಿ ಚಿನ್ನ ಸ್ವಲ್ಪ ಅಗ್ಗವಾದರೂ

ಆಗಬಹುದು.

—o—

ಈ ನಡಿಯುವ ವರ್ಷದಲ್ಲಿ ವಿಲಾಯತಿಗೆ ಪರದೇಶಗ
ಱ ೪೬ ಕೋಟಿ ರೂಪಾಯಿಯ ಗೋಧಿಯು ಹೋದಹಂತೆ
ಷ ವರ್ತಮಾನ ಪತ್ರಗಳಿಂದ ತಿಳಿಯುತ್ತದೆ.

—o—

ಈ ವರ್ಷ ಯುರೋಪ ಖಂಡದಲ್ಲಿ ಚಳಿಯು ಬಹಳ
ತ್ತದೆ. ಅಫಗಾಣಿಸ್ಥಾನದಲ್ಲಿಯೂ ಚಳಿ ಹೆಚ್ಚಾಗಿ ಬರ್ಫ ಬಿದ
ಮನುಷ್ಯರೂ ಪಶುಗಳೂ ಬಹಳ ಸಾಯುತ್ತವೆ. ಯೆಂಬ
ತ್ತಿಯು ಪ್ರಸಿದ್ಧವಾಗಿದೆ.

—o—

ಯುರೋಪಖಂಡದಲ್ಲೆಲ್ಲ ಕೂಡಿ ೧೭೦೮೦೦೦೦ ಎಕ
ಭೂಮಿಯು ದ್ರಾಕ್ಷದ ಪೈರಿಗೆ ತೊಡಗಿರುತ್ತದಂತೆ. ಇದ
ದ ಯುರೋಪದ ನಿವಾಸಿಗಳು ದ್ರಾಕ್ಷರಸದ ಮದ್ಯಕ್ಕೆ ಯೆ
ಮೆಚ್ಚಿರುತ್ತಾರೆಂಬುವದು ಸ್ಪಷ್ಟವಾಗುತ್ತದೆ.

—o—

ಗ್ವಾಲ್ಹೇರಿಯ ಮಹಾರಾಜರವರು ತಮ್ಮ ರಾಜ್ಯದಲ್ಲಿ
ಅಿಯ ಪೈರು ಬೆಳಿಸುವ ಉದ್ಯೋಗ ನಡಿಸಿದ್ದಾರೆ.

—o—

ಟೆಲಿಫೋನ ಯೆಂಬ ದೂರ ಧ್ವನಿಯಂತ್ರದ ವರ್ತಮಾ
ನ್ನು ನಾವು ಯೆಷ್ಟೋಸಾರಿ ಈ ಪತ್ರದಲ್ಲಿ ಪ್ರಸಿದ್ಧಿಸಿದ್ದು ನ
ವಾಚಕರ ಸ್ಮರಣದಲ್ಲಿ ಇರಬಹುದು. ಆ ಯಂತ್ರದ ಕ
ನಾದ ಪ್ರೊಫೇಸರ ಗ್ರೇ ಯೆಂಬ ಗೃಹಸ್ಥನು ವಿಲಾಯತಿ
ಸರಕಾರದವರಿಂದ ಸನದು ಪಡಿದಿದ್ದಾನೆ. ಅವನು ೧೦೦ ರೂ

ಯು ಲಾಭದೊಳಗೆ ೨೦ ರೂಪಾಯಿಯಂತೆ ತನ್ನ ಹಕ್ಕಿಟ್ಟು ಅಮೇರಿಕದವರಿಗೆ ಆ ಯಂತ್ರವನ್ನು ಮಾಡಿ ಮಾರುವ ಅಧಿಕಾರ ಕೊಟ್ಟಿದ್ದಾನೆ. ಆದ್ದರಿಂದ ಆ ಪ್ರೊಫೇಸರನು ಮನೆಯೊಳಗೆ ಕೂತಲ್ಲೇ ಲಕ್ಷಾವಧಿ ರೂಪಾಯಿಗಳು ಬಂದು ಬೀಳುವವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ವಿಲಾಯತಿಯವರ ಉದ್ಯೋಗವೂ ಅವರ ಉದ್ಯೋಗದ ಫಲವೂ ಹೀಗದೆ.

—೦—

ಲಂಡನ್ ಪಟ್ಟಣದಿಂದ ಆಫ್ರೀಕದ ಝಾಂಜಿಬಾರ ಎಂಬ ದಂಡೆಯ ವರೆಗೆ ಸಮುದ್ರದೊಳಗೆ ತಂತಿಟಪಾಲಿನ ತಂತಿಯನ್ನು ಹಾಕುವ ಕೆಲಸವು ಹೋದತಿಂಗಳಲ್ಲಿ ಆರಂಭವಾಯಿತು. ಒಂದೆರಡು ತಿಂಗಳೊಳಗೇ ಲಂಡನಕ್ಕೂ ಝಾಂಜಿಬಾರಕ್ಕೂ ಈ ತಂತಿಯಿಂದ ವರ್ತಮಾನಗಳು ಹೋಗುವವೆಂದು ತೋರುತ್ತದೆ.

—೦—

ವಹ್ರಾಡ ಪ್ರಾಂತದ ವರೋರಾಯೆಂಬ ಗ್ರಾಮದೊಳಗೆ ಕಲ್ಲಿದ್ದಲಿಯ ಖಣಿಗಳುಂಟು. ಅವುಗಳಿಂದ ಯುರೋಪಿಯನ್ ಜನರು ಇದ್ದಲಿಯನ್ನು ತೆಗೆಯುವ ಕೆಲಸ ನಡಿಸಿದ್ದಾರೆ. ಆದರೆ ೧೦೦ ಪೌಂಡು ವಿಲಾಯತಿಯ ಇದ್ದಲಿಯಿಂದ ಆಗುವಷ್ಟು ಕೆಲಸಕ್ಕೆ ಈ ವಹ್ರಾಡದ ಇದ್ದಲಿಯು ೧೩೫ ಪೌಂಡು ಬೇಕಾಗುತ್ತದಂತೆ. ಈ ಖಣಿಗಳಲ್ಲಿ ತಿಂಗಳಿಗೆ ೬೦೦೦ ಟನ್ ಇದ್ದಲಿಯು ಹೊರಡುತ್ತದೆ.

ನಮ್ಮ ಇಲಾಖೆಯಲ್ಲಿ ಗ್ರಾಂಟ್ಸ್ ಇನ್ ಏಡ್ ಯೆಂಬ ಹೆಸರಿನಿಂದ ಮಾಸ್ತರ ಜನರಿಗೆ ಈ ಪೂರ್ವದಲ್ಲಿ ದೊರೆಯುತ್ತಿ

ಷ್ಟ ಹಣವು ಇನ್ನು ಮುಂದೊರಿಯಲಿಕ್ಕಿಲ್ಲೆಂದು ಕೇಳುತ್ತೇ
ಆ ಹಣದಿಂದ ಕಡಮೇ ಪ್ರತಿಯ ಶಾಲೆಗಳನ್ನು ಸ್ಥಾಪಿ
ರಂತೆ.

— ೦ —

ನಾತಾಳದ ಹಬ್ಬದ ಮೂಲಕವಾಗಿ ಇಲ್ಲಿಯ ಹಾ
ಸ್ಕೂಲಿಗೂ ಟ್ರೇನಿಂಗ ಕಾಲೇಜಕ್ಕೂ ಸೂಟಿಯುಂಟು.
ಜನವರಿಗೆ ಇವೆರಡೂ ಶಾಲೆಗಳು ಶುರುವಾಗುವವು.

— ೦ —

ಮೆ. ಇವನ್ಸೈಕ್ಸರ ಧೊರೆಗಳು ಬೆಳಗಾವಿಯಿಂದ ಬೇಗ
ಲಾದಗಿ ಜಿಲ್ಹೆಯಲ್ಲಿ ತಿರುಗಲಿಕ್ಕೆ ಹೋಗತಕ್ಕವರಿದ್ದಾರೆ
ಕೇಳುತ್ತೇವೆ.

— ೦ —

ಟ್ರೇನಿಂಗ ಕಾಲೇಜದಲ್ಲಿ ಗಣಿತದ ಶಿಕ್ಷಕರಾಗಿದ್ದ ಸ
ರಾವ ಯಾಣಗಿರಿ ರಂಗನವರು ಪುಣೆಯ ಇಂಜನೀಯರಿಂಗ
ಲೇಜದಲ್ಲಿ ಅಭ್ಯಾಸಮಾಡಲಿಕ್ಕೆ ೨ ವರ್ಷದ ರಜಾ ತಕೊಂ
ಹೋದರು. ಅವರ ಸ್ಥಳಕ್ಕೆ ಇನ್ನೂ ಯಾರನ್ನೂ ನೇಮಿಸಿ
ತ ತೋರುವದಿಲ್ಲ.

— ೦ —

ಹಾಯಸ್ಕೂಲಿನಲ್ಲಿ ಅಸಿಸ್ಟಂಟ ಮಾಸ್ತರರಾಗಿದ್ದ ಜಾ
ಚಾರ್ಯ ಕೆರೂರ ಯೆಂಕಪ್ಪನವರು ಪುಣೆಯ ಕಾಲೇಜಕ್ಕೆ ಅ
ಸಕ್ಕೆ ಹೋಗಿದ್ದರಷ್ಟೇ. ಅವರು ಹೋದತಿಂಗಳಲ್ಲಿ ಮರಳಿ
ದು ತಮ್ಮ ಕೆಲಸದ ಚಾರ್ಜ ತಕ್ಕೊಂಡರು.

— ೦ —

Uttara Ramacharitra.

ಉತ್ತರರಾಮಚರಿತವು.

೩ನೇ ಅಂಕವು.

(ತೆರೆಸೇ ಪ್ರದಿಂದ ಮುಂದಕ್ಕೆ ಸಾಗಿದ್ದು.)
ಹಾ! ರಮಣೀ ಜಾನಕಿ!

ತ—(ತನ್ನಲ್ಲಿ)ಓಹೋ ಭಾಗೀರಥಿಯೂ, ಲೋಪಾಮುದ್ರಾದೇವಿಯೂ, ಮೊದಲೇ ಈ ಭವಿಷ್ಯವನ್ನು ತಿಳಿಕೊಂಡಿದ್ದರಲ್ಲವೇ!

ಸೀ—(ಬಿಕ್ಕುತ್ತ)ಅಪ್ಪಯ್ಯಾ ಏನಿದು!!
(ಮತ್ತೆನೇಪಥ್ಯದಲ್ಲಿ)ಹಾ ದೇವಿ! ದಂಡಕಾವನವಾಸದ ಜೀವದಗೆಳತಿಯೇ ವಿದೇಹರಾಜಕನ್ಯೇ(ಹೀಗೆನ್ನುತ್ತಾ ಮೈಮರೆಯುತ್ತಾನೆ.)

ಸೀ—ಅಕಟಕಟಾ ಧಿಕ್ಕರಿಸು ನನ್ನನು ಧಿಕ್ಕರಿಸು ದುರ್ಭಾಗ್ಯಳಾದ ನನ್ನನ್ನೇ ಧ್ಯಾನಿಸುತ್ತಾ, ನಯನಾರವಿಂದವನ್ನು ಮುಚ್ಚಿ ಮೂರ್ಛಿತರಾದರಲ್ಲ? ಅಹಹ ಭೂತಳದಲ್ಲಿ ನಿರುತ್ಸಾಹರಾಗಿ, ವಿಪರ್ಯಾಸವನ್ನು ತಾಳಿ ಮಲಗಿದರಲ್ಲವೇ ಇನ್ನೇನು? ಹೇ ಭಾಗ್ಯಶಾಲಿನಿ ತಾಯಿ ತಮಸೇ ಕಾಪಾಡಬೇಕು ಪ್ರಾಣನಾಥರನು ಕಾಪಾಡಬೇಕು(ಎಂದು ಕಾಲುಗಳಿಗೆರಗುತ್ತಾಳೆ)—

ತಮಸಾ—ವತ್ಸೇ!

॥ಆರ್ಯಾ॥

ನೀನೇ ಜಗತೀಸಾಧನ, ಜಾನಕಿ ತೆರಳೆಬ್ಬಿಸಲ್ಕೆ ಕಲ್ಯಾಣಿ॥
ಈ ನಿಂನರಸಿನಜೀವ, ಕ್ಕಾನಂದಸ್ಪರ್ಶಕಂ ಭವತ್ಪಾಣೀ॥೧೧

ಸೀ—ಹ್ಯಾಗಾದರೂ ಆಗಲಿ ಭಗವತಿಯು ಹೇಳಿದಂತೆ ಮಾಡುತ್ತೇನೆ(ಎಂದು ಸಂಭ್ರಮದಿಂದ ರಾಮನ ಸಮೀಪಕ್ಕೆ ಹೋಗು

ತ್ತಾಳೆ)

(ಆ ಬಳಿಕ ಕರುಣಾಶ್ರುಗಳಿಂದ ಯುಕ್ತಳಾದ ಸೀತೆಯು ಸ್ಪರ್ಶಮಾಡಿದ್ದರಿಂದ ಆಶ್ಚರ್ಯಯುಕ್ತನಾದಂಥ, ಭೂಮಿಯ ಮೇ ಮಲಗಿದಂಥಾ ರಾಮಚಂದ್ರನು ಬರುತಾನೆ)

ಸೀ—(ಕಿಂಚಿತ್ ಹರ್ಷಿತಳಾಗಿ ತನ್ನೊಳಗೇ) ಈ ತ್ರೈ ಕ್ಯನಾಥನ ಶರೀರದಲ್ಲಿ ಮತ್ತೆ ಪ್ರಾಣಪ್ರವೇಶವಾಯಿತೆಂಬ ತೋರುತ್ತದೆ.

ರಾ—ಆಹಾಹಾ ಏನಿದು?

॥ವಸಂತತಿಲಕಾವೃತ್ತಂ॥

ಹೇಮವು—ಪಲ್ಲವ—ರಸಂಗಳ—ಶೀಕರವೋ?|
ಸ್ನೈಮಾತೃಕಾಪ್ಲವಕರಂಗಳಸಾರವೋ ಸೈ?||
ಕಾಪೇರ್ದಜೀವನಕುಸುಮಗಳ ಪೃಷ್ಟಿಗೃಹವೋ— |
ಜೀವಾತುವಸ್ರುಸದ ಸೇಚನವಾ ಮೋತ್ಸೈಗೆ॥೧೨॥
ಯೂಪಾಗಲೀ ಮೋದಲಿಗಾಗಿದ—ಸೋಂಕಿದನ್ನು— |
ಜೀವೋಪಮಂ, ಮನಮಮೋಹಿಸುತ್ತೊಂದು ಮಾಯಂ
ಕಾಪೇರಿಪ್ಪೆಗೊಗೆದಮೂರ್ಛೆಯು ಸೀಗತಾಸಂ—
ರಾಮೇಶಬಂಧಿರಗಮೂಪೃಹಾನಿಯು ಸನ್ನೋಳ್॥೧೩॥

ಸೀ—(ಅಂಜುತ್ತಾ, ನಡುಗುತ್ತಾ, ಆನಂದಿಸುತ್ತಾ) ಈಗ ದಲ್ಲಿ ಇಷ್ಟಾದರೂ ನನಗೆ ಪರಮ ಲಾಭವು!!

ರಾ—ನನ್ನ ದಯಾಳುವಾದ ಸೀತಾದೇವಿಯೇ ಈಗ ನ ಬಳಿಗೆ ಬಂದಾಳೋ ಏನು?

ಸೀ—ಹಾಹಾ ಪ್ರಾಣೇಶ್ವರರು ಇನ್ನು ಮೇಲೆ ನನ್ನ ಹುಡುಕಲಾರಂಭಿಸುತ್ತಾರೋ ಏನು? ಹ್ಯಾಗಿನ್ನು?

ರಾ—ಒಳ್ಳೇದು ನೋಡುತ್ತೇನೆ. ಆಗೋ ಬಂದಳೇನು?

ಸೀ—ತಾಯಿಯಾ ತಪಃಸಕ್ತಾ ಇನ್ನು ನಾವು ಚಿತ್ರಪಟ್ಟಿಗೆ ಸರಿಯೋ
ಣ ನಡಿ ಶಕ್ಯನೇ ನಂನಂನು ನೋಡಿದರೆ, ಅನುಮತಿಇಲ್ಲದೇ ಬ
ಗೆಬಂದದಕ್ಕೆ ಮಹಾರಾಜರು ಮುನಿದಾರು

ತ—ಹೇಗಿದ್ದರೂ ಭಾಗೀರಥಿಯ ಪ್ರಭಾವದಿಂದ ನೀನು ವನ
ದೇವತೆಗಳಿಗಾದರೂ ಅದೃಶ್ಯಳಾಗಿದ್ದೀ ಅಂಜುತ್ತೀಯಾಕೆ?

ಸೀ—ಹೌದು ಈ ಮಾತು ನನ್ನ ಧ್ಯಾನಕ್ಕೇ ಬರಲಿಲ್ಲ

ರಾ—ಎಲ್ಲೆ ಜೀವದಗೆಳತಿಯೇ ಜಾನಕೀ ಹಾ ಸೀತೆ

ಸೀ—(ಅತಿ ಶೋಕದಿಂದ ಗದ್ಗದ ಕಂಠೆಯಾಗಿ ತನ್ನೊಳಗೇ)
ಎಲ್ಲೆ ಪ್ರಾಣಕಾಂತರೇ ಇಂದಿನ ವರೆಗೆ ನಡೆದಿರುವ ಸಂಗತಿಗೆ ಈ
ರೀತಿ ವಚನವು ಯೋಗ್ಯವಲ್ಲ ನಾನು ನಿಮ್ಮ ಪ್ರಾಣಸಖಿಯಾಗಿ
ದ್ದರೆ ನನ್ನ ಅವಸ್ಥೆಯು ಹೀಗೆ ಯಾಕಾಗುತ್ತಿತ್ತು? ಅಥವಾ ಪ
ತ್ರಿಹೃದಯಳಾದಂಥ, ನನಗೆ ಜನ್ಮಾಂತರದಲ್ಲಾದರೂ ತನ್ನ
ದುರ್ಲಭ ದರ್ಶನವನ್ನು ಕೊಡಬಾರದು ಇಂಥಾ ದುರ್ಭಾಗ್ಯಳಾ
ದ ನಾನನ್ನೇ ಶುದ್ಧಾಂತಃಕರಣದಿಂದ ಹೀಗೆ ಧ್ಯಾನಿಸುತ್ತೇ ಇ
ರುವ ಈ ದಯಾಳುವಾದ ಪ್ರಾಣಪತಿಗಳ ವಿಷಯದಲ್ಲಿ ಇಷ್ಟು
ನಿರ್ದಯಳು ಹ್ಯಾಗಾಗಲಿ? ಇವರ ಅಂತಃಕರಣವನ್ನು ನಾನು ಬಲ್ಲೆ
ನು, ನನ್ನ ಅಂತರಂಗವನ್ನು ಇವರೂ ಬಲ್ಲವರು; ದೈವದಿಂದ ನ
ನಗೆ ಆಗತಕ್ಕದ್ದಾಗಿ ಹೋಯಿತು; ಆ ದೋಷವನ್ನು ಆರ್ಯಪುತ್ರ
ರಿಗೆ ಯಾಕೆ ಹಚ್ಚಬೇಕು?

ರಾ—(ಎಲ್ಲಾ ಕಡೆಯಲ್ಲಿ ನೋಡಿ ಉದಾಸೀನನಾಗಿ) ಅಕಟಕ
ಟಾ! ಇಲ್ಲಿ ದಾರೂ ಇಲವು ನನ್ನ ಮನಸ್ಸಿಗೆ ಭ್ರಾಂತಿಯಾಗಿರಬಹು
ದೇ?

ಸೀ—ಹೇ ಭಾಗ್ಯಶಾಲಿನಿ ತಪಃಸಕ್ತಾ ನಂನಂನು ನಿರ್ದಯಿ
ತ್ತವಾಗಿ ಪರಿತ್ಯಾಗ ಮಾಡಿದರೂ, ಇವರ ಇಂಥಾ ಅವಸ್ಥೆಯ

ನ್ನು ನೋಡಿದರೆ ಯಾವ ಕಾರಣದಿಂದ ನನ್ನ ಮನಸ್ಸು ಕರಗುತ್ತಿ
ದೆಯೋ ತಿಳಿಯದು ಅದು ನನಗೆ ತಿಳಿಯದು!

ತ—ಮಗಳೇ ತಿಳಿದೆನು ತಿಳಿಗೆನು ಹೇಳುತ್ತೇನೆ, ಕೇಳು!

||ಯುಗ್ಮ||

ಅನ್ಯಾಗದು ಪ್ರಿಯಸಮಾಗಮವೆಂದು ದಾಸೀ— |
ನಂ; ನಿರ್ನಿಮಿತ್ತ ಮಾಗಲಿರ್ಪನೆನುತ್ತೆ ಖಿನ್ನಂ;||
ಬಂನಂ—ಗೊಡಲ್ಕೆ ವಿರಹಂ, ಷಟನಾತುರಂ; ಸೌ—
ಜನ್ಯೋಕ್ತಿ ಸಂಗತಿಯನಾಲಿಸಿ ಸುಪ್ರಸನ್ನಂ||೧೪||
ತ್ವಂಸಾಥನಿಂತು ಕರುಣಾಮಯನಾದನೆಂದು— |
ಕ್ಲಿಂನದ ಕೃಪಾರಸದೊ, ಳೀಕ್ಷಣದಲ್ಲಿ ಮತ್ತೆ||
ನಿಂನಂತರಂಗವು ಕರಂಗಿತು ಸೀತೆ ವಾತ್ಸ|
ಲ್ಯನೋಡಿ, ನಿಂಮರಘುವಂಶಲಲಾಮನಲ್ಲಿ ||೧೫||

ರಾ—ಹೇ ದೇವಿ ಜಾನಕಿ:—

ಆಹಾ ಪ್ರಸಾದವೆ ಸುಖಪ್ರದೆ ದೇವಿ ನಿಂನ—
ಸ್ನೇಹಾರ್ದ್ರಶೀತಳ ಮದಾದುದು ಸೋಂಕು ನಂನ— ||
ದೇಹಕ್ಕೆ ದಿವ್ಯಪರಿತೋಷವ ನೀವುದಿಸುಂ |
ಹಾಹಾ ಮನೋರಮಣಿ ಯಾವೆಡೆಯಿರ್ಪೆನೀನು ||೧೬||

ಸೀ—ಈ ಅಪರಿಮಿತ ಪ್ರಣಯಾತಿರೇಕವುಳ್ಳಂಥಾ, ಪರಮಾಹ್ಲಾದಕ್ಕೆ ಕಾರಣಗಳಾದಂಥ, ಪ್ರಾಣವಲ್ಲಭರ ವಾಕ್ಯಗಳನ್ನು ಮನದಣಿಯೆ ಕೇಳುವ ನಂನ ಜನ್ಮವು,—ನಿಷ್ಕಾರಣ ಪರಿತ್ಯಾಗದಿಂದ ದೂಷಿತವಾದರೂ ಸಫಲವಾಯಿತು ನಾನು ಧನ್ಯಳು

ರಾ—ಇಂತು ಪ್ರಾಣೇಶ್ವರಿಯು ಎಲ್ಲಿಂದ ಬರುವಳು? ಇದು ನಿತ್ಯದಲ್ಲಿಯೂ ತದೇಕ ಧ್ಯಾನದಿಂದ ರಾಮನ ಚಿತ್ತಕ್ಕೆ ಹುಟ್ಟುವ ಭ್ರಾಂತಿಯೇಸರಿ!

Vibrating Things
ಕಂಪಿತ ಪದಾರ್ಥಗಳು.

ಸ್ಪೈರನ್*—ಇಂಥಾದೊಂದು ಸ್ವರವು ಹೊರಡಲಿಕ್ಕೆ ಪ್ರಂಸು ಸೇಕಂಡಿನೊಳಗೆ ಇಷ್ಟು ಹೊಡೆತಗಳು ಬೀಳಲಿಕ್ಕೆ ಬೇಕಾಗುವದು ಈ ಸ್ಪೈರನ್ನೆಂಬುವ ಯಂತ್ರದಿಂದ ಸರಸಾಗಿ ತಿಳಿಯುತ್ತದೆ. ಈ ಯಂತ್ರದ ಆಕೃತಿಯನ್ನು ಕೆಳಗೆ ಕೊಟ್ಟಿದ್ದೇವೆ. ಒಂದು ಕಟ್ಟಿಗೆಯ ಚೌಕಟ್ಟಿನೊಳಗೆ ವೊಂದು ಅಚ್ಚಿನ ಮೇಲೆ ವೊಂದು ದೊಡ್ಡ ಚಕ್ರವು (ಅ) ತಿರುಗುತ್ತದೆ. ಅದರೆದುರಿಗೆ ಅದಕ್ಕಿಂತ ಸಣ್ಣದಾದ ಬೇರೊಂದು (ಕ) ಚಕ್ರವು ತಿರುಗುತ್ತದೆ. ಆ ಚಕ್ರದ ಅಂಚಿನ ಮೇಲೆ ಕಂಗಸದ ಹಲ್ಲಿನಂಥ ಸಣ್ಣ ಹಲ್ಲುಗಳಿರುತ್ತವೆ. ದೊಡ್ಡ ಚಕ್ರದ ಮೇಲಿಂದ ಸಣ್ಣ ಚಕ್ರದ ಅಚ್ಚಿನ ಮೇಲೆ ಕ ಕ ಹಗ್ಗವು ಹೋಗಿರುತ್ತದೆ; ಅದರಿಂದ ಅ ಚಕ್ರವನ್ನು ತಿರುಗಿಸಲಾಗಿ ಕ ಚಕ್ರವು ತಿರುಗ ಹತ್ತುತ್ತದೆ. ಆದರೆ ಆ ಹಗ್ಗವನ್ನು ಅ ಚಕ್ರದ ಪರಿಘದ ಮೇಲಿಂದ ವೊಯ್ದು ಕ ಚಕ್ರದ ಅಚ್ಚಿನ ಮೇಲೆ ಹಾಕಿರುವದರಿಂದ ಅ ಚಕ್ರವು ವೊಂದು ಸುತ್ತು ತಿರುಗುವದರೊಳಗೆ ಕ ಚಕ್ರವು ಯೆಷ್ಟೋ (ಉದಾಹರಣಾರ್ಥವಾಗಿ ೧೦೦) ಸುತ್ತು ತಿರುಗುತ್ತದೆ. ಸಣ್ಣ ಚಕ್ರದ ಅಂಚಿನಲ್ಲಿ ಸುತ್ತೆಲ್ಲ ಕೂಡಿ ೧೦೦ ಹಲ್ಲುಗಳಿರುತ್ತವೆಂದು ಯೆಣಿಸಿರಿ. ಆ ಚಕ್ರದೆದುರಿಗೆ ಚೌಕಟ್ಟಿನಲ್ಲಿ ತೆಳುವಾದದ್ದೊಂದು ಹಿತ್ತಾಳಿಯ ತಗಡು ಕೂಡ್ರಿಸಲ್ಪಟ್ಟಿರುತ್ತದೆ. ಅದರ ಮೇ-

* ಇದು ಇಂಗ್ಲಿಷಭಾಷೆಯೊಳಗಿನ ಹೆಸರುಂಟು.

ಸಣ್ಣ ಚಕ್ರದ ಹಲ್ಲುಗಳು ಅಪ್ಪಳಿಸಿ ಅದನ್ನು ಬಾರಿಸುತ್ತ
ವೆ. ಇ ಯೆಂಬುವದೊಂದು ಘಡಿಯಾಲವದೆ. ಅದಕ್ಕೂ ಸ
ಣ್ಣ ಚಕ್ರದ ಅಚ್ಚಿಗೂ ತಂತಿಯಿಂದ ಸಂಬಂಧ ಮಾಡಲಾ
ಗಿ, ಆ ಚಕ್ರದ ಹಲ್ಲಿನ ಪೆಟ್ಟುಗಳು ಹಿತ್ತಾಳಿಯ ತಗಡಿನ
ಮೇಲೆ ಯೆಷ್ಟು ಬಿದ್ದವೆಂಬುವದು ತಿಳಿಯುತ್ತದೆ.

ಇನ್ನು ಆ ತಗಡಿನ ಮೇಲೆ ಹಲ್ಲುಗಳು ಯೆಷ್ಟು ಸಾರಿ
ಬಡಿದರೆ ಯಾವ ಸ್ವರ ಹೊರಡುತ್ತದೆಂಬುವದನ್ನೂ ಆ ಪೆ
ಟ್ಟುಗಳನ್ನು ಯೆಣಿಸುವ ರೀತಿಯನ್ನೂ ನಿಮಗೆ ತಿಳಿಸುತ್ತೇನೆ.
ಸಣ್ಣ ಚಕ್ರಕ್ಕೆ ನೂರು ಹಲ್ಲುಗಳಿರುತ್ತವೆ. ಆದರಿಂದ ಅದು
ವೊಂದು ಸುತ್ತು ತಿರುಗುವದರೊಳಗೆ ತಗಡಿನ ಮೇಲೆ ೧೦೦
ಪೆಟ್ಟು ಬೀಳುತ್ತವೆ. ಈ ಚಕ್ರವು ವೊಂದು ಸೇಕಂಡಿನೊ
ಳಗೆ ವೊಂದು ಸುತ್ತು ತಿರುಗಿದರೆ ಅಷ್ಟು ಕಾಲದೊಳಗೆ
೧೦೦ ಸಾರಿ ತಗಡು ಬಾರಿಸಿ, ಅದರ ಸಪ್ಪಳಗಳು ಬೇರೆ
ಬೇರೆಯಾಗಿ ಕೇಳಿಸದೆ, ಯೆಲ್ಲಕ್ಕೂ ಏಚರ ಸ್ವರವು ಕೇಳಿ
ಬರುತ್ತದೆ. ದೊಡ್ಡ ಚಕ್ರವನ್ನು ವೊಂದು ಸೇಕಂಡಿನೊಳಗೆ
ವೊಂದು ಸುತ್ತು ತಿರುಗಿಸಿದರೆ, ಅಷ್ಟೇ ಅವಧಿಯೊಳಗೆ ಸ
ಣ್ಣ ಚಕ್ರವು ೧೦೦ ಪ್ರದಕ್ಷಿಣೆಗಳನ್ನು ಮಾಡುವದು; ಮತ್ತು
ಹಿತ್ತಾಳಿಯ ತಗಡಿನ ಮೇಲೆ ಪ್ರತಿ ವೊಂದು ಪ್ರದಕ್ಷಿಣೆಗೆ
೧೦೦ರಂತೆ ೧೦೦ ಪ್ರದಕ್ಷಿಣೆಗಳಲ್ಲಿ ೧೦೦೦೦ ಪೆಟ್ಟುಗಳು
ಬೀಳುವವು. ಈ ಪೆಟ್ಟುಗಳಿಂದ ವೊಂದು ಉಚ್ಚ ಸ್ವರವು
ಹೊರಡುವದು. ಈ ಪ್ರಕಾರ ದೊಡ್ಡ ಚಕ್ರವನ್ನು ಹೆಚ್ಚು
ಕಡಿಮೆ ವೇಗದಿಂದ ತಿರುಗಿಸಲಾಗಿ ಬೇಕಾದಂಥ ಉಚ್ಚ ನೀ
ಚ ಸ್ವರಗಳು ಹೊರಡುತ್ತವೆ.

ಯಾವ ಸಪ್ತಕದೊಳಗಿನ ಯಾವ ಸ್ವರವನ್ನು ಹುಟ್ಟಿಸ

ಯೆಷ್ಟು ಪೆಟ್ಟುಗಳು ಬೀಳ ಬೇಕೆಂಬುವದನ್ನು ನೋಡ
ಸಿ. ವಿವಕ್ಷಿತ ಸ್ವರವನ್ನು ಮೊದಲು ತಂಬೂರಿ, ಸತಾರ
ಂಥ ವಾದ್ಯದಲ್ಲಿ ಹುಟ್ಟಿಸಿ, ಹಿಂತ್ತ್ಲೆಯು ತಗಡಿನಿಂದ
ಂಡುವ ಸ್ವರವು ಆ ಸ್ವರಕ್ಕೆ ಹೊಂದುವಷ್ಟು ವೇಗ
ದ ದೊಡ್ಡ ಚಕ್ರವನ್ನು ತಿರುಗಿಸಬೇಕು, ಅಷ್ಟೇ ವೇಗ
ದ ಆ ಚಕ್ರವನ್ನು ಕೆಲವು ಮಿನಿಟುಗಳ ವರೆಗೆ ತಿರುಗ
ಸಿ ನಿಂತು, ಸಣ್ಣ ಚಕ್ರಕ್ಕೆ ಘಡಿಯಾಳದ ಸಂಬಂಧವನ್ನು
ಡಬೇಕು. ಅದರಿಂದ ಆ ಚಕ್ರದ ಭ್ರಮಣಕ್ಕೆ ಅನುಭ
ವಾಗಿನಿಂದ ತಗಡಿನ ಮೇಲೆ ಬಿದ್ದ ಪೆಟ್ಟುಗಳ ಸಂಖ್ಯವು
ಯುವದು. ಬೇರೊಬ್ಬ ಮನುಷ್ಯನು ಘಡಿಯಾಳವನ್ನು
ೇಡುತ್ತಿರಬೇಕು. ವೊಂದು ಮಿನಿಟಿನ ಆರಂಭದಲ್ಲಿಯೂ
ಯಲ್ಲಿಯೂ ಆ ಘಡಿಯಾಳದ ಮುಳ್ಳು ಇದ್ದ ಸ್ಥಳಗಳ
ಅವನು ನೋಡಿಕೊಂಡರೆ ಸಾಕು. ಆ ಮನುಷ್ಯ
ಒಂದು ಮಿನಿಟಿನೊಳಗೆ ೬೦೦೦೦ ಪೆಟ್ಟು ಬಿದ್ದವೆಂದು ನೋ
ನೆಂದು ಕಲ್ಪಿಸಿರಿ. ಅಂದರೆ ವೊಂದು ಸೆಕೆಂಡಕ್ಕೆ ವೊಂ
ಸಾವಿರದಂತೆ ಪೆಟ್ಟುಗಳಾದವು. ಇದರಿಂದ ನಿಮ್ಮ ವಿವ
ಸ್ವರವು ಹೊರಡಲಿಕ್ಕೆ ವೊಂದು ಸೆಕೆಂಡಿನೊಳಗೆ ವೊಂ
ಸಾವಿರ ಪೆಟ್ಟು ಬೀಳಲಿಕ್ಕೆ ಬೇಕೆಂದು ನಿಮಗೆ ತಿಳಿದ
ಗಾಯಿತು.

ಹವೆಯು ಧ್ವನಿಯನ್ನು ಸ್ಥಳಾಂತರಕ್ಕೆ ವೊಯ್ಯುತ್ತದೆ.
ಂತದ ಮೇಲೆ ಕಟ್ಟಿಗೆಯಿಂದ ಹೊಡೆಯಲಾಗಿ ಅದರಲ್ಲಿ
ಪ ಹುಟ್ಟಿತು. ಆ ಕಂಪದಿಂದ ವಾತಾವರಣದಲ್ಲಿ ತೆರೆಗ
ಟಾಗಿ, ಆ ತೆರೆಗಳು ನಮ್ಮ ಕಿವಿಯೊಳಗೆ ಸೇರಿದರಿಂದ
ತದ ಸಪ್ಪಳವು ನಮಗೆ ಕೇಳಿಸಿತೆಂದು ಹಿಂದೆ ಹೇಳಿ

ತ್ತೇವೆ. ಇದರಿಂದ, ಧ್ವನಿಯು ಕೇಳ ಬರಲಿಕ್ಕೆ ವಾತಾ
ರಣವು ಅವಶ್ಯವಿರುತ್ತದೆಂದು ನಿಮಗೆ ತಿಳಿಯ ಬಹು
ವಾತಾವರಣವಿಲ್ಲದಿದ್ದರೆ, ಪದಾರ್ಥದಿಂದ ನಮ್ಮ ಕಿವಿಯೊ
ತೆರೆಗಳು ಬರುವ ಬಗೆ ಯೇನ.?

೩ನೇ ಪ್ರಯೋಗ——ವಾತಾಕರ್ಷಕ ಯಂತ್ರದ ತ
ಮೇಲೆ ಈ ಕಾಜಿನ ಕೊಳವೆಯನ್ನು ನಿಲ್ಲಿಸು. ಇಗೋ
ಸೂಂಗು ಬೇರೆ ಸಣ್ಣ ತಗಡು ಇರುತ್ತದೆ; ಇದರ ಪ
ಭಾಗದಲ್ಲಿ ಒಂದು ಸಣ್ಣ ಗಂಟೆ ತೂಗ ಹಾಕಿದೆ. ಈ
ಟೆಯನ್ನು ಕೊಳವೆಯೊಳಗೆ ಇಳಿ ಬಿಟ್ಟು ಈ ತಗಡನ್ನು
ಳವೆಯ ಮೇಲೆ ಮುಚ್ಚು. ಗಂಟೆಯನ್ನು ಬಾರಿಸುವ ಗ
ಯಾದರೂ ತಗಡಿನೊಳಗೇ ಇರುತ್ತದೆ; ನೋಡಿರಿ—ಆ ಗ
ಯಿಂದ ಈಗ ಗಂಟೆಯನ್ನು ಬಾರಿಸಿ ನೋಡು; ಗಂ
ಸಪ್ಪಳವು ಕೇಳಿಸುತ್ತದೆ. ಇನ್ನು ಕೊಳವೆಯೊಳಗಿನ
ಯನ್ನು ಯಂತ್ರದಿಂದ ತೆಗೆದು, ಆ ಮೇಲೆ ಗಂಟೆಯನ್ನು
ರಿಸು. ಗಂಟೆಯ ನಾದವು ಕೇಳ ಬರುವದಿಲ್ಲ. ಆದರೆ ಗ
ಯು ಗಂಟೆಯನ್ನು ಬಾರಿಸುವದು ನಿಮಗೆ ಪ್ರತ್ಯಕ್ಷವಾಗಿ
ಣಿಸುತ್ತದೆ. ಹೀಗಾಗುವ ಕಾರಣವೇನೆಂದರೆ, ಒಳಗಿನ
ವೆಯು ಹೊರಟು ಹೋದದರಿಂದ ಗಂಟೆಯು ಕಂಪ
ತೆರೆಗಳು ಹುಟ್ಟಲಿಕ್ಕೆ ಸಾಧನವೇನು ಉಳಿಯಲಿಲ್ಲ. ತ
ಳೇ ಹುಟ್ಟಿದಿದ್ದ ಬಳಿಕ ಅವು ನಮ್ಮ ಕಿವಿಯೊಳಗೆ
ಲ್ಲಿಂದ ಸೇರುವವು? ಸಪ್ಪಳವಾದರೂ ಹ್ಯಾಗೆ ಕೇಳಿಸುವ

ಧ್ವನಿಯ ವೇಗವು——ತೋಫಿನ ಸಪ್ಪಳವನ್ನು ಸಾ
ರು ಕೇಳಿರ ಬಹುದು. ನಾವು ದೂರ ಇದ್ದರೆ, ತೋ
ಹಾರಿಸ ಕ್ಷಣವೇ ಅದರ ಸಪ್ಪಳವು ನಮಗೆ ಕೇಳಿಸುವದಿ

ಷ್ಟು ಅವಕಾಶವಾಗುತ್ತದೆ. ಇದರಿಂದ ಧ್ವನಿಯು ಪ್ರೇರಿ
ಸ್ಥಳದಿಂದ ಮತ್ತೊಂದಕ್ಕೆ ಹೋಗಲಿಕ್ಕೆ ಕೆಲವು ಅವ
ವು ಬೇಕಾಗುತ್ತದೆಂದು ತಿಳಿಯುತ್ತದೆ. ವಾತಾವರಣದೊ
ದ ತೋಫಿನ ಸಪ್ಪಳವು ಒಂದು ಸೇಕಂಡಿನೊಳಗೆ
ವಾರು ೧೧೪೦ ಫೂಟು ದೂರ ಹೋಗುತ್ತದೆ. ನೀವ
ಸ್ಥಳದಿಂದ ಒಂದು ಮೈಲಿನ ಮೇಲೆ ತೋಫು ಇ
, ಅದರ ಸಪ್ಪಳವು ನಿಮಗೆ ಕೇಳಿಸಲಿಕ್ಕೆ ಸುಮಾರು
ಷ್ಟವೇ ಸೇಕಂಡುಗಳು ಬೇಕಾಗುವವು. ಆಕಾಶದೊಳಗೆ
ಚು ಹೊಳಿದ ಬಳಿಕ ೫ ಸೇಕಂಡುಗಳ ನಂತರ ಗುಡು
ಸಪ್ಪಳವು ಕೇಳಿಸಿದರೆ, ಆ ಗುಡುಗು ಒಂದು ಮೈ
ಂತ ಸ್ವಲ್ಪ ದೂರಿನಿಂದ ಬಂತೆಂದು ತಿಳಿಯಬೇಕು.
ಧ್ವನಿಯು ಹವೆಯೊಳಗಿಂದ ಹೋಗುವಂತೆ ಬೇರೆ ಕೆಲ
ಪದಾರ್ಥಗಳೊಳಗಿಂದ ಹೋಗುತ್ತದೆ; ಆದರೆ ಅದರ
ಗ ಮಾತ್ರ ಹೆಚ್ಚು ಕಡಿಮೆಯಾಗುತ್ತದೆ. ಹವೆಗಿಂತ ನೀ
ಳಗೆ ಅದರ ವೇಗವು ನಾಲ್ಕು ಪಾಲು ಬೆಳೆಯುತ್ತದೆ;
ಣ, ಕಟ್ಟಿಗೆಗಳೊಳಗಿಂದಂತು ಅತಿ ತ್ವರೆಯಿಂದ ನಡೆ
ತ್ತದೆ. ಕೆಲವು ಕಟ್ಟಿಗೆಗಳೊಳಗಿಂದ ಅದು ಹವೆಯೊಳ
ವೇಗದ ೧೬ ಪಾಲಷ್ಟು ವೇಗದಿಂದ ಹೋಗುತ್ತದೆ.
ಪ್ರತಿಧ್ವನಿಯು—ಪದಾರ್ಥದಿಂದ ಧ್ವನಿಯ ತರಂಗವು ಹೊ
ು ಒಮ್ಮೆ ಸರಳಗತಿಯಿಂದ ನಮ್ಮ ಕಿವಿಯೊಳಗೆ ಸೇರುತ್ತದೆ.
ರೆ ಅದು ವರ್ತುಲಾಕಾರವಾಗಿ ಯೆಲ್ಲ ದಿಕ್ಕುಗಳಲ್ಲಿ ಹಬ್ಬುತ್ತ
ೇಗುತ್ತಿರಲಾಗಿ, ಮಾರ್ಗದಲ್ಲಿ ಗುಡ್ಡ, ಗೋಡೆ, ಮುಂತಾದವು
ಂಥ ಅಡ್ಡಿ ಯೇನಾದರೂ ಬಂದರೆ, ಅದರ ಮೇಲೆ ಅಪ್ಪಳಿಸಿ,
ಂದಿರುಗಿ ಯೆರಡನೇ ಸಾರಿ ಅದು ನಮ್ಮ ಕಿವಿಯೊಳಗೆ ಸೇರಿತೆಂ

ಡಕೆ ಮೊದಲಿನ ಸಪ್ಪಳವೇ ಯಾದರೂ ಕೇಳಿಸುತ್ತದೆ. ಆ
ರಡನೇ ಧ್ವನಿಗೆ ನಾವು ಪ್ರತಿ ಧ್ವನಿ ಯೆಂದನ್ನುತ್ತೇವೆ. ಗ
ಗುಡಿಗಳಲ್ಲಿ ಪ್ರತಿ ಧ್ವನಿಯು ಬಹು ಸ್ಪಷ್ಟವಾಗಿ ಕೇಳಿ ಬರುತ್

—o—

Notices.

नावकनंबर २९ नोटीस

दक्षिण भागांतील सर्व व्हरन्याक्यूलर स्कूल
स्तर भास देण्यांत एनेकी, व्हरन्याक्युलर शा
एणारे मुलांचे आई बाप किंवा पाळण कर
ज्या जिल्ह्यांत लोकल सेस देणार आहेत त्या जि
तील सरकारी शाळेंत त्या मुलां कडून दरम
८८६ अधी आणया प्रमाणें फी सिरस्त्या प्रमाणें
टीफिकोट हाजर केल्या नंतर घेत जावी. पर
ल्ह्यांत सेस देत आहेत परंतु ज्या जिल्ह्याचे श
त मुलें जातात त्या जिल्ह्यांत सेस देत नाहीत
त्यांचे मुलाकडून इतरा प्रमाणे फी घेत जा
तारीख १ मे सन १८७१ कानडी शाळापत्र
पान ५४ यांजवर दिलेली नोटीस यानोटिसीने
केली आहे. कळावे तारीख २० माहे डिसेंबर
१८७९ इसवी.

म. ए. इन्स्पेक्टर यांचे हुकमावरून

Vanayek Daji Behere.
हेड्क्लार्क

ನೋಟೀಸು (ನಂಬರ ೩೨)

ದಕ್ಷಿಣ ಭಾಗದೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—
ಎಜ್ಯುಕೇಶನಲ್ ಇನ್ಸ್ಪೆಕ್ಟರ ದಕ್ಷಿಣಭಾಗ ಇವರ ಕಡೆಯಿಂದ
ರಾ. ಶ್ರೀನಿವಾಸ ದೇಶಪಾಂಡೆ—ಪ್ರತಿ ಹಿಂದು ಶಾಲೆಯ ಮಾಸ್ತರನು
ನ್ನು ಶಾಲೆಯ "ವಿಜಿಟರ" ಬುಕ್ಕಿನಲ್ಲಿ ಇಂದು ಪೇ
ಯಾದಾವರು ಬಂದು ಬರೆಯುವ್ರು ಬರೆದ ಕೂಡಲೆ ಅದ
ಉತ್ತರವನ್ನು (ಇಂಗ್ಲಿಷ ಶಬ್ದ ಇದ್ದರೆ ಅದರ ಭಾಷಾಂ
ತರವನ್ನು ಹಾಗು ದೇಶಭಾಷೆಯಲ್ಲಿದ್ದರೆ ಅದರ ನಕಲನ್ನು)
ಸ್ಕೂಲಿಗೆ ರಾ. ಸಾ. ಡಿ. ಎ. ಇ. ಇವರ ಮುಖಾಂತರ ಕಳುಹಿಸ
ಬೇಕು. ಈ ಪ್ರಕಾರ ನಡೆಯದೆ ಇದ್ದ ಮಾಸ್ತರರಿಗೆ ತಕ್ಕ ಶಾ
ಸ್ತಿ ಮಾಡಲಾಗುವುದು. ತಾ. ೩೧ ಡಿಜಂಬರ ಸನ್ ೧೮೭೭
ಸಲ್ಲಿ ಬೆಳಗಾಂವ.

W. A. Russell
ಎ. ಇ. ದಕ್ಷಿಣಭಾಗ.

—o—

Correspondence
ಪತ್ರವ್ಯವಹಾರ.

ರಾ. ರಾ. ಶಾಲಾಪತ್ರ ಕರ್ತರಿಗೆ—

ಸ್ವಾ. ಎಡಿಟರ ರಾವಸಾಹೇಬರೇ! ತಮ್ಮ ಪ್ರಖ್ಯಾತವಾದ
ಮಾಸಿಕ ಪತ್ರಿಕೆಯಲ್ಲಿ ಈ ಕೆಳಗೆ ಬರೆದ ಸಾಲ್ಗಳಿ
ಗೆ ಸ್ಥಳ ಕೊಡುವಿರಾ?

ಕಳೆದ ನವಂಬರ ಡಿಸೆಂಬರ ಶಾಲಾಪತ್ರಿಕೆಯ ನಾ
೨೧೦–೨೧೧ರಲ್ಲಿ ಆಲಮೇಲ ಮಾಸ್ತರರು ಕೊಟ್ಟ ಪ್ರ
ಗಳ ಉತ್ತರಗಳನ್ನು ನನ್ನ ಬುದ್ಧಿಯಂತೆ ಬರೆದು ಕೊ

ದುವೆನು.

ಹೇ ಶೋಧಕರೇ! ಭಾಷೆ, ಲಿಪಿ, ವ್ಯಾಕರಣ ಮೊ
ದಲ್ಲಾಗಳನ್ನು ಕಂಡವರು ಬಹಳ ಪೂರ್ವಕಾಲದಲ್ಲಿ
ರು. ಆದರೆ ಲಿಪಿ ಕರ್ತರು ಉಚ್ಚಾರಗಳ ಮೇಲಿಂದ
ನಿರುಮಿಸಿದರು ಎಂಬ ವರ್ತಮಾನ, ಭೂತಕಾಲದ ಭಾಷಾ
ಗಳಿಂದಲೂ, ಪೂರ್ವಿಕರ ಐತಿಹಾಸಿಕ ಗ್ರಂಥಗಳಿಂ
ಬೋಧವಾಗುತ್ತದೆ. ಮುಖ್ಯವಾಗಿ ಭಾಷಾಪ್ರಾಂತ ಮೇ
ಕೇಳ್ಳುವ ವ್ಯಾಕರಣ ಗ್ರಂಥಗಳು ಭಾಷೆಯ
ತರವಾದಾಗ್ಯೂ ಅದಿ ಎಂಬ ವೈಯಾಕರಣೀಯ
ಮಾತು ರೂಢಿಯಲ್ಲಿ ಯೋಗ್ಯವೇ. ಅರ್ವಾಚೀನ (ಹೊ
ನ್ನಡ ವೆನ್ನಿಸಿಕೊಳ್ಳುವ) ಭಾಷೆಯಲ್ಲಿ ರಚಿಸಲ್ಪಟ್ಟ
ರಾದ ಸಂಕ್ಷೇಪ ಪುಸ್ತಕಗಳಲ್ಲಾದರೂ; ಗ್ರಂಥ ಕರ್ತ
ಕಾಲಾಂತರದಿಂದ ವ್ಯಾಕರಣ ಮುಂತಾದ ವಿದ್ಯಾ ಹೀ
ಶುದ್ಧ ಉಚ್ಚಾರಗಳಿಂದ ಭಾಷೆಯಲ್ಲಿ ವ್ಯತ್ಯಯವಾಗುತ್ತಿ
ದೆನ್ನುವನು. ಇತ್ತಲಾಗಿ ದಕ್ಷಿಣ ಮಹಾರಾಷ್ಟ್ರದಲ್ಲಿ
ಭಾಷಾ ಪ್ರಬಲವಿದ್ದಾಗ್ಯೂ ತನ್ನ ಮೂಲ ರೂಪವಾದ
ದಿಂದ ರೂಪವನ್ನು ವ್ಯಾಕರಣ ಅರಿಯದ ಜನರಿಂದ
ದುದ ಉಚ್ಚಾರಗಳಲ್ಲಿ ಬಹಳ ವ್ಯತ್ಯಯಗಳು ವ್ಯಾಕರಣ
ಬೋಧವಾಗಿ ತೋರುತ್ತಿರುತ್ತವೆ. ಆದಂತು ಸುಜ್ಞರು
ದ್ದ ಮುಂತಾದ ಬಸವಾದಿಯ ಗ್ರಂಥಗಳ ಕಡೆಗೆ ಲಕ್ಷ
ಅಂತ ಅಶುದ್ಧ ಉಚ್ಚಾರಗಳಿಗೆ ಧಿಕ್ಕರಿಸುವದೇ ಯೋ

ಉ. ಹಾಲಾ(ಹಾಲು) ಹಸರಾ (ಹಸರು) ಅನೆ
ಈ ಶಬ್ದಗಳಲ್ಲಿ ಮೊದಲನೇ ಹಾಲು ಈ ಶಬ್ದವು ಪಾಲ
ಬ ಮೂಲ ಹಳೆಗನ್ನಡ ಶಬ್ದದಿಂದ ಪ ಕಾರಕ್ಕೆ ಹೊಸಗ
ಲ್ಲಿ ಶುದ್ಧವಾಗಿ ಕಾರಣವಾಯಿತು. ಹಾಗು (ಲ್) ವ್ಯ

ಉಚ್ಚಾರಣದ ಶ್ರುತಿ ಕಷ್ಟ ತಪ್ಪಿಸುವುದಕ್ಕಾಗಿ ಪ್ರಥಮಾ ವಿಭ ಯು ರೂಪವಾದ (ಉ) ಸ್ವರವನ್ನು ಸೇರಿಸಿದರು. ಕಾರಣ ವು ಅದು ಪ್ರಕೃತಿಯಾಗಿಯೂ, ಪ್ರಥಮಾ ವಿಭಕ್ತಿಯಾ ಯೂ, ಸಿದ್ಧವಿದೆ. ಇದರಂತೆ ಮಸರು ಎಂಬ ಶಬ್ದವು ಸ್ಥವಿದೆ. ಈ ಶಬ್ದವು ಸಹ ಎಕಾರಾಂತ ಇದ್ದರೂ ಅಕಾ ರಾಂತವೆಂದು ವ್ಯಾಕರಣ ಮುಂತಾದ ಹಳೆಗ್ರಂಥಗಳನ್ನು ನೋಡಿ ದೆಯೂ, ಕನ್ನಡ ಭಾಷಾ ಭೇದ ಪೂರ್ಣ ಅನ್ನು ತಿಳಿಯ ದ ಮೂಢಜನರಿಂದ ಉಚ್ಚರಿಸಲ್ಪಟ್ಟಾಗ್ಯೂ ಎಕಾರಾಂತ ಶಬ್ದ ಳು ಇನ್ನು ಲಿಪಿಯಲ್ಲಿ ಅಕಾರಾಂತವಾಗಿ ಪ್ರಯೋಗಿಸಲ್ಪ ಡಲ್ಲ. ಎಂದು ವೇಳೆ ವಿದ್ಯಾ ಹೀನರಿಂದ ಉಚ್ಚರಿಸಲ್ಪಡು ವ ಇಂಥಾ ಕ್ಲಿಷ್ಟ ಅಪಶಬ್ದಗಳು ವ್ಯಾಕರಣ ಮುಂತಾದ ಮದಿಂದ ವಿದ್ಯೆ ಕಲಿಯದ ಜನರಿಂದ ಅಹಸರದ ಲಿಪಿ ಯಲ್ಲಿ ಬರಿಯಲ್ಪಟ್ಟಾಗ್ಯೂ ಅಂಥಾ ಶಬ್ದಗಳ ಕಡೆಗೆ ಪಾ ಕರ ದೃಷ್ಟಿ ನೋಡಲಸಂಯುಕ್ತ ನಡೆಯುತ್ತದೆ. ಇದರಂತೆ (ಕತ್ತ ಕತ್ತಿ), ಕರೆ (ಕರಿ), ಗೋಡೆ [ಗ್ವಾಡಿ], ಎವೆ (ಎವಿ), ಹಾಲ (ಹಾಲಿಗಿ), ಕುದುರೆ (ಕುದರಿ), ಮನೆ (ಮನಿ), ತಲೆ (ತ), ಜಡೆ (ಜಡಿ). ಇವೆ ಮುಂತಾದ ಎಕಾರಾಂತ ಶಬ್ದಗಳ

ಮೂಢ ಜನರು ಎಕಾರಾಂತ ಉಚ್ಚರಿಸದೆ ನಾನಾ ವಿಕಾರ ಗಳಿಂದ ಉಚ್ಚರಿಸುತ್ತಾರೆ. ಇದರಲ್ಲಿ ಗ್ರಂಥಾಧಾರದಿಂದ ಇರು ವ ಶಬ್ದಗಳನ್ನು ಅಪೂರ್ಣ ಚಿಹ್ನದ ಜೊತೆಗೆ ಬರೆದಂಥಾ ಶ ಗಳು ಶುದ್ಧ ವಿರುದ್ಧ ಕಾರಣ ಉಚ್ಚಾರಣದಲ್ಲಿಯೂ, ಲಿಪಿಯ ಯೂ, ಯೋಗ್ಯವಾಗಿರುತ್ತದೆ. ಕೆಲವು ಅದರಮೇಲ್ಲಿ ಅಕಾ ರ್ಪೊಂದಿರುವ ಶಬ್ದಗಳಿಗೆ ಅಂಥಾ ಆ ಸ್ವರವನ್ನು ದೀರ್ಘವಾ ಉಚ್ಚರಿಸುತ್ತಾರೆ, ಅರಸು (ಆರಸು), ಇದರಲ್ಲಿ ಅರಿಯ ತ್ರ

ನ್ನ ಸ್ವರವು ಉಚ್ಚಾರದಲ್ಲಿ ದೀರ್ಘಕ್ಕೆ ಪ್ರೋಯುತ್ತಾತೆ. ಜ್ಞರು ಅದನ್ನು ಹಾಗುಚ್ಚರಿಸಬಾರದೆಂದು ಹೇಳಿದ : ಲ್ಲಿ ದೀರ್ಘಕ್ಕೂ ಕಡಿಮೆ ಹ್ರಸ್ವಕ್ಕೂ ಹೆಚ್ಚು ಇವು ೧| ವತ್ತೆ ಉಚ್ಚರಿಸಬೇಕೆಂದು ಸಮಾಧಾನ ಹೇಳುವವರ ತು ಕೇವಲ ಅಭ್ಯಾಸ್ಯವಾದ್ದರಿಂದ ಜನರು ಅದಿಯು : ೯ ಇದು ಕ್ರಮ ಪ್ರವೃತ್ತಿಸುವದು ಶೀಕ್ಷಕರ ಕರ್ತವ್ಯವದೆ.

ರಾಮಣ್ಣನ ಮಗನನ್ನು ತಿಮ್ಮಪ್ಪಗೆ ಕೊಟ್ಟಿತ್ತು. ಇ ದಲ್ಲಿ ಕ್ರಿಯಾಪದ ಪೂರ್ಣವಾಗಲಿಲ್ಲ. ಭೂತ ನ್ಯೂನ ನಪುಂಸಕ ಲಿಂಗ ವಿಟ್ಟಿದರಿಂದ ಇದು ತಪ್ಪಿರಬಹುದು. ವಾ ಈ ವಾಕ್ಯ ಬರೆದವನ ಉದ್ದೇಶ ಇನ್ನೊಂದು ಸಮುಚ್ಚ ಕಾಣ್ಯಂದು ಪುಟ್ಟ ವಾಕ್ಯ ಪೂರ್ಣಮಾಡತಕ್ಕದಿರಬಹ ಕಾರಣ ಪ್ರೊಚಿತ ಮಾಡಿದ ವಿನಹಾ ಕರ್ತಾ ಕರ್ಮ ಪ್ರ ಗ ಹೇಳಲಾಗದು ಪತ್ರ ವಿಸ್ತಾರಕ್ಕೆ ಎಡಿಟರ ರಾವಸಾಹೆ ಕ್ಷಮಾ ಕೊಡುವಿರೆಂದು ನಂಬುತ್ತೇನೆ.

ತಾ. ೩೦ನೇ ಅಕ್ಟೋಂಬರ ೧೮೭೯ } ನಾರಾಯಣ ಮಂಜ
ಚಂದಾವರ } ಉಭಯಕರ ವಿದ್

ಶಾಲಾ ಚಂದಾವರ ತಾ
ಹೊನ್ನಾವರ ಜಿಲ್ಲಾ ಕ

ರಾ. ರಾ. ಕನ್ನಡ ಶಾಲಾಪತ್ರ ಕರ್ತರಿಗೆ

ವಿ. ವಿ. ತಮ್ಮ ಕರಂಗಳಲ್ಲಿ ಉದ್ಭವಿಸುವ ಸು ಮಾನ ಶಾಲಾಪತ್ರಕವು ಸರ್ವರಿಗೂ ಆಶ್ರಯ ಭರಿತ ರುವದಕ್ಕೆ. ಆದರೆ,—ಕೆಳಗೆ ಬರೆದ ನಾಲ್ಕು ಪಂಕ್ತಿ ಪತ್ರಿಕೆಯಲ್ಲಿ ಛಾಪಿಸಿ ಪ್ರಸಿದ್ಧಿಸುವಿರೆಂದು ಆಶೆಗೈಯುತ್ತೆ

ವಿದ್ಯಾಭಿವೃದ್ಧಿಗೂ, ಸ್ತ್ರೀ ಶಿಕ್ಷಣಕ್ಕೂ, ಉತ್ತೇಜನವು.

ಹುಬ್ಬಳ್ಳೀ ಸಾಲೆಗಳ ವಾರ್ಷಿಕ ಪರೀಕ್ಷೆದ ಬಕ್ಷೀಸಿನ

—ಸಮಾರಂಭವು—

ಈ ಸಮಾರಂಭವು—ರಾವಸಾ. ಅ. ಬಿ. ಇ. ಇನಸ್ಪೇಕ್ಟರ
್ಟು ಧಾರವಾಡ ಇವರ ಸಹಾಸದಿಂದಲೂ ಅತಿ ಪ್ರೇಮ
ದಲೂ ತಾ. ೨೭—೧೧—೭೯ ಇ. ಇಲ್ಲಿಯ ಮಸ್ಕಾಗ್ರೇಡ
ಗ್ಲೋಹ್ವರ್ನಕ್ಯೂಲರ ಸಾಲೀಯಲ್ಲಿ ಆಯಿತು. ಆಗ್ಗೆ ಇ
ಯ ಎಲ್ಲಾ ಸಾಲೆಗಳ ಅಭ್ಯಾಸಿಗಳೆಂದರೆ. (೫೦೦) ಗಂ
ಮಕ್ಕಳೂ, (೧೫೦) ಹೆಂಣು ಮಕ್ಕಳೂ, ಅಲ್ಲದೆ ಈ ಸ
ರಂಭಕ್ಕೆ ದೊಡ್ಡ ದೊಡ್ಡ ಅಧಿಕಾರಸ್ಥರೂ, ವಕೀಲರೂ,
್ನಿಲ ಕಮಿಟಿದಾರರೂ, ಶೆಟ್ಟಿ ಸಾವ್ರುಕಾರರೂ, ಬಂದಿದ್ದರು.
ಧ್ಯಕ್ಷಸ್ಥಾನವನ್ನು ಮೆ. ಡಾಕ್ತರ ಸಾ. ರವರು ವಹಿಸಿದ್ದರು.
೨ನೇ ನಂಬರ ಹೆಂಣು ಮಕ್ಕಳ ಸಾಲೆಗಳ ವಿದ್ಯಾರ್ಥಿಗಳ
ಯಿಂದ ಕವಿತೆಯನ್ನು ಅನ್ನಿಸಿ ಕೊಂಡು, ವಾಚನ, ಅ
, ಆದ ಬಳಿಕ, ರಾವಸಾ. ಅ. ದಿಪ್ರಾಟಿಯವರು—"ವಿ
್ಯ ಮಲಿಯುವಿಕೆಯಿಂದಲೂ, ಬಕ್ಷೀಸಿನಿಂದಲೂ, ಸ್ತ್ರೀ ಶಿಕ್ಷ
ದಿಂದಲೂ, ಅಭ್ಯಾಸಿಗಳಿಗೆ ಆಗತಕ್ಕ ಲಾಭಗಳ ವಿಷಯವಾ
ಹೆಂಣು ಮಕ್ಕಳಿಗೆ ವಿದ್ಯ ಕಲಿಸುವ ಉತ್ತೇಜನದ ವಿಷ
ವಾಗಿ ಸರಸವಾದ ನಿಬಂಧಗಳನ್ನೂ ಆಯಾಯ ಸಾಲೆಗಳ
ರ್ಷೀಕ ಪರೀಕ್ಷೆದ ಸ್ಥಿತಿ ಗತಿ ಪರಿಣಾಮಗಳನ್ನೂ, ಸರ್ವ
ತಮ್ಮ ತಮ್ಮ ಉದ್ಯೋಗವನ್ನು ನಿಲ್ಲಿಸಿ ಈ ಸಭೆಕ್ಕೆ
ದ ಬಗ್ಗೆ ಅವರ ಉಪಕಾರವನ್ನೂ," ಹೊಗಳಿದರು.
ಸುಬ್ಬರಾವಜಿ ಜೇಹಟ್ಟಿ ವಕೀಲ ಇವರು—"ಇಂಥಾ ಸ
ರಂಭವನ್ನು ೮।೧೦ ವರುಷದಾರಭ್ಯ ನಾವು ಕಂಡಿದ್ದಿಲ್ಲಾ

ಆದರೆ, ಈ ಹೊತ್ತಿನ ದಿವಸಾ ಅ. ದಿಪೋಟಿಗಳಾದ ಶ್ರೀ ವಾಮನರಾವ ರೊಡ್ಡ ಇವರ ಶ್ರಮದಿಂದ ಈ ಅಮೋಲ್ಯವಾದ ಚಮತ್ಕಾರವು ಸರ್ವರ ದೃಷ್ಟಿಗೋಚರವಾದದರಿಂದ ಸರ್ವ ಜನರ ಉಪಕಾರವನ್ನು ನೆನಿಸುವದು ಯೋಗ್ಯವು,, ಮು ತಾದ ಎಷ್ಟೋ ಅವರ ಸ್ತುತ್ಯವಾದ ಕಾರ್ಯಗಳ ಸಾರಾಂಶ ಮಾಡಿದರು.

ತದನಂತರಾ ಮೇಲಿನ ಸಭಾಸದರ ಜನರಲ್ಲಿ "ವಿದ್ಯಾ ಭಿವೃದ್ಧಿಗೂ, ಸ್ತ್ರೀ ಶಿಕ್ಷಣಕ್ಕೂ,, ಉತ್ತೇಜನಾರ್ಥವಾಗಿ (ಷ್ಟೋ ಜನರು ವರ್ಗಣಿ ಕೊಟ್ಟರು. ಆ ಸದ್ಗೃಹಸ್ಥರ ಹ ರು ಪ್ರಸಿದ್ಧಿಸುವದು ಉಚಿತವಾದ ಸಂಗತಿಯೇ ಸರಿ. ದದರಿಂದ ಅವರ ನಾಮಾಂಕಿತಗಳನ್ನೂ, ಕೊಟ್ಟ ರಕಮ ಗಳನ್ನೂ, ಕೆಳಗೆ ಪಟ್ಟಿಯಲ್ಲಿ ಬರೆಯುತ್ತೇನೆ.

ನಂಬರು	ಹೆಸರು.	ರಕಮು.		
		ರೂ.	ಅ.	ಪೈ
೧	ಜೆ. ಡಾಕ್ಟರ ಸಾ.	೫	೦	[illegible]
೨	ಸಬ್ಬರಾವಜಿ ಬೇಹಟ್ಟಿ ವಕೀಲ	೫	೦	[illegible]
೩	ಬಸಪ್ಪಾ ಕುಬ್ಸಳ್ಳಿ.	೫	೦	[illegible]
೪	ಬೆಳಗಾವಿ ನಿಟ್ಟೂರ ದೇವರು.	೩	೦	೦
೫	ಚನ್ನಬಸಯ್ಯಾಸ್ವಾಮಿ ಗುಳ್ಳಿಗಡ್ಡಿ	೧	೦	೦
೬	ಗಂಗಯ್ಯಾ ಚಿಕ್ಕವೀರಯ್ಯನವರ.	೧	೦	೦
೭	ಭೀಮಪ್ಪಣ್ಣಾ ಕೋಣಿ.	೨	೦	೦
೮	ಪಾಂಡುರಂಗರಾವ ವಕೀಲ.	೧	೦	೦
೯	ಮಾನಪ್ಪಣ್ಣಾ ಶಿವಟಿ.	೧	೦	೦
೧೦	ಪುಟ್ಟಪ್ಪಣ್ಣಾ ಬದ್ದಿ.	೧	೦	೦

ಚನವೀರಪ್ಪಂಗಳವರು ಬೆಂಡಿಗೇರಿ.

ಶಿರಸಪ್ಪಂಗಳವರು ಪ್ರಥಮಶೆಟ್ಟಿ.

ಹುಬ್ಬಳ್ಳೀ ಕಂಪನಿಯಿಂದ ಹಸ್ತೆ

ಹಣಮಂತರಾವ ನರೇಂದ್ರ.	೫	೦	೦
ವಿರಪ್ಪಾ ವಕೀಲ.	೦	೮	೦
ವೆಂಕಟರಾವ ವಕೀಲ.	೦	೮	೧
ಗಂಗಾಧರಪ್ಪಂಗಳವರು ಬೆಂಗೇನವರ.	೧	೮	೦
ಮುಖ್ತುಮ ಸಾ. ಪಡ್ಡೂನವರ.	೧	೮	೦

ಈ ಪ್ರಕಾರ ಕೂಡಿದ ವರ್ಗಣಿ ಹಣದಿಂದ ಯಾವತ್ತು ಮಕ್ಕಳಿಗೆ ಖಣಗಳನ್ನೂ, ಪುಸ್ತಕಗಳನ್ನೂ, ಗಂಡು ಮಕ್ಕ ಅವರವರ ಪರೀಕ್ಷದ ಗುಣಗಳ ಮೇರೆಂದ ಕೆಲವರಿಗೆ ಸ್ತಕಗಳನ್ನೂ, ಸರ್ವರಿಗೂ ಮಿಠಾಯಿಯನ್ನೂ, ಅಧ್ಯಕ್ಷರು ಸ್ತದಿಂದ ಬಕ್ಷೀಸು ಕೊಟ್ಟರು.

* ಈ ಉದಾರ ಗೃಹಸ್ಥರಲ್ಲಿ ಹೊಸಲನೇಯವರು ಯ ೧೨ನೇ ನಂಬರ ಹೆಂಣು ಮಕ್ಕಳ ಸಾಲೆಯ ಹಿ ಬ್ಬ ಹುಡುಗಿಗೆ ಒಂದೊಂದು ಶೀರಿ, ಬಕ್ಷೀಸು ಕೊಟ್ಟ ೨ನೇ ಯವರು ಹಳೆ ಹುಬ್ಬಳ್ಳೀ ಸಾಲೆಯ ಪಾಸಾದ ಹೆಂಣು ಮಕ್ಕಳಿಗೆ ೮ ಖಣಗಳನ್ನು ಬಕ್ಷೀಸು ಕೊ

* ಬಕ್ಷೀಸಗಳನ್ನು ಪಡಕೊಂಡು ಉತ್ತೇಜಿತರಾದ ಉಪಕಾ ನ್ನು ಹೊಂದಿದ ಅಭ್ಯಾಸಿಗಳೂ, ಇವರ ಆಶ್ರಯವನ್ನು ಂದಿದ ಮಾಸ್ತರಾಧಿಕಾರಸ್ಥರೂ, ಮೇಲೆ ಬರೆದ ಕಂಗಾ ರಾದ ಯಾವತ್ತು ಜನರ ಕಲ್ಯಾಣಕ್ಕೋಸ್ಕರ ದೇವರ ಪ್ರಾರ್ಥಿಸುವರು ಅವರ ಧರ್ಮಶೇಸರಿ.

ಆದರೆ, ಈ ಹೊ ಸಾಹಸಿಗಳಾದ ಪ್ರಿಯಬೋಧಕರೇ ಅ
ವಾಪರಾಪ ರೊಷ್ಟಿಬೋಧಿಸುವದು ನಿಮ್ಮ ಕರ್ತವ್ಯವೇ. ಅದ
ಮುತ್ಸ್ರ ಉದ್ಯೋಗದ ಕೈವಾರವನ್ನು ಸಹಾ ತೆಗೆದುಕೊಂ
ಆಷ್ಟಾ ಪತ್ರಗಳು ಛಾಪಿಸಲ್ಪಟ್ಟ ಪತ್ರಗಳನ್ನು ನಿಂವು
ರೊಳಗಿನ ಸರಕಾರೀ ಅಧಿಕಾರಸ್ಥರಿಗೂ, ಇತರ ಜನರಿಗ
ತೋರಿಸಿ ಓದಲಿಕ್ಕೆ ಬಾರದವರಿಗೆ ನೀವೆ ಓದಿ ಹೇಳುವ ಶ್ರ
ಗೆದು ಕೊಂಡು ಇಂಥಾ ಸನ್ಮಾರ್ಗದಲ್ಲಿ ಸರ್ವರನ್ನು ಪ
ಸುವಲ್ಲಿ ನಿಮ್ಮಂದಾನವನ್ನು ... ಬೇಕೆಂದು ಬೈಸುತ್ತೇ

ಪತ್ರಿಕರ್ತರ ಡಾಯರೇ–ಪುಸ್ತಕದಿಸ್ತಾರದ ಬಗ್ಗೆ ನೃವಿಟ್ಟ
ಮಾಡಬೇಕೆಂದೂ, ಅದರಲ್ಲಿ ಅದ ತಪ್ಪುಗಳನ್ನು ತಿದ್ದಿ ಛಾಪಿ
ಪಬೇಕೆಂದೂ, ಬೇಡಿಕೊಂಡು ಪತ್ರವನ್ನು ಮುಗಿಸುವದಕ್ಕೆ ತ
ಅಪ್ಪಣೆಯನ್ನು ಪಡೆಕೊಳ್ಳುತ್ತೇನೆ. ಲೋಭದ ವೃದ್ಧಿ ಅ
ಬೇಕು. ಇಂತಿ ವಿ.

ತಾ. ೭–೧೨–೭೯

ಹುಬ್ಬಳ್ಳಿ ಹೆಂಗ. ಮಕ್ಕಳ ಶಾಲೆ ನ. ೨

ಹನುಮಂತ ಭೀಮರಾ
(ಧಾರವಾಡ) ಹೆಡ್ ಮಾ
ಸ್ತ್ರೀ ಹೆಂಗಸು ಮು. ಶಾ
ಹ, ನ. ೨

—೦—